UNIVERSAL LIBRARY
OU_198283
UNIVERSAL LIBRARY

# ಕಲ್ಕಿ

( ಪ್ರಮೇಯ ೧-೨ )

ರಮಾಕಾಂತ

೧೯೩೪

ಸಾಹಿತ್ಯ ಪ್ರಕಟನ ಮಂದಿರ
ಧಾರವಾಡ

ಪ್ರಕಾಶಕರು :
ಗೋವಿಂದ ವೆಂಕಟೇಶ ಜುಳಕಿ
ಸಾಧನಕೇರಿ, ಧಾರವಾಡ

ಬೆಲೆ ರು. ೦—೧೦—೦

ಮುದ್ರಕರು :
ಖಂಡೋ ರಾಮಚಂದ್ರ ಭಿಸೆ
ಕರ್ನಾಟಕ ಪ್ರಿಂಟಿಂಗ ವರ್ಕ್ಸ
ಧಾರವಾಡ

*

# ಮುನ್ನುಡಿ

## ಜಗತ್ತಿನ ಗತಿ

"The end of war is the beginning of new idea"-ಯುದ್ಧದ ಪರಿಸಮಾಪ್ತಿ ಹೊಸ ವಿಚಾರದ ಹುಟ್ಟು- ಎಂಬ ನುಡಿಯು, ಹುಸಿಯಲ್ಲ ವೆಂದು ಇಪ್ಪತ್ತನೇ ಶತಮಾನದ ಜನಗಳಿಗೆ ಮನವರಿಕೆಯಾಗಿ, ಆಚಾರ ವಿಚಾರಗಳಲ್ಲಿಯೂ ಹೊಮ್ಮಿ ನವಚೈತನ್ಯವನ್ನುಂಟು ಮಾಡಿರುವದು. ಈ ನವಚೈತನ್ಯಕ್ಕೆ ಮಹಾಯುದ್ಧವೇ ಕಾರಣವು. ಕೌರವ ಪಾಂಡವ ರಲ್ಲಿ ಕುರುಕ್ಷೇತ್ರದಲ್ಲಿ ಜರುಗಿದ ಮಹಾಯುದ್ಧವು ಭಗವದ್ಗೀತೆಯನ್ನು ಜನಸಾಮಾನ್ಯಕ್ಕೆ ನೀಡಿ ಅವರ ಜೀವನದಲ್ಲಿ ಹೊಸ ಕ್ರಾಂತಿಯನ್ನು ಹುಟ್ಟಿ ಸಿದಂತೆ ಈ ಮಹಾಯುದ್ಧವೂ ನವಚೈತನ್ಯಕ್ಕೆ ಕಾರಣವೆಂದು ಕೆಲವರಭಿ ಪ್ರಾಯ. ಈ ನವಚೈತನ್ಯದ ಬಿರುಗಾಳಿಗೆ ಸಿಲುಕಿ ಜಗತ್ತು ಹೋರ್ರ್ಯಾ ಡುತ್ತಿರುವದು. ಜನಗಳಲ್ಲಿ ವಿಚಾರ ಕ್ರಾಂತಿ ; ಆಚಾರದಲ್ಲಿ ನಿರುತ್ಸಾಹ ಕ್ರಾಂತಿ , ರಾಷ್ಟ್ರಗಳಲ್ಲಿ ರಾಜ್ಯಕ್ರಾಂತಿ ; ಸರ್ವತೋಮುಖವಾಗಿ ಕ್ರಾಂತಿ ಸುಳಿಯುತ್ತಿರುವದು. ಈ ಶಕ್ತಿ ಸಾವಿರಾರು ಮುಖದಿಂದ ಹರಿದು ಉಕ್ಕೇರಿ ಜಗತ್ತನ್ನು ಹೊಯ್ದಾಡಿಸುತ್ತಿರುವದು. ಒಂದೆಡೆಗೆ ಆರ್ಥಿಕ ಸ್ವರೂಪವನ್ನು ತಾಳಿ ರಾಷ್ಟ್ರ ರಾಷ್ಟ್ರಗಳನ್ನು " ಜಗತ್ತಿನಲ್ಲಿ ಬಾಳುವದು ಶಕ್ತಿವಂತರದು " ಎಂಬೀ ತಿಕ್ಕಾಟದಲ್ಲಿ ಸಿಲುಕಿಸಿ ಆರ್ಭಟದಿಂದ ಉಕ್ಕೇ ರುತ್ತಿರುವದು ; ನನ್ನದವತಾರ ಮತ್ತೊಂದೆಡೆಗೆ ವೈಜ್ಞಾನಿಕ ಯುಗವು ಜನ ಜಂಗುಳಿಗೆ ಕಾಣಲಸಾಧ್ಯವಾದದ್ದನ್ನು ತೋರಿಸುವೆ, ಮಾಡಲಶಕ್ಯ ವಾದದ್ದನ್ನು ಮಾಡಿಸುವೆ-ಎಂಬೀ ಭಾವದಿಂದ ಬ್ರಹ್ಮಾಂಡದ ಮೇರೆ ಗಳಾದ ಕೆಂಪು, ನೀಲ, ಕಪ್ಪು, ಶ್ವೇತ ಸಮುದ್ರಗಳ ತೀರದಲ್ಲಿ ಕಾಳಭೈರವ ರೂಪವನ್ನು ತಾಳಿ ಕುಣಿಯುತ್ತಿರುವದು ; ಕೂಗಾಡುತ್ತಿರುವದು.

ಸಾಮ್ಯವಾದವು ಈಕ್ರಾಂತಿಯ ಪ್ರಾದುರ್ಭಾವವೆಂದು ಅನ್ನಬಹುದು. ಸಾಮ್ಯವಾದದ ಕಡೆಗೆ ಜಗತ್ತು ಓಡುತ್ತಿರುವದು. "The movement

towards socialism is one of the most characteristic of the present times.'' ಎಂದು Prof J S.Mackenzie ಯವರು ನುಡಿದದ್ದು ಸುಳ್ಳಲ್ಲ. ಮುಂದಿನ ಇತಿಹಾಸಕಾರನು ಇಪ್ಪತ್ತನೇ ಶತಮಾನವು ಸಾಮ್ಯವಾದದ ಯುಗವೆಂದು ಕರೆದರೂ ಕರೆಯಬಹುದು.* ಪಶ್ಚಿಮದಲ್ಲಿ ಇದರ ಕೂಗು ; ಪೂರ್ವದಲ್ಲಿ ಇದರ ಕೂಗು ; ಎಲ್ಲ ಕಡೆಯಲ್ಲಿಯೂ ಇದರ ಕೂಗು.

ಜಗತ್ತಿನ ಸಾಂಪ್ರತದ ಸಮಸ್ಯೆ ಸಾಮ್ಯವಾದ. ಎಷ್ಟೋ ಜನರು ಇದನ್ನು ತಮ್ಮ ಧರ್ಮವೆಂದು ತಿಳಿದುಕೊಂಡಿರುವರು. ಧರ್ಮವೆಂದೊಡನೆ [R] ಕೆಲವರ ತಲೆ ತಿರುಗಿ ಕುಣಿದಾಡಿ ಹಾಡಿ ನಲಿಯುವಂತೆ ಕೆಲವರು ಈ ಸಾಮ್ಯವಾದವೆಂದೊಡನೆ ಉತ್ಸಾಹದಿಂದ ನಲಿದಾಡುವರು. ಇಷ್ಟು ಶಕ್ತಿ ಸಾಮ್ಯವಾದದಲ್ಲಿ. ರಸ್ಯದೇಶದವರು ಇದರ ಪುರಸ್ಕರ್ತರೆಂದು ಅನ್ನಬಹುದು. ಅವರು ಲಕ್ಷಾಂತರ ಪೌಂಡುಗಳನ್ನು ಇದರ ಪ್ರಚಾರಕ್ಕಾಗಿ ವೆಚ್ಚಮಾಡಿದರು ,[Z] ಮಾಡುತ್ತಿರುವರು.

---

* "Socialism is the key-word of the day The socialist idea at the present moment dominates the mind of men. The masses hang upon it, it engrosses the mind, the thoughts and feelings of every one, it gives to the age its distinctive character. History, over that section, in which it treats of the period, wherein we are living, will place the words 'the era of socialism ' "

Misses L.

R " Socialism has become a religion to many " Ely R. T " Socialism. "

Z. " In December 1920 the British Govt. made it known that £. 23,000 a week was coming in from Russia The socialists are spending not less than £ 200,000, per annum on their propoganda and they are holding something like 1000 meetings a week in all parts of Great Britain "

Sir W Joyason Hicks
Morning Post. 24thJuly, 1924

# ಸಾಮ್ಯ-ವಾದ

ಇದು ಪಶ್ಚಿಮ ದೇಶದಲ್ಲಿ ಹುಟ್ಟಿ ಬೆಳೆದ ವಿಚಾರ, ಪೂರ್ವ ದೇಶಗಳಲ್ಲಿ ಈಗ ತಾನೇ ನೆಲಿಸಬೇಕೆಂಬ ಹವಣಿಕೆಯಲ್ಲಿದೆ. ಕಾರ್ಲ ಮಾರ್ಕ್ಸರು ಈ ವಾದದ ಉತ್ಪಾದಕರು. ಕಲ್ಪನಾದ್ವೀಪಗಳ ನಿರ್ಮಿತರಿಗಿಂತ ಈತನದು ಒಂದು ಹೆಜ್ಜೆ ಮುಂದೆ. Sir Thomas More, Johann Andreae, Bacon, Thomaso Campanella, ಹಾಗೂ Sir James Harrington ಇವರೆಲ್ಲರೂ ಕಲ್ಪನೆಯ ಓಘಕ್ಕೆ ಸಿಲುಕಿ ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳನ್ನು ಕನಸಿನ ರಾಜ್ಯಕ್ಕೆ ಸರಿ ಹೋಗುವಂತೆ ನಿರ್ಮಿಸಿರುವರು. Thomas More ಇವರು Utopia ದಲ್ಲಿ ಕನಸಿನಮುಂಡಿಗೆಯಲ್ಲಿ—Antwerp ಪಟ್ಟಣದಲ್ಲಿಯ ಉದ್ಯಾನದಲ್ಲಿ ತಮ್ಮ ನಡುವೆ ಬೆಲ್ಜಮದ ನಿವಾಸಿಯಾದ ಪೀಟರಗಿಲೇಸ ಹಾಗೂ ಪೊರ್ತುಗೀಜ ರಾಫೇಲ ಇವರ ನಡುವೆ ನಡೆದ ಸಂಭಾಷಣದಲ್ಲಿ ಸಾಮ್ಯವಾದವನ್ನು ಪ್ರಚಾರ ಮಾಡಿದರು. ಈ ಕನಸಿನಮುಂಡಿಗೆ ಹುಟ್ಟಿದ್ದು ೧೫೧೬ನೇ ಇಸ್ವಿಯಲ್ಲಿ. ಸನ್ನ ೧೬೧೯ನೇ ಇಸ್ವಿಯಲ್ಲಿ Christianopolies, ೧೬೨೭ನೇ ಇಸ್ವಿಯ "ಹೊಸ ಜಗತ್ತು"—New Atlantis, ೧೬೩೭ನೇ ಇಸ್ವಿಯ '' ಸೋಮ ಪಟ್ಟಣ, ಹಾಗೂ ೧೬೫೬ನೇ ಇಸ್ವಿಯ ಸಮುದ್ರ" ಎಂಬೀ ಹೊತ್ತಿಗೆಗಳೆಲ್ಲವು ಸಾಮ್ಯವಾದದ ಸಮಸ್ಯೆಯನ್ನು ಜಗತ್ತಿನ ಮುಂದಿಟ್ಟವು.

ಇವೆಲ್ಲವುಗಳು ಕಲ್ಪನಾ ತರಂಗಗಳಲ್ಲಿ ಸಿಲುಕಿ ಉದ್ಭವಿಸಿದವುಗಳು. ಮೇಲಿನ ಸಾಮ್ಯವಾದದ ಪುರಸ್ಕರ್ತರು ತಮ್ಮ ವಿಚಾರಗಳನ್ನೆಲ್ಲ ಕಲ್ಪನಾ ಸಾಮ್ರಾಜ್ಯದಲ್ಲೇಕೆ ನಿರ್ಮಿಸಿದರು ಎಂಬೀ ವಿಚಾರ ಪ್ರತಿಯೊಬ್ಬನಿಗೂ ಹೊಳೆಯಬಹುದು. Prof. Hearnshaw ಇವರು "Survey of Socialism" ದಲ್ಲಿ ಅನ್ನುವಂತೆ "The answer is probably that to do so in any other way was too perilous" ಎಂದು ನಾವೂ ಅನ್ನಬೇಕಾಗುವದು.

ಕೆಲವರು ಈ ಸೃಷ್ಟಿಸಾಮ್ರಾಜ್ಯ ನಿರ್ಮಾಣಕರು ಅನೀತಿಗಳೂ, ಅಶಿಕ್ಷಿತರೂ ಹೇಯ ಮಾನಸಿಗಳೂ ಎಂದು ಕರೆಯುವರು.[M] ಮತ್ತೆ ಕೆಲವರು ಇವರು ಸಂಕೃಷ್ಟಿ ಇತಿಹಾಸದಲ್ಲಿ ಪ್ರಾಮುಖ್ಯ ಪುರುಷರೆಂದು ಕರೆಯುವರು.[R] ಸಮಾಜದಲ್ಲಿ ಕ್ರಾಂತಿ ಘಟಿಸಬೇಕೆಂದು ತಮ್ಮ ವಿಚಾರಗಳು ಕಲ್ಪನಾಸೃಷ್ಟಿಯಲ್ಲಿ ಮಂಡಿಸಿ ಹೆಣಗಾಡಿದ ಅವರ ವಾದ ವಾದರೂ ಏನು ? ಅದರ ಅಂಗಗಳಾವು ಎಂಬೀ ವಿಚಾರಗಳು ಕಣ್ಣೆದುರಿಗೆ ಬಂದು ನಿಲ್ಲುವವು.

ಪಾಶ್ಚಾತ್ಯ ಪಂಡಿತರು ತಮಗನುಚಿತವಾಗುವಂತೆ ಸಮತಾ ವಾದದರ್ಥವನ್ನು ವಿಶದಪಡಿಸಿರುತ್ತಾರೆ.

"Socialism is that form of society which will permit the establishment of Kingdom of Heaven on earth" ಇದು H. C. Charleton ಇವರ ವ್ಯಾಖ್ಯೆ. ಉಪಮಾನೋಪಮೇಯಗಳಿಂದ ತುಂಬಿ ತುಳುಕುತ್ತಿರುವದು. ನಶ್ವರ ಜಗತ್ತಿನಲ್ಲಿ ಈಶ್ವರ ರಾಜ್ಯವನ್ನು ನೆಲಿಯಿಸುವದೇ ಸಾಮ್ಯವಾದದ ಲಕ್ಷಣವೆಂಬುದೇ ಅವರ ಅಭಿಪ್ರಾಯ. ಈ ಮೇಲಿನ ಲಕ್ಷಣವು ನಮ್ಮ ಪಕ್ಷವೆಂದು ಹಿಡಿದುಕೊಂಡರೆ ಸಾಮ್ಯ ವಾದವೆಂದೇ ಇದನ್ನು ಮಾಡಬಲ್ಲದೇ ಎಂಬೀ ವಿಚಾರ ಸಾಮಾನ್ಯ ಮನು ಷ್ಯನಲ್ಲಿಯೂ ಕೂಡ ತಕ್ಷಣ ಬರುವದು. ಮತ್ತಾವದಾದರೊಂದು ವಿಚಾರ, ಜನತೆಯು ಹೊಸ ಹುಟ್ಟಾಗಿ ಅವರ ನಡೆಯಲ್ಲಿ ಆವಿರ್ಭವಿಸಿ ನಶ್ವರ ಜಗತ್ತಿನಲ್ಲಿ ಈಶ್ವರ ರಾಜ್ಯವನ್ನು ಸ್ಥಾಪಿಸುವ ಜನಾಂಗವನ್ನು ನಿರ್ಮಿ ಸಿದರೆ ಅದಕ್ಕೆ ಸಾಮ್ಯವಾದವೆನ್ನಬೇಕೋ ಎಂಬುದು ಸಮಸ್ಯೆ ನಮ್ಮೆದು ರಿಗೆ ನಿಲ್ಲುವದು. ಇದನ್ನೇ ಸಾಮ್ಯವಾದದ ಪ್ರಮೇಯವೆಂದಿಟ್ಟು ಕೊಂಡರೆ ತರ್ಕಿಸಬಹುದದ್ದಾದರೂ ಏನು ?

---

M "They were the fruits of diseased minds, defective education, depraved morals". J. D. Hertzters, "History of Utopian thought". 1923

R "Greatest figures in the history of Communism" M Beer, History of British Socialism. Vol. I. P, 32. 1919

ದುಃಖವನ್ನು ದೂಡಿ ಸುಖದಿಂದ ಬಾಳುವೆಯನ್ನು ಬೆಳೆಸಬೇಕೆಂಬುದು ಮಾನವನ ನಿಜ ಸ್ವಭಾವ. ಸುಖವು ಅಮೃತಸಮಾನವೆಂದು ಮಾನವರ ನಿಚ್ಚಳವಾದ ನಂಬಿಗೆ. ಸಾಮ್ಯವಾದವು ಸುಖ ಶಾಂತಿಗಳ ನೆಲವೀಡು ಎಂಬ ಸಿದ್ಧಾಂತವಾದರೆ ಸಕಲ ಚರಾಚರ ಪ್ರಾಣಿಗಳು ಸಾಮ್ಯವಾದವನ್ನು ಕೂಗುತ್ತಿದ್ದವು. ಈ ವಾದಕ್ಕೆ ಹೊಗುಳುವದರಷ್ಟೇ ದೂಷಕರಿರುವರು. ಹೀಗೇಕೆ ಎಂಬೀ ವಿಚಾರ ಉದ್ಭವಿಸುವದು. ಇವಕ್ಕೆ ಕೆಲವರುತ್ತರವು "ಹೊಸ ವಿಚಾರಕ್ಕೆ ತಡೆ ಹಾಯುವವರು ಬಹಳ; ಹೊಸದಕ್ಕಿಂತ ಹಳೆಯುದನ್ನೇ ಪ್ರೀತಿಸುವದು ಜನಸ್ವಭಾವ. ಮತ್ತೆ ಕೆಲವರು Old is gold ಎಂಬ ನಾಣ್ನುಡಿಯನ್ನು ಹೇಳಿ ತಲೆ ಹಾಕಿ ಕುಳಿತುಕೊಳ್ಳುವರು."

ಸಾಮ್ಯವಾದವು ತಮ್ಮ ಜೀವನದ ಸರ್ವಸ್ವ; ಜನಾಂಗದ ಉತ್ಕರ್ಷದ ಹೊಸ ಹುಟ್ಟು ಎಂದು ಅನೇಕರು ಹೇಳಿಕೊಳ್ಳುವರು.

M. Emile Vandernille ಎಂಬವರು "Socialism means the organisation of the workers for the conquest of political power for the purpose of transforming capitalist property into social property." ಸಾಮ್ಯವಾದವನ್ನು ಹೀಗೆ ವಿಶದವಡಿಸುತ್ತಾರೆ. ಭಾಂಡವಲಗಾರರ ಗಂಟನ್ನು ಸಮಾಜದ ಸೊತ್ತನ್ನಾಗಿ ಮಾಡುವದು ಸಾಮ್ಯವಾದದ ಮುಖ್ಯೋದ್ದೇಶವೆಂದು ಅವರ ಅಭಿಪ್ರಾಯ; ಈ ಧ್ಯೇಯದ ಸಲುವಾಗಿ ರಾಜ್ಯತಂತ್ರವನ್ನು ಕೈವಶಮಾಡಿಕೊಳ್ಳುವದು ಸಾಮ್ಯವಾದಿಗಳ ಗುರಿ.

## ಸಾಮ್ಯವಾದದ ಆರು ಲಕ್ಷಣಗಳು.

(೧) ವ್ಯಕ್ತಿಗಿಂತ ಜನಾಂಗವೇ ಶ್ರೇಷ್ಠ.

(೨) ಸಕಲರ ಪರಿಸ್ಥಿತಿಯನ್ನು ಸಮತೆಯಲ್ಲಿರಿಸುವದು.

(೩) ಗಂಟುಗಾರರ ನಾಶ.

(೪) ಜಮೀನದಾರೀ ಪದ್ಧತಿಯ ನಾಶ.

(೫) ವೈಯಕ್ತಿಕ ಸಾಹಸದ ನಿರ್ಮೂಲತೆ.

(೬) ಸ್ಪರ್ಧೆಯ ನಿರ್ಮೂಲತೆ.

ಮೇಲಣ ಆರು ಲಕ್ಷಣಗಳು ಸಾಮ್ಯವಾದದ ಪ್ರಾಮುಖ್ಯ ಲಕ್ಷಣಗಳೆಂದು ಹೇಳಬಹುದು. ಇವೆಲ್ಲವುಗಳ ಸಮಾವೇಶದಿಂದುದ್ಭವಿಸುವದೇ ಸಾಮ್ಯವಾದವು.

## ೧. ವ್ಯಕ್ತಿಗಿಂತ ಜನಾಂಗವೇ ಶ್ರೇಷ್ಠ

ಇದು ಸಕಲರಿಗೂ ಸಮ್ಮತವಾದ ವಿಷಯು. ವ್ಯಕ್ತಿಗೂ ಜನಾಂಗಕ್ಕೂ ನಿಕಟ ಸಂಬಂಧವಿರುವದು ಮನುಷ್ಯನ ಪ್ರತಿಯೊಂದು ಕೃತಿಯಿಂದಾಗುವ ಪರಿಣಾಮವು ಮಾಡಿದವನಿಗಷ್ಟೇ ಸಂಬಂಧಿಸದೆ, ಜನಾಂಗಕ್ಕೂ ಸಂಬಂಧಿಸುವದು. ಜನಗಳ ಉಚ್ಚತರದ ಆಚಾರ ವಿಚಾರದಿಂದ ಉಚ್ಚತರದ ಸಮಾಜವಾಗುವದು ; ಅವಹೇಲನ ಹಾಗೂ ಕೀಳುತರದ ನೀತಿ ನಡಾವಳಿಗಳಿಂದ ಸಮಾಜವು ಕೀಳುತನಕ್ಕಿಳಿಯುವದು. ಮನುಷ್ಯನ ದೇಹಕ್ಕೂ ಆತನ ನೆರಳಿಗೂ ನಿಕಟ ಸಂಬಂಧವಿರುವಂತೆ ಮನುಷ್ಯನ ಆಚಾರ ವಿಚಾರಕ್ಕೂ ಸಮಾಜಕ್ಕೂ ಸಂಬಂಧವಿರುವದು. ಮಗನೊಡನೆ ಮಗಳ ಮಾಂಗಲ್ಯಸೂತ್ರವನ್ನು ಕಟ್ಟಬೇಕೆಂದು ಬಯಿಸಿ, ಆಚಾರದಲ್ಲಿ ತರಬೇಕೆನ್ನುವ ನರಪಶುವಿದ್ದರೆ ಸಮಾಜದೇಳ್ಗೆಯಾಗುವದೋ ? ಇಂತಹ ಜನಗಳ ಸಮಾವೇಶದಿಂದಲೇ ಸಮಾಜದ ಅಧೋಗತಿ. ವ್ಯಕ್ತಿಗೂ ಸಮಾಜಕ್ಕೂ ನಿಕಟ ಸಂಬಂಧವಿದ್ದ ಮೇಲೆ ಸಮಾಜ ಶ್ರೇಷ್ಠವೋ ವ್ಯಕ್ತಿಯು ಶ್ರೇಷ್ಠವೋ ಎಂಬೀ ಸಮಸ್ಯೆ ಉದ್ಭವಿಸುವದು.

ಸಮಾಜದಲ್ಲಿಯ ಪ್ರತಿಯೊಬ್ಬ ಮನುಷ್ಯನು ಸಮಾಜದ ಹೆಚ್ಚಳಿಕೆಗಾಗಿ ಹೆಣಗಾಡುವದು ಆತನ ಆದ್ಯ ಕರ್ತವ್ಯ. ಸಂಸಾರವನ್ನು ತ್ಯಜಿಸಿ ಗಹನಾರಣ್ಯವನ್ನು ಸೇರಿ ಏಕಾಂತವಾಸದಲ್ಲಿರುವವರು ಸಮಾಜ ಬಾಹಿರರು. ಸಮಾಜದ ಉತ್ಕರ್ಷಕ್ಕೆ ತಡೆ ಹಾಯುವವರೂ ಸಮಾಜ ಬಾಹಿರರು.

ವ್ಯಕ್ತಿಗೆ ಸಮಾಜಧರ್ಮ, ವ್ಯಕ್ತಿಧರ್ಮ-ಸ್ವಾರ್ಥಧರ್ಮ-ಎಂಬೀ ಎರಡು ಧರ್ಮಗಳಿರುವವು. ಸಮಾಜದ ಉತ್ಕರ್ಷಕ್ಕೆ ಹೆಚ್ಚಾಗಿ ಸಂಬಂಧಿಸದೆ ತನ್ನ ಆತ್ಮೀಯ ಜನಗಳ-ಮಡದಿ ಮಕ್ಕಳ-ಸುಖಕ್ಕಾಗಿ ಸ್ವಾರ್ಥದಿಂದ ನಡೆಯತಕ್ಕ ಧರ್ಮ ವ್ಯಕ್ತಿಯ ಸ್ವಾರ್ಥಧರ್ಮ. ಇದಕ್ಕೆ ಆತ್ಮೀಯ ಧರ್ಮವೆಂದು ಅನ್ನಬಹುದು. ಆತ್ಮೀಯಧರ್ಮವೂ ಸಮಾಜಧರ್ಮವೂ ಬೇರೆ ಬೇರೆಯೆಂದು ಅನಿಸಿದರೂ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಎರಡೂ ಒಂದೇ ಎಂದು ಕೆಲವು ತಜ್ಞರ ಅಭಿಪ್ರಾಯ. Thomas Paine ( ಥಾಮಸ ಪೇನ ) ಇವರ ಮತವಾದರೂ ಹೀಗೇ.

ವೈಯ್ಯಕ್ತಿಕ ಧರ್ಮವನ್ನು ತ್ಯಜಿಸಿದ್ದರಿಂದಲೇ ಸಮಾಜದಲ್ಲಿ ಈ ತರಹದ ಕೋಲಾಹಲವೆಂದು ಕೆಲವರ ಸದಭಿಪ್ರಾಯ. ವ್ಯಕ್ತಿಯು ತನಗನುಚಿತವಾದ ಧರ್ಮವನ್ನು ಪರಿಪಾಲಿಸದೆ, ಆ ತನ್ನ ಧರ್ಮದಲ್ಲಿ ಸ್ವಾರ್ಥವನ್ನು ತುಂಬಿ ತುಳುಕಿಸಿ, ಇಂತಹ ಧರ್ಮವನ್ನೇ ಮುಂದುಮಾಡಿದ್ದರಿಂದ ಸಮಾಜಧರ್ಮಕ್ಕೂ ಆತನ ಧರ್ಮಕ್ಕೂ ತಾಕಲಾಡಿ, ಸ್ವಾರ್ಥದ ಮಿಂಚು ಹೊರಬಿದ್ದೂ ಸಮಾಜದಲ್ಲಿಯ ಸಾಂಪ್ರತದ ಕೋಲಾಹಲವನ್ನೆಬ್ಬಿಸಿರುವದು. ಪ್ರತಿಯೊಬ್ಬನು ತನ್ನ ವೈಯ್ಯಕ್ತಿಕ ಸುಖದ ಪರಿಮಿತಿಯನ್ನು ದಾಟಿದರೆ ಸಮಾಜಘಾತುಕನಾಗುವನು. ಸಮಾಜಘಾತುಕರಿಂದಲೇ ತಮ್ಮ ಸ್ವಾರ್ಥಸುಖಕ್ಕಾಗಿ ಈ ತರಹದ ಅಲ್ಲದ-ಸಲ್ಲದ ವಿಚಾರಗಳನ್ನೆಬ್ಬಿಸಿ ಸಮಾಜದ ಶಾಂತಿಯನ್ನು ಕೆಡಿಸುವರು.

ಬಂಧುತ್ವಭಾವ, ದಯ, ಪರಸ್ಪರಸಹಾಯ, ಸಮಾಜದ ಸುಖಕ್ಕಾಗಿ ತನ್ನ-ಸ್ವಾರ್ಥವನ್ನು ಬದಿಗಿಡುವದು-ಇವು ಸಮಾಜಧರ್ಮದ ಅಂಗಗಳು. ವ್ಯಕ್ತಿಯು ಈ ಅಂಗಗಳಿಗೆ ಬಾಧೆಬರದಂತೆ ನಡೆದುಕೊಂಡರೆ ಅವನಿಗೆ ಸಾಮ್ಯವಾದಿಯೆಂದು ಅನ್ನಬೇಕೋ. ಸಮಾಜಕ್ಕೆ ತನ್ನ ಸ್ವಾರ್ಥವನ್ನು ಆಧೀನವಾಗಿಟ್ಟುಕೊಂಡವನೇ ಸಮತಾವಾದಿ [M] ಸಮಾಜ

---

M. "Socialism implies the subordination of interests of the individual to the interests of the society."

Fred Bramley

ದಲ್ಲಿರುವವನು ಸಮತಾವಾದಿಯೋ ಎಂಬೀ ಸಮಸ್ಯೆ ಉದ್ಭವಿಸುವದು. ಮೇಲಣ ಲಕ್ಷಣದಿಂದ ಇದ್ದವನು ಸಮತಾವಾದಿಯೆಂದು ನಿಸ್ಸಂದೇಹವಾಗಿ ಹೇಳಬಹುದು. ಮನುಷ್ಯನು ಸಮಾಜಕ್ಕೆ ಆಧೀನನಾದಮೇಲೆ ಸಮಾಜಕ್ಕಿಂತ ಮನುಷ್ಯನು ( ವ್ಯಕ್ತಿಯು ) ಶ್ರೇಷ್ಠ ಎಂದು ಅನ್ನಬಹುದೋ ! ಶ್ರೇಷ್ಠವೆಂದು ಗ್ರಹಿಸಿದರೆ ರಥಕ್ಕೆ ಕುದುರೆಗಳನ್ನು ಹಿಂದೆ ಹೂಡಿದಂತಾಗುವದು.

## ೨. ಸಕಲರ ಪರಿಸ್ಥಿತಿಯನ್ನು ಸಮತೆಯಲ್ಲಿರಿಸುವದು.

ಸಮಾಜದಲ್ಲಿ ಒಬ್ಬನು ಹೆಚ್ಚು ಮತ್ತೊಬ್ಬನು ಕಡಿಮೆ ಎಂಬೀ ವಿಷಮತೆ ಕಂಡುಬರುವದು. ಈ ಭೇದವನ್ನು ನಿರ್ಮೂಲವಮಾಡಲು ಶಕ್ಯವೋ ! ಸಾಮ್ಯವಾದವು ಸಮಾಜದಲ್ಲಿಯ ಈ ವಿಷಮತೆಯನ್ನು ದೂರಮಾಡಿ ಸಕಲರನ್ನೂ ಸರಿಸಮಾನಸ್ಕಂದರನ್ನಾಗಿ ಮಾಡುವದೆಂದು ಕೆಲವರ ಅಭಿಪ್ರಾಯ. " Socialism is an equaliser and a leveller " ಎಂದು " Socialism of today " ಎಂಬುವದರಲ್ಲಿ E. Lavelenge ರು ಹೇಳಿರುವರು. ಸಾಮ್ಯವಾದದ ಉತ್ಪಾದಕನಾದ ಕಾರ್ಲಮಾರ್ಕ್ಸನ ಅನುಯಾಯಿಯಾದ A.Shadwell ರ ಅಭಿಪ್ರಾಯ ಹೀಗಿರುವದು. " An attempt to legislate unsuccessful men into success by legislating successful men out of it. ". [R]

ಒಂದು ಜನಾಂಗದಲ್ಲಿ ಸರ್ವರಿಗೂ ಒಂದೇ ಪರಿಸ್ಥಿತಿಯೆಂದೆನಬಹುದು. 'ಅ'ನಿಗೆ ಇದ್ದ ಪರಿಸ್ಥಿತಿ 'ಬ'ನಿಗೆ ; 'ಬ'ನಿಗೆ ಇದ್ದ ಪರಿಸ್ಥಿತಿ 'ಕ'ನಿಗೆ ; ಹೀಗೆ ಸರ್ವರಿಗೂ ಒಂದೇ ಪರಿಸ್ಥಿತಿ ; ಸರ್ವರಿಗೂ ಸರಿಸಮಾನವಾದ ಹಕ್ಕು—ಹೀಗಿರುವ ಒಂದು ಸಮಾಜವನ್ನು ಕಲ್ಪಿಸುವಾ. ಪರಿಸ್ಥಿತಿಯನ್ನುಪಯೋಗಮಾಡಿಕೊಳ್ಳುವದು ಮನುಷ್ಯನ ಮೇಧಾಶಕ್ತಿಯಲ್ಲಿರುವದು. 'ಅ'ನು 'ಬ'ನಗಿಂತ ಮೇಧಾವಿ ಇರಬಹುದು, ಚತುರನಿರಬಹುದು.

---

R, " Socialist movement, "
1925.

'ಕ'ನ ಬುದ್ಧಿ 'ಬ'ನಗಿಂತ ಮುಂದಾಗಿರಬಹುದು. ಸರ್ವರೂ ಚತುರರಿರುವದು ಅಸಂಭವ. ಸಕಲರೂ ಬುದ್ಧಿವಂತರಿರುವದು ಅಶಕ್ಯ. ಮನುಷ್ಯರ ಪ್ರಕೃತಿಗುಣಗಳಲ್ಲಿಯೇ ವಿಷಮತೆಯಿರುವದು. 'ಅ'ನು ಚತುರನಿರುವದರಿಂದ 'ಬ'ನಗಿಂತ ಪರಿಸ್ಥಿತಿಯನ್ನು ಹೆಚ್ಚಾಗಿ ಉಪಯೋಗಮಾಡಿ ಕೊಳ್ಳಬಹುದು. ಮುಂದೆ ಕೆಲಕಾಲ ಗತಿಸಿದ ಮೇಲೆ 'ಅ' 'ಬ' 'ಕ' ಇವರ ಪರಿಸ್ಥಿತಿಯಲ್ಲಿ ವಿಶೇಷವಾಗಿ ವಿಷಮತೆ ಕಾಣಬಹುದು. ಮನುಷ್ಯನ ಪ್ರಕೃತಿಗುಣದಲ್ಲಿ ವಿಷಮತೆಯಿದ್ದಮೇಲೆ ಬಾಹ್ಯ ವಿಷಮತೆಯನ್ನು ತೆಗೆದರೇನಾಗುವದು ? ದೇವರು ಮಾನವೀ ಪ್ರಾಣಿಗಳ ಗುಣಧರ್ಮಗಳಲ್ಲಿಟ್ಟ ವಿಷಮತೆಯನ್ನು ನಮಗೆ ಕಿತ್ತಿ ಹಾಕಲು ಶಕ್ಯವೋ ? ಈ ವಿಷಮತೆಯಿರುವವರೆಗೆ ಯಾವ ಪರಿಸ್ಥಿತಿಯನ್ನು ಕಲ್ಪಿಸಿಕೊಟ್ಟರೂ ಏನಾಗುವದು? ಸಮಾಜದ ಬಾಲ್ಯಾವಸ್ಥೆಯಲ್ಲಿ ಈ ಪರಿಸ್ಥಿತಿ ಇದ್ದಿರಲೇಬೇಕು. ಸಮಾಜ ಬೆಳೆದಂತೆ ಬದಲಾವಣೆಯಾಗುತ್ತಾ ಬಂದಿತು.

ಸಾಹಸಿಗಳ ಸುಸ್ಥಿತಿಯನ್ನು ಕಂಡು ಮಿಡುಕುವ ಆಲಸ್ಯಗಾರರು ಈ ವಿಚಾರವನ್ನೆಬ್ಬಿಸಿದಂತೆ ತೋರುವದೆಂದು ಕೆಲವರ ಅಭಿಪ್ರಾಯ. ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳುವವರು ಮಾನವರು. ಪ್ರತಿಯೊಬ್ಬನು ತನ್ನ ಮೇಧಾಶಕ್ತಿಗೆ ಅನುಚಿತವಾದ ಪರಿಸ್ಥಿತಿಯನ್ನು ಕಲ್ಪಿಸಿ ಕೊಳ್ಳಬಹುದು. ಭಿನ್ನ ಪ್ರಕೃತಿಗಳಂತೆ ಪರಿಸ್ಥಿತಿಗಳಾದರೂ ಭಿನ್ನವಾಗಬಹುದು. ಒಂದೇ ಸರಿಯಾದ ಪರಿಸ್ಥಿತಿಯಲ್ಲಿ ಎಲ್ಲರನ್ನಿಟ್ಟರೂ ಮುಂದರಿಯಲಾರರು. ಒಬ್ಬನು ಮುಂದರಿಯಬಹುದು; ಮತ್ತೊಬ್ಬನು ಅದರ ಉಪಯೋಗವನ್ನು ಮಾಡಿಕೊಳ್ಳದೆ ಅಧೋಗತಿಗೆ ಇಳಿಯ ಬಹುದು.

ಆರ್ಥಿಕ ದೃಷ್ಟಿಯಿಂದ ಸಮತೆ ಬೇಕೆಂದು ಕೆಲವರೆನ್ನುವರು. " The poor owe no duty to the rich, unless it be the duty which an honest man owes to the thief who has robbed him. The rich have no right to any of their possessions; for there is but one right and that is the right of the labourer

to the fruit of his labour. No man has any right to be rich, no man ever yet became rich by his own industry."

R. Flint " Socialism" 1895.

ಇದು ಕೇಳಲು ಸೊಗಸು. ಕೃತಿಯಲ್ಲಿ ತರಲು ಶಕ್ಯವೋ ಎಂಬೀ ಸಮಸ್ಯೆ ಮುಂದೆ ನಿಲ್ಲುವದು. ಸಾಮ್ಯವಾದಿಗಳು ತಮ್ಮ ಪ್ರಮೇಯಕ್ಕೆ ಉದಾಹರಣೆಗಾಗಿ ರಸ್ಯದೇಶವನ್ನು ತೋರಿಸಿರುವರು. ' ರಸ್ಯ ದೇಶ ದಲ್ಲಿ ಶಕ್ಯವಾದ ಮೇಲೆ ಉಳಿದ ದೇಶಗಳ ನಡಿಯಲ್ಲಿ ಬರಲು ಅಶಕ್ಯವೋ ? ರಸ್ಯದೇಶದವರು ಮಾನವರಲ್ಲವೇ ? ಅವರಿಗೆ ಸಾಧ್ಯವಾದ ಮೇಲೆ ನಮ ಗೇಕೆ ಅಶಕ್ಯ ?" ಎಂಬೀ ಮಾತುಗಳಿಂದ ತಮ್ಮ ಪ್ರಮೇಯವನ್ನು ಸಮ ರ್ಥಿಸುವರು. ರಸ್ಯ ದೇಶದಲ್ಲಿಯ ಪರಿಸ್ಥಿತಿ ನಮಗೆ-ಹೊರಗಿನವರಿಗೆ- ಗೊತ್ತಾಗುವದಿಲ್ಲ. ವ್ಯಕ್ತಿತ್ವ ಇರುವವರೆಗೆ ಪ್ರಮೇಯವನ್ನು ಆಚಾರದಲ್ಲಿ ತರಲು ಸಾಧ್ಯವಿಲ್ಲ. ವ್ಯಕ್ತಿಯ ಅಸ್ತಿತ್ವದಲ್ಲಿಯೇ ನನ್ನದೆಂಬ ಭಾವ ಉಗಮ. ವ್ಯಕ್ತಿಯ ಜೀವಮಾನ ಪರಿಸಮಾಪ್ತಿಯವರೆಗೆ ನನ್ನದೆಂಬ ಭಾವದ ಸುಳಿದಾಟ. ಈ ಭಾವ ಇರುವವರೆಗೆ ನಶ್ವರರಾಜ್ಯ ಈಶ್ವರ ಜಗತ್ತಿನಲ್ಲಿ. ನಶ್ವರ ಜಗತ್ತಿನಲ್ಲಿ ಈಶ್ವರರಾಜ್ಯವನ್ನು ಸ್ಥಾಪಿಸುವದಾದರೆ ಸಕಲರೂ ತ್ಯಾಗಿಗಳಾಗಬೇಕು. ತ್ಯಾಗದಲ್ಲಿ ಭೋಗವಿರುದೆಂದು ಸಕಲ ಸಮ್ಮತವಾದರೂ ತ್ಯಾಗಿಗಳಾಗಿ ಭೋಗಿಸುವವರು ಬಹು ವಿರಳ. ಎಲ್ಲರೂ ತ್ಯಾಗಿಗಳಾಗುವದು ಶಕ್ಯವೋ ? ಹಸ್ತದ ಐದೂ ಬೆರಳುಗಳನ್ನು ಸಮ ಮಾಡಲು ಶಕ್ಯವೋ ? ಎಲ್ಲರೂ ತ್ಯಾಗಿಗಳಾಗುವದು ಅಶಕ್ಯವಾದ ಮೇಲೆ ವ್ಯಕ್ತಿಯ ನಾಸ್ತಿಕೆಯನ್ನು ನಿರ್ಮೂಲ ಮಾಡಬೇಕೆಂದು ಬಲವದಿಚ್ಛೆಯಿದ್ದ ಜನರು ಗುಡ್ಡಕ್ಕೆ ಕಲ್ಲು ಹೊತ್ತಂತಾಗುವದಿಲ್ಲವೇ ? ಹೀಗಿದ್ದ ಮೇಲೆ ರಸ್ಯ ದೇಶದಲ್ಲಿ ಸಾಮ್ಯವಾದ, ಸಂಕೃಷ್ಟಿವಾದ, ಇವುಗಳ ಬೆಳವಣಿಗೆ ಹೇಗೆ ?

ರಸ್ಯ ದೇಶದಲ್ಲಿ ಸೇನೆಯ ಬಲದಿಂದ ಕಾರ್ಲಮಾರ್ಕ್ಸನ ನಾಲ್ಕು ಜನ ಅನುಯಾಯಿಗಳು ಇದರ ಪ್ರಚಾರ ಮಾಡಿದರು. ಆಗಿನ ಪರಿಸ್ಥಿತಿ ಕ್ರಾಂತಿಗೆ ತಕ್ಕ ಸಮಯ. ರಸ್ಯ ದೇಶದ ಒಕ್ಕಲಿಗರು ಝಾರನ

ದಬ್ಬಾಳಿಕೆಗೆ ಬೇಸತ್ತು ಬೇಜಾರ ಹೊಂದಿದ್ದರು. ಅವರಿಗೆ ಜೀವದಿಂದಿರಲು ಅನ್ನ, ಕೃಷಿಕರ್ಮವನ್ನು ಮಾಡಲು ಭೂಮಿ ಇವೆರಡೂ ಬೇಕಾಗಿದ್ದವು. J. Milin Kov ಇವರು Russia and its crisis ಎಂಬುವದರಲ್ಲಿ "The average peasant allotment in 1861 was 6·21 acres, but as years passed and the population of Russia more increased enormously in numbers, the peasant land-holding per capita decreased to only 3·51 acres in 1900 The future prospect for the peasantry could be only further decreasal and impoverishment" ಹೀಗೆ ಹೇಳಿರುವರು.

ಭೂಮಿಯ ಸಂಬಂಧವಾಗಿದ್ದ ಒಕ್ಕಲಿಗರ ಈ ಅಸಂತೋಷವೇ ಸಾಮ್ಯವಾದಿಗಳ ಕ್ರಾಂತಿಗೆ ತಕ್ಕ ಸಮಯವಾಯಿತು.[X] ಸಾಮ್ಯವಾದಿಗಳು ತಮ್ಮ ಕ್ರಾಂತಿಯ ಘಟನೆಗೆ ಒಕ್ಕಲಿಗರಲ್ಲಿ ಭೂಮಿ ಕೊಡುವೆವೆಂಬ ಆಶೆಯನ್ನು ಬಿತ್ತಿದರು.[R] ಕ್ರಾಂತಿಯನ್ನು ಮಾಡಿದರು. ತಮ್ಮ ಕೈಯಲ್ಲಿ ರಾಜ್ಯಸೂತ್ರವನ್ನು ತೆಗೆದುಕೊಂಡರು. ಈಗ ರಸ್ಯ ದೇಶದಲ್ಲಿ ಸೇನೆಯ ಬಲದ ಮೇಲಿಂದ, ಆಡಳಿತೆಯು ಸೇನೆಯ ಬಲವು ಕುಸಿ ಬಿದ್ದೊಡನೆ ಆಡಳಿತೆಯು ರಸಾತಳಕ್ಕಿಳಿಯಿತು. ಅಂತರಂಗದಲ್ಲಿ ಕುದಿಯುತ್ತಿದ್ದ ನಾಸ್ತಿಕೆಯು ಹೊರಚಿಮ್ಮಿ ನೂಸಿ, ರಾಷ್ಟ್ರವನ್ನು ಅಂದೋಲನ ಮಾಡದಿರಲಾರದು. Hearnshaw ಇವರು Survey of Socialism ದಲ್ಲಿ, ರಸ್ಯ

---

X "Though the amount of acres to be allotted to the peasants was determined by law, the land-lord had the right to choose the location of the land to be given away and very often availed himself of the privilege to the detriment of peasants, the latter received the worst lots, sometimes far distant from the village and most inconvenient for cultivation" Page 34
Autocracy and Revolution in Russia

Baron Sergius A Koff. D.C.L. LL B,

R "...during their Cleever campaign they set forth, among others, the dogma of land."

Autocracy & Revolution in Russia.

ದೇಶದಲ್ಲಿ ಸಾಮ್ಯವಾದಿಗಳು ಮಾಡಿದ ತ್ರೈಮುರಲಿಂಗ, ಗಿರ್ಝುನೀಮುಹಮುದರ ಕೃತಿಗಳನ್ನು ವರ್ಣಿಸಿದ್ದು ನೋಡಿದರೆ ಕಲ್ಲೆದೆಯ ಮನುಷ್ಯನೂ ಕೂಡ ಕಣ್ಣೀರಿಡುವನು. ಸಾಮ್ಯವಾದಿಗಳ ಗುಂಡಿನ ಸುರಿಮಳಿಗೆ ಅಬಲೆಯರು ಕಾಲನ ದವಡಿಯಲ್ಲಿ ಸಿಲುಕಿದರು, ಹಸು ಕಂದಮ್ಮಗಳು ತಮ್ಮ ಮಾತಾಪಿತರು ಸಾಮ್ಯವಾದದ ವಿರೋಧಿಗಳೆಂದು, ಸಾಮ್ಯವಾದಿಗಳ ಕ್ರಾಂತಿಯ ಯಜ್ಞಕ್ಕೆ ಕುರಿಗಳಾದವು. ನೆರೆಗೂದಲಿನ ಮುದುಕರ ರುಂಡಗಳನ್ನು ಸಾಮ್ಯವಾದಿಗಳು ತಮ್ಮ ಕರವಾಳಕ್ಕೆ ಮಸಿದರು. ಅವರ ಅಮಾನುಷ ಕೃತಿಗಳು ಒಂದಲ್ಲ. ಎರಡಲ್ಲ, ಸಾವಿರಾರು. ನೇನೆಯ ಬಲದಿಂದ ಸ್ಥಾಪಿಸಿದ ಅವರ ಈ ಸಾಮ್ಯವಾದದ ಧ್ವಜವು ನೆಲಕ್ಕುರುಳದೆ ಇರಲಾರದು.

ಸಾಮ್ಯವಾದಿಗಳು ರಸ್ಯದೇಶದವರ ತ್ರೈಮುರಲಿಂಗನ ಅಮಾನುಷಕೃತಿಗಳನ್ನು ಹೇಳುವರೋ ! ರಸ್ಯದೇಶದಲ್ಲಿಯೇ ಈ ವಾದಕ್ಕೆ ಎಷ್ಟು ವಿರೋಧಿಗಳಿಲ್ಲ. ಅವರಿಗೆ ಬಲ ಸಿಕ್ಕೊಡನೆ ಅವರಾದರೂ ಒಂದಿಲ್ಲೊಂದು ದಿನ ಮುಂದರಿಯುತಕ್ಕವರೇ. ಸಾಮ್ಯವಾದದ ತಲೆತಿರುಗಿದ ಅಧ್ವರ್ಯು[z]. ಮಾರ್ಕ್ಸನ ಅನುಯಾಯಿಗಳು ಇಂದಿಲ್ಲವೆ ನಾಳೆ ಮಣ್ಣುಗೂಡತಕ್ಕವರೇ.

ಆರ್ಥಿಕಪರಿಸ್ಥಿತಿಯ ಸಮತೆ ಇದೊಂದು ಸಾಮ್ಯವಾದಿಗಳ ಹಂಬಲ. ಈ ಹಂಬಲವು ಕೈಗೂಡಲಾರದು.

## ವಿಜ್ಞಾನಶಾಸ್ತ್ರ

ವಿಜ್ಞಾನಶಾಸ್ತ್ರದಿಂದ ಮನುಷ್ಯನ ವಿಚಾರಸರಣಿಯಲ್ಲಿ ಬದಲಾವಣೆ ಹೊಂದಪತ್ತಿರುವದು. ವಿಜ್ಞಾನಶಾಸ್ತ್ರದಲ್ಲಿ ಪ್ರಕೃತಿಯಾದಂತೆ ಮನುಷ್ಯನು ಜೀವನದ ಬಾಳುವೆಗಾಗಿ ಹಗಲಿರುಳು ಹೆಣಗಾಡಬೇಕಾಗುವದು. ಸಾಂಪ್ರ

---

z " Karl Marx is the mad Mulla of the socialists"
Reviva of Marxism Nicholson.

ತ್ರದ ಜೀವನದಲ್ಲಿ ಬದುಕುವದು ಬಲವಂತರದು ಎಂಬೀ ವಿಚಾರವು ಆತನ ಹೃದಯದಲ್ಲಿ ಸದಾ ಕಟಿಯುತ್ತಿರುವನು. ಬದುಕುವದು ಬಲವಂತರದು ಎಂಬೀ ದೃಷ್ಟಾಂತಗಳು ಪ್ರತಿನಿತ್ಯವಲ್ಲಿಯೂ ಅವನ ಕಣ್ಣೆದುರಿಗೆ ಬರುವದರಿಂದ ಜೀವನದಲ್ಲಿ ಆಸ್ಥೆ ಹುಟ್ಟದೆ-ಈ ಅಸಾರ ಸಂಸಾರ ಸಾಕು, ಬದುಕಿ ಬಾಳುವವರಲ್ಲಿ ಸುಖವಿಲ್ಲ ಎಂಬೀ ವಿಚಾರಗಳೇ ಅವನಲ್ಲಿ ಸುಳಿಯುತ್ತಿರುವವು. ಜೀವವಿರುವದೆಂದು ಅವನು ಬದುಕಿರುವನೆಂದು ನಾವು ಅನ್ನಬಹುದು. ಮಾತನಾಡಲು ತ್ರಾಣವಿರುವದಿಲ್ಲ. ಹೆಂಡರು ಮಕ್ಕಳು ಅನ್ನವಿಲ್ಲೆಂದು ಒಳಲುವದನ್ನು ಕಂಡು ಅವನು ಭ್ರಾಂತಿಷ್ಠನಾಗುವನು. ಇದಕ್ಕೆ ಕಾರಣವು ವಿಜ್ಞಾನಶಾಸ್ತ್ರ.

ಇಪ್ಪತ್ತನೇ ಶತಮಾನವು ಸುಧಾರಣೆಯ ಶಿಖರಕ್ಕೆ ಮುಟ್ಟಿರುವಂತೆ ಮಾಡಿದ್ದು ವಿಜ್ಞಾನಶಾಸ್ತ್ರ. ವಿಜ್ಞಾನಶಾಸ್ತ್ರವು ಹೊಸ ಹೊಸ ಶೋಧಗಳನ್ನು ಕಲ್ಪಿಸಿ ಮಾನವರ ಸೌಕರ್ಯಕ್ಕೆ ಹೆಚ್ಚಾಗಿ ಉಪಕರಣಗಳನ್ನು ಮಾಡಿ ಕೊಟ್ಟಿರುವದೆಂದು ಕೆಲವರ ಅಭಿಪ್ರಾಯ. ವಿಜ್ಞಾನಶಾಸ್ತ್ರದ ಪ್ರಾಶಸ್ತ್ಯ ಬೆಳೆಯುವವರ ಮುಂಚೆ, ಹಳ್ಳಿಗಳಲ್ಲಿ ಕಲಾಕೌಶಲ್ಯಗಳು ಅಭಿವೃದ್ಧಿ ಹೊಂದಿದ್ದವು. ಕಲಾಕುಶಲನು ತನ್ನ ಕಲೆಯಲ್ಲಿ ಕರ್ಮವೀರರ ಧರ್ಮಭಾಷೆಯನ್ನು ತುಂಬಿ ತುಳುಕಿಸಿ ಹಳ್ಳಿಯ ಜನಗಳಿಗೆ ಕಲಾನೈಪುಣ್ಯವನ್ನು ತೋರಿಸುತ್ತಿದ್ದನು. ಕಲಾಭಿಜ್ಞನು ತನ್ನ ಕಲೆಯನ್ನು ಧರ್ಮದ ಮರ್ಮಕ್ಕೆ ಸರಿಪಡಿಸಿಕೊಂಡು ಮಾಡುತ್ತಿದ್ದನು. ನೇಕಾರನು ತಾನು ನೇಯುವದು ಧರ್ಮವೆಂದೇ ನೇಯುತ್ತಿದ್ದನು. ಕಮ್ಮಾರನು ತಾನು ಮಾಡುವ ಉದ್ಯೋಗವು ತನ್ನ ಧರ್ಮವೆಂದೇ ತಿಳಿದುಕೊಂಡು ಮಾಡುತ್ತಿದ್ದನು. ಕುಂಬಾರನಾಗಲೀ, ಉಪ್ಪಾರನಾಗಲೀ, ಅಕ್ಕಸಾಲಿಗನಾಗಲೀ, ಯಾರೇ ಆಗಲೀ, ತಾವು ಮಾಡುವದೆಲ್ಲಾ ತಮ್ಮ ಧರ್ಮವೆಂದು ತಿಳಿದುಕೊಂಡು ಮಾಡುತ್ತಿದ್ದರು.

ವಿಜ್ಞಾನಶಾಸ್ತ್ರದಿಂದ ಪ್ರಾರಂಭವಾದ ಯಾಂತ್ರಿಕಯುಗವು ಹಳ್ಳಿಗರಲ್ಲಿದ್ದ ಧರ್ಮಭಾವನೆಯನ್ನು ಲಯಮಾಡಿತು. ಧರ್ಮಭಾವನೆ ಲಯ

ವಾದ ಮೇಲೆ ಜಾತಿಜಾತಿಗಳಲ್ಲಿ ದ್ವೇಷ ಬೇರೂರಿತು. ಸಕಲರೂ ಕರ್ಮ ಬಾಹಿರರಾದರು; ಹಾಗೂ ಆಲಸಿಗಳಾದರು. ಎಲ್ಲರೂ ಧರ್ಮದ ಕರ್ಮ ಗಳನ್ನು ಬಿಟ್ಟು ಮಳೆಯ ಮೇಲೆ ಅವಲಂಬಿಸಿಕೊಂಡು ಕೃಷಿಕರ್ಮವನ್ನು ಮಾಡಹತ್ತಿದರು. ಕೃಷಿಕರ್ಮದಿಂದ ಈ ಯಾಂತ್ರಿಕಯುಗದಲ್ಲಿ ತಮ್ಮ ಉಪಜೀವನವಾಗುವದೆಂದು ತಿಳಿದಕೂಡಲೇ ಕೆಲವರು ಸಾಲದ ಶೂಲದಲ್ಲಿ ಸಿಲುಕಿ ಪಟ್ಟಣಗಳಲ್ಲಿ ಎಲ್ಲಿಯಾದರೂ ದುಡಿದು ತಮ್ಮ ಹೊಟ್ಟೆ ಹರಿದು ಕೊಂಡು ಸಾಲ ತೀರಿಸಬೇಕೆಂಬ ಆಕಾಂಕ್ಷೆಯಿಂದ ಪಟ್ಟಣವನ್ನು ಸೇರ ಹತ್ತಿದರು.

## ಇಪ್ಪತ್ತನೇ ಶತಮಾನದ ಸುಧಾರಣೆ

ಮನುಷ್ಯನ ಜೀವನ ಕ್ರಮದಲ್ಲಿ ಒಂದು ವಿಶಿಷ್ಟತೆಯನ್ನು ಮಾರ್ಪ ಡಿಸಿದ್ದು ಇಪ್ಪತ್ತನೇ ಶತಮಾನದ ಸುಧಾರಣೆ. ಆದಾಯಕ್ಕಿಂತ ಹೆಚ್ಚಾಗಿ ವ್ಯಯಮಾಡಲು ಕಲಿಸಿದ್ದು ಇಪ್ಪತ್ತನೇ ಶತಮಾನದ ಸುಧಾರಣೆ. ಇದ ರಿಂದ ಸಕಲರೂ ಸಾಲದಲ್ಲಿ ಸಿಲುಕಿ ಬಳಲುತ್ತಿರುವರು. ಮಹಾಯುದ್ಧ ಮುಗಿದ ಮೇಲಂತೂ ಈ ಸಾಲವು ಹೆಚ್ಚಾಗಿ ಬೆಳೆಯಿತು. ಮಳೆಯಿಲ್ಲ, ಬೆಳೆಯಿಲ್ಲ; ಒಂದು ಕಾಸು ಕೂಡಾ ಹುಟ್ಟದ ಹಾಗಾಯಿತು ಜನಗಳಿಗೆ. ಒಂದು ಕಡೆಗೆ ದುರ್ಭಿಕ್ಷೆಯ ಭಯಾನಕ ದೃಶ್ಯ; ಮತ್ತೊಂದೆಡೆಗೆ ಸಾಲದ ಶೂಲ; ಈ ತಿಕ್ಕಾಟದಲ್ಲಿ ಸಿಲುಕಿ ಹೌಹಾರಿ ಹಳ್ಳಿಯ ಜನಗಳು ಮನೆ ಮಾರುಗಳನ್ನು ತ್ಯಜಿಸಿ ನಾಲ್ಕು ದುಡ್ಡು ಪಟ್ಟಣದಲ್ಲಿಯಾದರೂ ಸಿಗಬಹು ದೆಂಬ ಭಾವದಿಂದ ಪಟ್ಟಣಕ್ಕೆ ಬರುತ್ತಿರುವರು. ಪಟ್ಟಣಕ್ಕೆ ಬಂದರೆ ಇಲ್ಲೇನದೆ! ಯಾಂತ್ರಿಕಯುಗದ ದತ್ತಕಪುತ್ರರ ಜಾಲ.

## ಯಾಂತ್ರಿಕಯುಗದ ದತ್ತಕಪುತ್ರರು

ಈಗಿನ ಯುಗದಲ್ಲಿ ಸಾವುಕಾರರು ಹಾಗೂ ಕೂಲಿಕಾರರು ಎಂಬೀ ಎರಡು ವಿಶಿಷ್ಟ ಪಂಗಡಗಳು ನಮಗೆ ಕಂಡುಬರುವವು. ಗಂಟುಗಾರರು ಯಾಂತ್ರಿಕಯುಗದ ದತ್ತಕಪುತ್ರರು. ಈ ಯುಗದಲ್ಲಿ ದತ್ತುಪುತ್ರರ

ಹೆಚ್ಚಿಸಿತೆ. ಒಡತನದಲ್ಲಿ ತೊಳಲಿ ಬಳಲಿ ಹತಾಶನಾದ ದರಿದ್ರನು ಕಷ್ಟನಷ್ಟ ವನ್ನು ನೀಗಿ ಸಿರಿವಂತನಾಗಬೇಕೆಂಬ ಆಕಾಂಕ್ಷೆಯಿಂದ ಸತತೋದ್ಯೋಗಿ ಯಾದರೂ ಸಿರಿವಂತನಾಗುವದು ಅಸಂಭವ. ದಾರಿದ್ರ್ಯತನದಿಂದ ಮುಂದೊರೆದು ಗಂಟುಗಾರರಾದವರು ಬಹು ಕಡಿಮೆ. ಬಹು ಜನರ ಈ ಆಕಾಂಕ್ಷೆಯನ್ನು ಗಂಟುಗಾರರು ಮೇಲಿಂದ ಮೇಲೆ ಒತ್ತಿಡುವದರಿಂದ ಈ ಎರಡೂ ವಂಗಡಗಳಲ್ಲಿ ತಿಕ್ಕಾಟವು ಉದ್ಭವಿಸುವದು. ಈ ತಿಕ್ಕಾಟವೇ ಸಾಮ್ಯವಾದದ ಕಾರಣವೆಂದು ಕೆಲವರ ಮತ. ಸಾಮ್ಯವಾದದಿಂದಲೇ ದತ್ತಕಪುತ್ರರರ ಅವಸಾನಕಾಲ ಸಮೀಪಿಸಬಹುದೋ ಎಂಬೀ ವಿಚಾರ ನಮ್ಮೆದುರಿಗೆ ಬರುವದು.

## ೩. ಗಂಟುಗಾರರ ನಾಶ

ಕೂಲಿಕಾರರ ಅಧಃಪತನಕ್ಕೆ ಗಂಟುಗಾರರೇ ಕಾರಣೀಭೂತರೆಂದು ಸಾಮ್ಯವಾದಿಗಳೆನ್ನುವರು. ಕೂಲಿಕಾರರ ದುಡಿತವು ಭಾಂಡವಲಗಾರರ ಸುಖಕ್ಕೆ. "Capitalists live idly upon the bounty of the poor." R. Rev. Conard ರವರು ಅನ್ನುವರು. Sidney Web ನು ಭಾಂಡವಲಗಾರರು "Social parasite" ಎಂದೂ ಹಾಗೂ ಅವರು "Guilty of the unconscious theft." ಎಂದೂ ಸಂಬೋಧಿಸಿರು ವನು. M.

ಕಲ್ಲನು ಅನ್ನುವಂತೆ "ನಮಗ ದುಡಿದಷ್ಟು ಕೂಲೀ ಯಾಕ ಕೊಡು ದಿಲ್ಲ. ನಾವ ಹತ್ತು ರುಪಾಯಿ ಕೆಲ್ಸ ಮಾಡಿದ್ರ ದಿನಾ ನಮಗ ಆರು ಆಣೆ ಕೂಲೀ ಕೊಡತಾರ" ಕೆಲಕಾಲ ಸರ್ವರಿಗೂ ಅನಿಸಬಹುದು. ಸಮತಾವಾದಿಗಳಾದರೂ ಭಾಂಡವಲಗಾರರ ವಿರುದ್ಧ ಇದೇ ಬಂಡಾಯ ವನ್ನೆಬ್ಬಿಸಿರುವರು. ಸಾಂಪ್ರತದ ಪರಿಸ್ಥಿತಿಯಲ್ಲಿ ದುಡಿತದ ತಕ್ಕ ಕೂಲೀ

---

R. "Socialism in church History."

M. "Decay of capitalist civilization."

ಇಲ್ಲಿಂದು ಸಮತಾವಾದಿಗಳೆನ್ನುವರು. "ಬಡತನದ ಬಾಳುವೆಯನ್ನು ನಿರ್ಮೂಲ ಮಾಡುವದು ನಮ್ಮ ಉದ್ದೇಶ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ತಮ್ಮ ದೇಹದ ರಕುತವನ್ನು ಸುರಿಮಾಡಿ ಹಣದ ಸಂಚಯವನ್ನು ಮಾಡಿ ಭಾಂಡವಲಗಾರರಿಗೆ ಕಾಣಿಕೆಯಾಗಿ ಕೊಡುವ ಕೂಲೀಕಾರರಿಗೆ ಸುಖದ ದಿನಗಳನ್ನು ತಂದು ಕೊಡುವದು ನಮ್ಮ ಹೆಗ್ಗುರಿ. ಸಮತಾವಾದದಿಂದಲೇ ಈ ಭಾಗ್ಯೋದಯವನ್ನು ಕಾಣ ಬಹುದೆಂದು ನಮ್ಮ ನಿಚ್ಚಳವಾದ ನಂಬಿಗೆ" ಎಂದು ಸಾಮ್ಯವಾದಿಗಳು ಕೂಗುತ್ತಿರುವರು.

ಯಾಂತ್ರಿಕಯುಗದ ದತ್ತುಪುತ್ರರಿಗೆ ಹಣದ ಸಂಚಯದಲ್ಲಿ ಬೇಸರವೇ ಇಲ್ಲ. ಎಷ್ಟು ಬಂದರೂ ಕಡಿಮೆ. ದಯೆ, ಮಾಯೆ ಇವು ಅವರ ಶತ್ರುಗಳು. ಕೂಲಿಕಾರರು ಸತ್ತರೂ ಪರಿವೆಯಿಲ್ಲ, ತಮ್ಮ ರೊಕ್ಕವು ಮಾತ್ರ ಅಭಿವೃದ್ಧಿ ಹೊಂದಲೇ ಬೇಕು. ನೀರಿನ ಹಾಗೆ ಹಣ ವನ್ನು ತಮ್ಮ ಸುಖಕ್ಕೆ ವೆಚ್ಚಮಾಡುತ್ತಿರುವದನ್ನು ಕಂಡು ಕೂಲಿಕಾರರಲ್ಲಿ ಅಸೂಯೆ ಹುಟ್ಟುವದು ಸಹಜ. 'ಅವರ-ಸ್ಥಿತಿ ಹೀಗೇಕೆ ? ನಮ್ಮದು ಹೀಗೇಕೆ ? ಎಂಬ ವಿಚಾರವು ಸಹಜವಾಗಿ ಉತ್ಪನ್ನವಾಗುವದು. ಈ ವಿಚಾರ ಒಮ್ಮೆ ಹುಟ್ಟಿತೆಂದರೆ ಅದು ಮುಂದೆ ಪ್ರಜ್ವಲಿಸಹತ್ತುವದು. ಈ ವಿಚಾರವೇ ಸಮತಾವಾದಿಗಳ ತಳಹದಿಯು. ಸಾಮ್ಯವಾದಿಗಳನ್ನುವಂತೆ ನಾವಾದರೂ ಅನ್ನಬಹುದೋ ? ಭಾಂಡವಲಗಾರರ ನಾಶವಾಗಬಹುದೋ?

ಯಾಂತ್ರಿಕಯುಗದ ದತ್ತಕಪುತ್ರರು ತಮ್ಮ ಭಾಂಡವಲವನ್ನು ಸಮಾಜಕ್ಕೊಪ್ಪಿಸಿದ ವಿನಃ ಈ ವಾದವು ನಿಲ್ಲಲಾರದೆಂದು ಸಮತಾವಾದಿ ಗಳೆನ್ನುವರು. [R]

---

R. "It cannot end until this usurping class has been dispostEd by the transference of its capital to the community." H.N.Brailsford,
"Socialism for To-day"
1925.

## ೪. ಕೂಲಿಕಾರರ ಪರಿಸ್ಥಿತಿ

ವೈಜ್ಞಾನಿಕಯುಗದಿಂದ ಹಳ್ಳಿಗಳು ಹಾಳಾಗುತ್ತಿರುವವು. ಹೊಲ ಮನೆ ಮಾಡಿಕೊಂಡು ನೆಮ್ಮದಿಯಿಂದಿರುವ ಒಕ್ಕಲಿಗರು ಸಾಲದ ಶೂಲ ದಲ್ಲಿ ಸಿಲುಕಿ ಜಬ್ಬಾಗುತ್ತಿರುವರು. ಒಮ್ಮೆ ಮಾಡಿದ ಸಾಲ ತೀರಿಸುವದು ಬಹುಕಷ್ಟ. ಸಾಲಗಾರರ ಹಿಡಿತದಲ್ಲಿ ಒಮ್ಮೆ ಸಿಕ್ಕರೆ ಸಿಕ್ಕವನ ಮನೆಯು ಶಾಂತತೆಯು ಮಸಣದಲ್ಲಿ ಉರಿಯುತ್ತಿರುವದೆಂದು ತಿಳಿಯಬೇಕು. ಬಡ ಒಕ್ಕಲಿಗನಿಗೆ ಬೆಳೆ ಬರುವದು ಕನಸಿನ ಮಂಡಿಗೆ.

ಪಟ್ಟಣಕ್ಕೆ ಬಂದರೂ ಆತನ ಹಿಂದಿನ ಸಾಲ ತೀರುವದು ದೂರುಳಿ ಯಿತು ; ಮತ್ತೆ ಸಾಲದಲ್ಲಿ ಕೊಳೆಯಹತ್ತುವನು. ನಿರಾಶನಾಗಿ ವ್ಯಸನಿಯಾಗುವನು. ವ್ಯಸನದಲ್ಲಿಯಾದರೂ ಸುಖವಿರುವದೆಂಬ ಭಾವ ದಿಂದ ಅದರ ದಾಸನಾಗಿ ತನ್ನ ಸಂಸಾರವನ್ನು ಗಾಳಿಗೀಡುಮಾಡಿ ಉತ್ಸಾಹವಿಲ್ಲದ ಮನುಷ್ಯನಾಗುವನು. ಹಳ್ಳಿಯವನು ಒಮ್ಮೆ ಪಟ್ಟಣದ ಮೋಹಕ್ಕೆ ಬಿದ್ದನೆಂದರೆ ತೀರಿತು. ಅವನ ಅವಸಾನಕಾಲ ಬಂತೆಂದು ತಿಳಿಯಬೇಕು. ತನ್ನ ಹೊಲಗಳು ಬೀಳುಬಿದ್ದರೂ ಚಿಂತೆಯಿಲ್ಲ ; ಮನೆಯು ಗೀಳಾದರೂ ಪರಿವೆಯಿಲ್ಲ ; ಆತ ಪಟ್ಟಣ ಬಿಟ್ಟು ಹೋಗಲಾರ.

ಒಮ್ಮೆ ಮನುಷ್ಯನು ನಿರಾಶೆಗೆ ಒಳಪಟ್ಟರೆ ಸತ್ಯಾಸತ್ಯದ ಭೇದ ವನ್ನರಿಯಲು ಆತನಿಗೆ ಶಕ್ಯವಿಲ್ಲ. ಆತನಿಗೆ ಹೇಳಿದ್ದೆಲ್ಲವೂ ಸತ್ಯವೆನಿಸು ವದು. ಸುಲಭವಾಗಿ ಹಣ ಸಿಗುವದೆಂದು ಆತನಿಗೆ ಹೇಳಿದರೆ ತೀರಿತು. ಆತನು ಆನಂದ ಪಟ್ಟು ಹಿಗ್ಗಿ ಜಿಗಿಯುವನು. ಅದು ತನಗೆ ಉಚಿತವೋ, ಅನುಚಿತವೋ ಎಂಬ ವಿಚಾರವನ್ನು ಮಾಡಲರಿಯನು. ತನಗೆ ಹಣ ಸಿಗುವದೆಂಬ ಆಶೆಯೇ ಅವನ ಕಣ್ಣೆದುರಿಗೆ ಯಾವಾಗಲೂ ನಲಿಯುತ್ತಿ ರುವದು. ತನ್ನ ಜೀವನದಲ್ಲಿ ಸುಖವಿಲ್ಲೆಂದು ಅವನಲ್ಲಿ ಬಿಂಬಿಸುವದು. ಅಸಾರ ಸಂಸಾರವೆಂದರಿತ ಮೇಲೆ ಆತನಿಗೆ ಸಾಯುವ ಭಯವೇ ಇಲ್ಲ. ವಿಭ್ರಮ ಬುದ್ಧಿ ಆತನದಾಗುವದು. ಮನಿಯು ಆತನಿಗೆ ನರಕವಾಗುವದು.

ಹೊಡಿ, ಬಡಿ, ಕಡಿ, ಎಂಬುವದರಲ್ಲಿ ಆತನಿಗೆ ಬಹಳ ಆಸ್ಥೆ ಉಂಟಾಗು ವದು. ಇದು ಕೂಲಿಕಾರರ ಪರಿಸ್ಥಿತಿ.

## ಇನ್ನೊಂದು ಪ್ರಮೇಯ

No one ought to possess any wealth beyond that which be needs to consume for his own well-being"

F.Henderson.

"Case for Socialism" 1924.

"ಪ್ರತಿಯೊಬ್ಬನು ತನ್ನ ಸುಖಕ್ಕೆ ಬೇಕಾಗುವಷ್ಟೇ ಹಣವನ್ನು ಸಂಛಯು ಮಾಡಬೇಕಲ್ಲದೆ ಹೆಚ್ಚಾಗಿ ಸಂಚಯು ಮಾಡಬಾರದು."

ಮೇಲಣ ಪ್ರಮೇಯ ನುಡಿಯಲ್ಲಿ ಸಮಂಜಸವಾಗಬಹುದು; ನಡೆ ಯಲ್ಲಿ ಸಮಂಜಸವಾಗುವದೋ ? ಹೆಣವೂ ಕೂಡ ಹಣ ಒಲ್ಲೆನ್ನಲಾರದು. ಹಣದ ಮೋಹ ಹೆಚ್ಚಿನದು. ನುಡಿಯಲ್ಲಿದ್ದದ್ದು ನಡೆಯಲ್ಲಿ ಬಂದಿತೆಂದು ಕಲ್ಪಿಸುವಾ. ಕೆಲವರು ಗಳಿಸಬಹುದು. ಸಕಲರೂ ಗಳಿಸಬಹುದೆಂದು ನಾ ಅನ್ನಲಾರೆ. ಕೆಲವರಲ್ಲಿ ಗಳಿಸುವ ಶಕ್ತಿಯೇ ಇರುವದಿಲ್ಲ. ಅವರು ಸಮಾಜದ ಅಶನಘಾತುಕರು. ಅವರು ಹುಟ್ಟಾ ಆಲಸಿಗಳು. ಅವ ರಿಗೆ ಗಳಿಸುವದೆಂದರೆ ತಲೆನೋವು. ನಾಲ್ಕು ಮಾತನಾಡಿ ಕಾಲ ಕಳೆಯು ವದರಲ್ಲಿ ಬಲು ಉತ್ಸಾಹ. ಸಮಾಜದಲ್ಲಿ ಇಂತಹ ವ್ಯಕ್ತಿಗಳ ಸಮಾವೇಶ.

ಸಹಾಸಿಯು ಹಣ ಗಳಿಸುವನು. ತನಗೆ ಬೇಕಾಗುವಷ್ಟೇ ಹಣ ಗಳಿಸಬೇಕು; ಹೆಚ್ಚಾಗಿ ಸಂಚಯ ಮಾಡಬಾರದು ಎಂಬ ನಿಯಮವನ್ನು ಮಾಡಿದರೆ ಸಹಾಸಿಯು ಹೆಚ್ಚಾಗಿ ಗಳಿಸಲಾರನು. ಸಮಾಜ ಮುಂದರಿ ಯುವದು ಜನಸಾಮಾನ್ಯರಿಂದಲ್ಲ; ಕೆಲವು ವ್ಯಕ್ತಿಗಳಿಂದಲೇ. ಸರ್ವರೂ ಸಮಾಜದ ಆಧಾರರಲ್ಲ; ಕೆಲವರು ಮಾತ್ರ.

ತನ್ನ ಸುಖಾರ್ಥವಾಗಿ ಬೇಕಾಗುವಷ್ಟೇ ಹಣದ ಸಂಚಯವನ್ನು ಮಾಡತಕ್ಕದೆಂದು ಕಟ್ಟಳೆ ಹಾಕಿದರೆ, ಹೆಚ್ಚಿನ ಸಂಚಯದ ಸಲುವಾಗಿ

ಮನುಷ್ಯನು ಹವ್ಯಾಸವನ್ನೇ ಬಿಡುವನು. ಸಕಲರೂ ಈ ನಿಯಮವನ್ನು ಪರಿಪಾಲಿಸಿದರೆ ಸ್ಪರ್ಧೆಯೇ ಹೋಗಿ ಬಿಡುವದು. ಸಮಾಜದ ಬೆಳವಣಿಗೆ ಕಟ್ಟಾಗುವದು. ಸಮಾಜದ ಬೆಳವಣಿಗೆ ಕುಂಠಿತವಾದರೆ ವ್ಯಕ್ತಿಯ ಪ್ರಗತಿಯೂ ಕುಂಠಿತವಾಗುವದು.

ಸಮಾಜರಚನೆ ಜನಸಾಮಾನ್ಯದ ಸುಖಕ್ಕಾಗಿ; ಪ್ರಗತಿಗಾಗಿ ಸಮಾಜರಚನೆಯಿಂದ ಜನರ ಪ್ರಗತಿಯಾಗದಿದ್ದರೆ ಆ ಸಮಾಜದಿಂದೇನು ಫಲ !

## ಸ್ಪರ್ಧೆ ಸಮಾಜದ ಬೆಳವಣಿಗೆಗೆ ಕಾರಣವೋ?

ಸ್ಪರ್ಧೆ ಸಮಾಜರಚನೆಯನ್ನು ಕೆಡಿಸುವದೆಂದು ಸಾಮ್ಯವಾದಿಗಳೆನ್ನುವರು. ಸ್ಪರ್ಧೆಯನ್ನು ನಿರ್ಮೂಲ ಮಾಡುವದು ಸಾಮ್ಯವಾದಿಗಳ ಹೆಗ್ಗುರಿ. ಪ್ರಾಚೀನ ಸಮಾಜರಚನೆಯಲ್ಲಿ ಸ್ಪರ್ಧೆಯೇ ಇದ್ದಿದ್ದಿಲ್ಲವೆಂದು ಕೆಲವರ ಮತ. ಇಪ್ಪತ್ತನೇ ಶತಮಾನದ ಪ್ರಾರಂಭದಿಂದ ಸಮಾಜದಲ್ಲಿ ಇದು ನೆಲಗೊಂಡಿತೆಂದು ಕೆಲವರಭಿಪ್ರಾಯ. ಪ್ರಾಚೀನ ಕಾಲದಲ್ಲಿಯೂ ಸ್ಪರ್ಧೆಯಿತ್ತೆಂದು ಮತ್ತೆ ಕೆಲವರ ಮತ. ಸ್ಪರ್ಧೆ ಮಾನವನ ಹುಟ್ಟುಗುಣವೆಂದು ನನ್ನ ಮತ. ವ್ಯಕ್ತಿಯ ನಾನ್ನಿಕೆಯಿಂದ ಸ್ಪರ್ಧೆ ಹುಟ್ಟುವದು. ಮಾನವನಲ್ಲಿ 'ನಾನು' ಎಂಬುವ ಭಾವ ನೆಲಿಸಿರುವವರೆಗೆ ಸ್ಪರ್ಧೆ ಹೋಗಲಾರದು. ಮನುಷ್ಯನ ಜೀವವಿರುವ ವರೆಗೆ 'ನಾನು' ಎಂಬೀ ಭಾವ ಲಯವಾಗಲಾರದು. 'ನಾನು' ಎಂಬೀ ಅಸ್ತಿತ್ವದಲ್ಲಿಯೇ ಸ್ಪರ್ಧೆಯ ಅಸ್ತಿತ್ವ.

ಪಶುಗಳಲ್ಲಿಯೂ ಸ್ಪರ್ಧೆಯ ಗುಣವನ್ನು ನಾವು ಕಾಣುವೆವು. ಮಾನವೀಪ್ರಾಣಿಗಳಲ್ಲಿರುವದೇನಾಶ್ಚರ್ಯ ! ಮಾನವನ ಬುದ್ಧಿ ಶಕ್ತಿಯನ್ನು ತೀಕ್ಷ್ಣ ಮಾಡುವದು ಸ್ಪರ್ಧೆ. ಜೀವನದಲ್ಲಿ ಆಸ್ಥೆ ಹುಟ್ಟಿಸುವದು ಸ್ಪರ್ಧೆ. ಸಂಸಾರದ ತಿರುಳನ್ನು ತಿಳುಹಿಸಿ ಕೊಡುವದು ಸ್ಪರ್ಧೆ. ಹೊಸ ಹೊಸ ಯೋಜನೆಗಳನ್ನು ಹುಟ್ಟಿಸಿ ಮಾನವರ ಮರುಳಾಟವನ್ನು

ಮರೆಯಿಸಿ ಅವರ ಸುಖದ ಹುಟ್ಟಾಗುವದು ಸ್ಪರ್ಧೆ! ಮೈದಾನದ ಮುಗಿಲ ಗಳನ್ನು ಹಿಂದೊಗೆದು ಬಲವಂತರನ್ನು ಮುಂದೆ ದೂಡುವದು ಸ್ಪರ್ಧೆ ! ಸ್ಪರ್ಧೆಯು ತಳಹದಿಯು ಮೇಲೆ ಸಮಾಜದ ರಚನೆ. ಸ್ಪರ್ಧೆ ಇರದಿದ್ದರೆ ಸಮಾಜವು ಮೂಲೆಗುಂಪಾಗುವದು.

ಸ್ಪರ್ಧೆಯ ಸುಳಿದಾಟವಿಲ್ಲದ ಸಮಾಜವಿರುವದೆಂದು ಕಲ್ಪಿಸುವಾ-ಎಂದು ಕೆಲವರೆನ್ನುವರು. ಸ್ಪರ್ಧೆಯ ತಳಹದಿಯು ಮೇಲೆ ಸಮಾಜ ರಚನೆಯಾದ ಮೇಲೆ ಸ್ಪರ್ಧೆಯಿಲ್ಲದ ಸಮಾಜವನ್ನು ಕಲ್ಪಿಸುವ ಬಗೆ ಹೇಗೆ ? ಜೀವವಿಲ್ಲದ ಮನುಷ್ಯನನ್ನು ಕಲ್ಪಿಸುವಾ—ಅಂದಹಾಗಾಯಿತು. ಜೀವವಿಲ್ಲದ ಮನುಷ್ಯನೆನ್ನುವದಿಲ್ಲ; ಅದಕ್ಕೆ ಹೆಣವೆನ್ನುವರು.

## ನಮ್ಮ ಸಮಾಜ ರಚನೆ

ಗುಣಕರ್ಮಗಳ ಮೇಲಿಂದ ನಾಲ್ಕು ವರ್ಣಗಳನ್ನು ವಿಭಾಗ ಮಾಡಿ ಸಮಾಜರಚನೆ ಮಾಡಿದರು ನಮ್ಮ ಪೂರ್ವಜರು. ಈ ನಾಲ್ಕು ವರ್ಣಗಳು ನಮ್ಮ ಸಮಾಜದ ಅಂಗಗಳು. ಒಂದು ಅಂಗ ಹೀನವಾದರೆ ಮನುಷ್ಯನ ರೂಪವು ವಿಕೃತವಾಗುವಂತೆ ಒಂದು ವರ್ಣವಿರದಿದ್ದರೆ ಸಮಾ ಜದ ರಚನೆಯುು ವ್ಯಂಗ್ಯವಾಗುತ್ತಿತ್ತು. ನಮ್ಮ ಸಮಾಜರಚನೆಯಲ್ಲಿ ಈ ನಾಲ್ಕು ವರ್ಣಗಳು ಬೇಕು. ನಮ್ಮ ಸಮಾಜರಚನೆ ಪಾಶ್ಚಾತ್ಯರ ಸಮಾಜರಚನೆಗಿಂತ ಬಹು ವಿಧವಾಗಿ ಬೇರೆ. ಪಾಶ್ಚಾತ್ಯರು ಬೌದ್ಧಿಗಳು, ನಾವು ಭಾವಿಕರು. ಆರ್ಯರು ಪ್ರತಿಯೊಂದು ಕೃತಿಯಲ್ಲಿ ಧರ್ಮ ಭಾವನೆ ಯನ್ನು ಮುಂದರಿಸುತ್ತಿದ್ದರು. ಕುಳಿತರೆ ಧರ್ಮ, ನಿಂತರೆ ಧರ್ಮ ಮಲ ಗಿದರೆ ಧರ್ಮ, ಎಂಬುದೇ ಅವರ ಜೀವನ ಕ್ರಮ. ತಮ್ಮ ಜೀವನ ಕ್ರಮದ ಮೇಲಿಂದ ಸಮಾಜರಚನೆಯನ್ನು ಮಾಡಿದರು.

ಅವರು ಸಮಾಜರಚನೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ನಾಲ್ಕು ವರ್ಣಗಳನ್ನು ಮಾಡಿದರು. ಈಗಿನಂತೆ ಜನಿಸಿದ ಮಾತ್ರಕ್ಕೇ ಆ ವರ್ಣಾಶ್ರಮಕ್ಕೆ ಸೇರುತ್ತಿದ್ದಿಲ್ಲ. ಆತನ ಕರ್ಮದಿಂದ

ಆತನ ವರ್ಣಾಶ್ರಮವನ್ನು ಗೊತ್ತು ಹಿಡಿಯುತ್ತಿದ್ದರು. ಕರ್ಮದಲ್ಲಿ ನಾಲ್ಕು ವಿಭಾಗ ಮಾಡಿ ವರ್ಣಾಶ್ರಮ ಮಾಡಿದರು. ವ್ಯಕ್ತಿಯು ಆವ ಕರ್ಮವನ್ನು ಸ್ವೀಕರಿಸುವನೋ ಅದೇ ಅವನ ವರ್ಣಾಶ್ರಮ. ಈ ವರ್ಣರಚನೆಯೇ ಸಮಾಜದ ಜೀವಾಳ. ಈ ವರ್ಣಗಳ ಅಭಿವೃದ್ಧಿಯೇ ಸಮಾಜದ ಅಭಿವೃದ್ಧಿ. ಇಂತಹ ಸಮಾಜದಲ್ಲಿ ಗಂಟುಗಾರರು ಹಾಗೂ ಕೂಲಿಕಾರರು ಎಂಬೀ ಭೇದವಿರಲು ಶಕ್ಯವೊ ?

ಸಾಂಪ್ರತದ ಆರ್ಯಾವರ್ತನರಲ್ಲಿ ಹಳ್ಳಿಗಳಲ್ಲಿ ವಾಸಿಸುವರೇ ಬಹಳ. ಹಳ್ಳಿಗಳಲ್ಲಿ ಮಾನವನ ಜೀವನಕ್ರಮಕ್ಕೆ ಬೇಕಾಗುವ ಎಲ್ಲ ತರಹದ ಸಾಮಗ್ರಿಗಳನ್ನು ತಯಾರಿಸುವ ಜನಗಳಿರುವವು. ಹೊಲಕ್ಕೆ ಬೇಕಾಗುವ ಕಬ್ಬಿಣದ ರಂಟೆ-ಕುಂಟೆಗಳನ್ನು ತಯಾರಿಸಲು ಕಮ್ಮಾರನಿರುವನು. ಹೆಂಡರು ಮಕ್ಕಳನ್ನು ಆಭರಣಗಳಿಂದ ಅಲಂಕರಿಸಿ ಆನಂದ ಪಡಿಯಬೇಕೆಂಬ ಆಶೆ ಉಂಟಾದರೆ ಅವುಗಳನ್ನು ತಯಾರಿಸಲು ಅಕ್ಕಸಾಲಿಗನಿರುವನು. ಮಳೆ-ಗಾಳಿಯಿಂದ ಸಂರಕ್ಷಿಸುವ ಮನೆಯನ್ನು ಕಟ್ಟಲು ಉಪ್ಪಾರನಿರುವನು. ಬಡವನ ಅಡಿಗೆಗೆ ಬೇಕಾಗುವ ಗಡಿಗೆ ಮಡಿಕೆಗಳನ್ನು ಮಾಡುವ ಕುಂಬಾರನಿರುವನು. ಹಳ್ಳಿಯೆಂದರೆ ನಮ್ಮ ಸಮಾಜದ ಕೇಂದ್ರಸ್ಥಾನವು.

ಸಾಮ್ಯವಾದವು ನಮಗಲ್ಲ; ಪಾಶ್ಚಾತ್ಯರಿಗೆ. ನಮ್ಮ ಸಮಾಜದ ರಚನೆಗೆ ಸಾಮ್ಯವಾದವು ಸರಿ ಹೋಗಲಾರದು.

## ಕಲ್ಕಿ

'There is a Revolution towards Evolution' 'ಪ್ರಗತಿಗಾಗಿ ಮಾನವನ ಜೀವನದಲ್ಲಿ ಕ್ರಾಂತಿ' ಎಂದು ಜೆ. ಕೃಷ್ಣಮೂರ್ತಿಯವರು ಹೇಳಿದ್ದು ಯಾಂತ್ರಿಕಯುಗದ ಕ್ರಾಂತಿ. ಕಲ್ಕಿಯ ಬರವನ್ನು ಸೂಚಿಸುವ ಬೆಳ್ಳಿಯ ಚಿಕ್ಕೆ. ಯಾಂತ್ರಿಕಯುಗದ ಕ್ರಾಂತಿ ಮಾನವರ ಸ್ವಾರ್ಥ

ಕಿಲ್ಮಿಷವನ್ನು ಹೆಚ್ಚಾಗಿ ಬೆಳೆಸಿ, ತಮ್ಮ ನಿರ್ಮಲ ಜೀವನದ ಪುನರುಜ್ಜೀವನಕ್ಕಾಗಿ ಹೆಣಗಾಡಬೇಕೆಂಬ ಹಂಬಲ ಹುಟ್ಟಿಸುವ ಶಕ್ತಿ. ಭಾಂಡವಲಗಾರರು, ಹೊಟ್ಟೆಗೆ ಅಂಬಲಿಯಿಲ್ಲದೆ ತಳಮಳಿಸುವ ಬಡವರು ಎಂಬೀ ಭೇದವನ್ನು ದೃಢಪಡಿಸಿ ಪರಸ್ಪರರಲ್ಲಿದ್ದ ಮಮತೆಯ ಎಳೆಗಳನ್ನು ಕತ್ತರಿಸಿ, ಒಬ್ಬರ ಗಂಟಲವನ್ನು ಒಬ್ಬರು ಹಿಚುಕಿ ರಕತವನ್ನು ಕುಡಿಯುಬೇಕೆಂಬ ಲಾಲಸೆವನ್ನು ಹುಟ್ಟಿಸುವ ಯಾಂತ್ರಿಕಯುಗದ ಅವತಾರವನ್ನು ಸದೆಬಡಿದು ವೇದಕಾಲೀನ ಆರ್ಯಾವರ್ತದ ಪುನುರುಜ್ಜೀವನ ಮಾಡುವದೇ ಕಲ್ಕ್ಯವತಾರದ ರಹಸ್ಯ. ಯಾಂತ್ರಿಕಯುಗದ ಅಧಃಪತನದಲ್ಲಿಯೇ ಕಲ್ಕಿಯ ಅವತಾರ. ವೈಜ್ಞಾನಿಕಯುಗವನ್ನು ಪೃಥ್ವಿಯಿಂದ ಹೊರದೋಡಿಸುವದೇ ಕಲ್ಕಿಯ ಹೆಗ್ಗುರಿ. ಪರಸ್ಸರರಲ್ಲಿದ್ದ ವಿರೋಧಭಾವವನ್ನು ನಾಶಮಾಡಿ ಸ್ನಿಗ್ಧಭಾವದಿಂದ ನಡೆದುಕೊಳ್ಳಲಿಕ್ಕೆ ಹಚ್ಚಿ ಆನಂದದಿಂದ ನಲಿದು ಪಾಡಿ, ಮತ್ತರನ್ನಾಗಿ ಮಾಡುವದು ಕಲ್ಕಿ ಯುಗವು. ಮಲ್ಲೇಶಿಯೂ ‘ ಬರಲಿ, ಬರಲಿ ’ ಎಂದು ಕೂಗುತ್ತಿದ್ದ ಯುಗವು ಕಲ್ಕಿ. ಸಮಾಜದಲ್ಲಿ ಶಾಂತತೆಯನ್ನು ಸ್ಥಾಪಿಸುವ ಯುಗವು **ಕಲ್ಕಿ**.

# ಅರಿಕೆ

ನಮ್ಮ **ಸಾಹಿತ್ಯ ಪ್ರಕಟನ ಮಂದಿರವು** ತನ್ನ ಎರಡನೆಯ ಪ್ರಕಟನೆಯನ್ನು– ಶ್ರೀ. **ರಮಾಕಾಂತರ** ಲೆಕ್ಕಣಿಕೆಯಿಂದ ಹೊರಬಿದ್ದು ಬಂದ ಈ "ಕಲ್ಕಿ"ಯನ್ನು ಪ್ರಕಟಮಾಡಿ ತನ್ನ ಸಾಹಿತ್ಯಸೇವೆಯನ್ನು ಮುಂದರಿಸಹತ್ತಿದೆಯೆಂದು ಹೇಳಲು ಹರುಷವಾಗುತ್ತದೆ.

ದೇವದೇವನ ದಶಾವತಾರಗಳಲ್ಲಿ "ಕಲ್ಕಿ" ಎಂಬ ಕಡೆಯ ಅವತಾರದ ಕಥೆಯೆಂದು ಕೆಲವರು ಊಹಿಸಬಹುದಾದ ಸಂಭವವಿದೆ. ಕಲಿಯುಗದಲ್ಲಿ "ಕಲ್ಕಿ"ಯ ಅವತಾರವಾಗಲು ಧರ್ಮ–ನೀತಿ, ಆಚಾರ-ವಿಚಾರಗಳೆಲ್ಲ ನಾಶಹೊಂದಿ ಅವುಗಳ ಬದಲು ಅಧರ್ಮ-ಅನೀತಿ, ದುರಾಚಾರ–ದುರ್ವಿಚಾರಗಳ ಸಂಪೂರ್ಣ ಸಾಮ್ರಾಜ್ಯವು ಸ್ಥಾಪನೆಯಾಗಬೇಕು. ಅಂದರೆ 'ಕಲ್ಕಿ'ಯ ಅವತಾರವಾಗುವದು. ಈ ಅವತಾರದ ಕಾರ್ಯವು ಮುಗಿಯಿತೆಂದರೆ–ಮತ್ತೆ ಸತ್ಯ ಯುಗವೋ–ಇನ್ನಾವುದೋ ಒಂದು ಒಳ್ಳೆ ಕಾಲವು ಬರುವದೆಂದು ನಾವೆಲ್ಲರೂ ಓದಿ ತಿಳಕೊಂಡು ನಂಬಿ ಕುಳಿತಿದ್ದೇವೆ. ಆ ಕಾಲವು ಬೇಗ ಒದಗಿ ಬರಲೆಂದು ಜನರು ಹಾರೈಸುವರೆಂದು ಗ್ರಹಿಸಿ ಮುಂದೆ ಸಾಗುವಾ.

ಅವತಾರವಾಗಬೇಕಾಗಲಿರುವ ಪೂರ್ವರಂಗವು-ಇಂದು-ಈ ಕಾಲಕ್ಕೆ ಮುಗಿದು ಬಿಟ್ಟದೆ. ಎಲ್ಲೆಲ್ಲಿಯೂ–ಗೋಳಾಟದ ಬಾಳು ನಿಗಿನಿಗಿ ಬೆಂಕಿಯಲ್ಲಿ ಬೇಯಹತ್ತಿದೆ. ಈ ತೆರದಲ್ಲಿ ಸರ್ವತೋಮುಖಿಯಾಗಿ ಬೆಳೆಯುತ್ತಿರುವ-ಹೊಟ್ಟೆಗೆ ಹಿಟ್ಟಿಲ್ಲದೆ–ನರಳುತ್ತಿರುವ ಜೀವನ ಚಿತ್ರವೇ ನಮ್ಮ ಈಗಿನ ಸಮಾಜವು. "ಕಲ್ಕಿ"ಯಲ್ಲಿ ಇಂಥ ಸಮಾಜ ಸನ್ನಿವೇಶದ ಚಿತ್ರವೊಂದನ್ನು ಪ್ರಮೇಯರೂಪಕವಾಗಿ ಇಟ್ಟಿದ್ದಾರೆ. ಇದು ಮಾತ್ರ ಬಿಡಿಸಲು ಬಲು ಗಡುಚಾದ ಪ್ರಮೇಯವೆಂದು ಧಾರಾಳವಾಗಿ ಹೇಳಬಲ್ಲೆವು.

ವಿಚಾರಿಗಳು- ಬುದ್ಧಿಶಾಲಿಗಳು—ಭೂತದಯೆಯುಳ್ಳವರು ಸಾಮಾನ್ಯ ಜನತೆಯು ಬಾಳಿನ ಪಾಡು ಮಣ್ಣುಗೂಡುತ್ತಿರುವದನ್ನು ಕಂಡೂ ಸುಮ್ಮ ನಿರಬಹುದೇ—ಎಂದು ತುಸು ಮುನಿಸಿನಿಂದ ವಿಚಾರಿಸಬೇಕಾಗಿದೆ. ಈ ಭೀಕರ ಕಾಲನ ದವಡಿಯಿಂದ "ಚಿನ್ನಮ್ಮ, ಮಲ್ಲೇಶಿ, ಕಲ್ಲ" ಇಂಥ ಅನೇಕಾನೇಕ ಜನರ ಕುಟುಂಬಗಳನ್ನು ಪಾರುಮಾಡಲು ದಾರಿಯಿಲ್ಲವೇ- ಎಂದೂ ಮನವು ಮಿಡುಕುತ್ತಿರುವದನ್ನು ವಾಚಕರು ಇಲ್ಲಿ ಕಾಣಬಹು ದೆಂದು ಬಗೆದಿದ್ದೇವೆ.

ಇನ್ನು, ತಮ್ಮ ಈ ಕೃತಿಯಾದ "ಕಲ್ಕಿ"ಯನ್ನು ನಮಗೆ ಪ್ರಕಾಶನ ಗೊಳಿಸಲು ಅನುಮತಿಯನ್ನು ಕೊಟ್ಟ ಶ್ರೀ ರಮಾಕಾಂತರಿಗೆ ನಾವು ತುಂಬಾ ಋಣಿಯಾಗಿದ್ದೇವೆ. ಈ ಪ್ರಕಾಶನ ಕಾರ್ಯದಲ್ಲಿ ನಮಗೆ ಬೆಂಬಲವನ್ನಿತ್ತ ಹಲವು ಹೊಸ ಗೆಳೆಯರ ಉಪಕಾರವನ್ನು ಸ್ಮರಿಸಬೇಕಾ ಗಿದೆ. ಅದರಂತೆ ಕರ್ನಾಟಕ ಪ್ರಿಂಟಿಂಗ ವರ್ಕ್ಸಿನವರು ಅಲ್ಪಾವಧಿಯಲ್ಲಿ, ರಾಯಚೂರನಲ್ಲಾಗುವ ಸಾಹಿತ್ಯಸಮ್ಮೇಲನದ ಹೊತ್ತಿಗೆ ಮುದ್ರಿಸಿ ಕೊಟ್ಟದಕ್ಕಾಗಿ, ಅವರ ಉಪಕಾರವನ್ನು ಸ್ಮರಿಸಿ, ನಮ್ಮ ಭಾಷಾಭಿಮಾನಿ ಗಳ ವಾಚನಾಭಿರುಚಿಗಳುಳ್ಳವರ ಬೆಂಬಲವನ್ನು ಕೋರುತ್ತೇವೆ.

ಪ್ರಕಾಶಕರು.

# ಕಲ್ಕಿ

## ಪಾತ್ರಗಳು

**ಮಲ್ಲೇಶಿ** :— ಹಳ್ಳಿಯವ ; ಪಟ್ಟಣಕ್ಕೆ ದುಡಿಯಲು ಬಂದವ.
ಗಟ್ಟಿಗ; ಗಿರಣಿಯಲ್ಲಿ ಕೆಲಸ ಮಾಡುವವನು.

**ಚಿನ್ನಮ್ಮ** :— ಅವನ ಹೆಂಡತಿ. ಹಳ್ಳಿಯವಳು.

**ಕಲ್ಲ** :— ಮಲ್ಲೇಶಿಯ ಗೆಳೆಯ. ಗಿರಣಿಯಲ್ಲಿ ಕೆಲಸಮಾಡುವವ.

**ಬೀರ** :— ಕಲ್ಲನ ಗೆಳೆಯ.

# ಕಲ್ಕಿ

## ಪ್ರಮೇಯ ಒಂದು

ಚಿನ್ನಮ್ಮ ಹಳ್ಳಿಯ ಹೆಂಗಸು. ಆಕೆಯ ಗಂಡ ಮಲ್ಲೇಶಿ-ಅವನೂ ಹಳ್ಳಿಯವ. ಪಟ್ಟಣಕ್ಕೆ ಬಂದವರು ಅವರು. ಪಟ್ಟಣದಲ್ಲಿ ದುಡಿದು ಸಿರಿವಂತರಾಗಬೇಕೆಂಬ ಬಲವತ್ತರವಾದ ಇಚ್ಛೆಯಿಂದ ತಮ್ಮ ಮುರುಕು ಮನೆಯನ್ನು ಬಿಟ್ಟು, ತಮ್ಮ ಗೇಣು ಹೊಲವನ್ನು ಬೀಳುಗೆಡುವಿ, ಆಪ್ತೇಷ್ಟರನ್ನು ತ್ಯಜಿಸಿ ಪಟ್ಟಣಕ್ಕೆ ಬಂದವರು.

ಚಿನ್ನಮ್ಮ ನಡುಹರೆಯದ ಹೆಂಗಸು. ಅವಳ ಮೈಬಣ್ಣ ನಸುಗೆಂಪು. ಮೈಕಟ್ಟು ತುಸು ಅಚ್ಚುಕಟ್ಟು ; ನಿಲುವಿಕೆ ಎತ್ತರ. ಶಹರದವರ ಒನಪು ಒಯ್ಯಾರ ಅವಳಿಗೆ ಏನೂ ಗೊತ್ತಿಲ್ಲ. ಅವಳ ಗಂಡ-ಮಲ್ಲೇಶಿ ಬಹು ಗಟ್ಟಿಗ. ಆತ ಕಲಿತದ್ದು ಅಯ್ಯನವರ ಶಾಲೆಯಲ್ಲಿ. ಓದು-ಬರೆಯಲು ತಕ್ಕಮಟ್ಟಿಗೆ ಬರುತ್ತಿತ್ತು ಆತನಿಗೆ. ಆತ ಬಹು ಆಕಾಂಕ್ಷಿ. ಹಳ್ಳಿಯಲ್ಲಿ ಹೊಟ್ಟೆ ಹೊರೆದುಕೊಂಡು ಕೈಯಲ್ಲಿ ನಾಲ್ಕು ದುಡ್ಡುಮಾಡಿಕೊಂಡು ನೆಮ್ಮದಿಯಾಗಿರಲು ಶಕ್ಯವಿಲ್ಲೆಂದು ಬಗೆದು ಮಲ್ಲೇಶಿಯು ಪಟ್ಟಣಕ್ಕೆ ಬಂದು ಎರಡು ಮೂರು ವರುಷಗಳು ಗತಿಸಿ ಹೋದವು.

ರಾತ್ರಿ ಎಂಟು ಗಂಟೆಯ ಸಮಯ. ಮಲ್ಲೇಶಿಯು ಮನೆಯಲ್ಲಿಯೇ ಇದ್ದನು. ಆತನಿದ್ದ ಮನೆ ಅಷ್ಟೇನು ಅಚ್ಚುಕಟ್ಟಾಗಿದ್ದಿಲ್ಲ. ಬಡವನ ಮನೆ. ಸುದಾಮನ ಮನೆಯೆಂದರೂ ಸರಿಯೆ. ಆತನ ಮನೆಯೆಂದರೆ– ಇಟಕರಿಯಾದ ಅಡಗಿಯ ಮನೆ ; ಅದರ ಮುಂದೆ ಒಂದು ಚಿಕ್ಕದ್ದಾದ **ಕೋಣೆ.**

ಮನೆಯಲ್ಲಿ ಚಿನ್ನಮ್ಮ ಇದ್ದಿಲ್ಲ. ಮಲ್ಲೇಶಿಯ ಮನಸ್ಸು ಇಂದು ಬಹಳ ಅಶ್ವಸ್ಥವಾಗಿತ್ತು. ಅತ್ತಿತ್ತ ತಿರುಗಾಡುತ್ತಿದ್ದ. ತನ್ನ ಕೋಟಿನ ಕಿಸೆಯಲ್ಲಿ ಕೈಹಾಕಿ ನೋಡಿದ. ನಾಲ್ಕಾರು ಆಣೆ ರೊಕ್ಕವನ್ನು ಹೊರಗೆ ತೆಗೆದು ದೀಪದ ಬೆಳಕಿನಲ್ಲಿ ಎಣಿಸಿ ಟೊಂಕಕ್ಕೇರಿಸಿದ. ಪೆಟ್ಟಿಗೆಯ ಬೀಗವನ್ನು ಮುರಿಯಬೇಕೆಂದು ಪ್ರಯತ್ನಿಸಹತ್ತಿದ. ಹೊರಗಿನಿಂದ 'ಮಲ್ಲೇಶಿ ಮಲ್ಲೇಶೀ' ಎಂಬ ಕೂಗು ಕೇಳಿತು. ಅದನ್ನಷ್ಟಕ್ಕೆ ಬಿಟ್ಟು ಮುಂದಕ್ಕೆ ಬಂದು—

**ಮಲ್ಲೇಶಿ** :— (ಗಾಬರಿಗೊಂಡು) ಯಾರು ?

(ಹೊರಗಿನಿಂದ "ಮಲ್ಲೇಶಿ, ಮಲ್ಲೇಶಿ," ಎಂದು ಮತ್ತೆ ಕೂಗು)

**ಮಲ್ಲೇಶಿ** :—(ಕೈಯಲ್ಲಿ ದೀಪವನ್ನು ತೆಗೆದುಕೊಂಡು ನಾಲ್ಕು ಹೆಜ್ಜೆ ಮುಂದೆ ಬಂದು) ಯಾರು ? ...... (ಗಟ್ಟಿಯಾಗಿ) ಯಾರವರು ?

[ಹೊರಗಿನಿಂದ ನಾ ಕಲ್ಲ ; ಏನ ಮಾಡತಿಯೋ ಬಾಕಲಾ ತೆಗೀ.]

**ಮಲ್ಲೇಶಿ** :— ತುಸು ನಿಂದ್ರು, ಬಂದೆ ; ಬಾಕಲ ತೆಗೀತೀನಿ.

(ಬಾಗಿಲವನ್ನು ತೆಗೆಯುವನು. ಕಲ್ಲನು ಬರುವನು.)

**ಕಲ್ಲ** :— ಏನೋ ಸಪ್ಪಳಾ ಬಾಳ ಮಾಡತಿದ್ದಿ. ಕನ್ನಾ–ಗಿನ್ನಾ ಹಾಕ್ತಿದ್ದಿಯೇನೋ ?

**ಮಲ್ಲೇಶಿ** :— (ದೀಪವನ್ನು ಕೆಳಗಿಟ್ಟು) ಹೌದು ಕಲ್ಲ, ನನ್ನ ಮನ್ಯಾಗ ನಾ ಕನ್ನಾ ಹಾಕ್ತಿದ್ದೆ. ಏ ನಿಂತ್ಯಾಕೋ, **ಕುಂತಕೋ.**

**ಕಲ್ಲ** :—( ಕುಳಿತುಕೊಳ್ಳುತ್ತ ) ಮನ್ಯಾಗ ಮೊದಲು ಕಲೀಬೇಕ ನೋಡ ಕನ್ನಾ ಹಾಕೂದು. ಇಲ್ಲಿ ಬಂತಂದರ ಆ ಮ್ಯಾಗ ಎಡ್ನೇದವರ ಮನ್ಯಾಗ.

**ಮಲ್ಲೇಶಿ** :—ನಾ ಯಾಕ ಕನ್ನಾ ಹಾಕಲಿಕ್ಕೆ ಹೋಗಲೋ ಎರಡ್ನೆದವರ ಮನೀಗೆ. ದೇವರು ಎಲ್ಲೀತನಕ ರಟ್ಟೀ ಕೊಟ್ಟಾನ ಅಲ್ಲೀತನಕ ದುಡುದು ತಿನ್ನೂದ. ದುಡಿದು ತಿನ್ನೂದರ ಮುಂದ ಅದ್ಯಾತಕ ಹತ್ತೀತು.

**ಕಲ್ಲ** :—ದುಡದರ ಗಂಟ ಆಗತದೇನೋ ? ನೀ ಇಲ್ಲಿ ಬಂದು ಏಸು ವರುಸ ಆಯಿತಪಾ. ೨–೩ ವರಸಾರ ಆಯಿತಿಲ್ಲೊ.

**ಮಲ್ಲೇಶಿ** :—ಎರಡು ಮೂರ ಯಾಕೋ, ನಾಲ್ಕು ವರಸ ಆಯಿತು ನಾಳಿನ ಸಣಸೋಮಾರಕ.

**ಕಲ್ಲ** :—ಗಂಟಮಾಡಬೇಕೆಂದು ಬಂದಿ ಈ ಊರಿಗೆ ; ಎಷ್ಟ ಕೂಡಿಹಾಕ್ದಿ ಈ ನಾಲ್ಕ ವರಸದಾಗ. ಒಂದು ದುಡ್ಡಾರ ನಿನ್ನ ಹಂತ್ಯಾಕ ಈಗ– ಐತೇನ ಹೇಳಬಾರದ ?

**ಮಲ್ಲೇಶಿ** :—ಎಲ್ಲಿಂದ ಬರತೈತೊ, ಒಂದು ದುಡ್ಡು. ಸಾಲದಾಗ ಇದ್ದೀನಿ ; ಮೈಹೂರೇ ದುಡಿದಾಂಗ ಮಾತ್ರ ಆಯ್ತು.

**ಕಲ್ಲ** :—ಅದಕ ನಾ ಅಂದದ್ದು ನೀ ಕನ್ನಾ ಹಾಕಲಿಕ್ಕೆ ಕಲೀತಿಯೋ ಏನೋ ಎಂದು. ಅದು ಮಾಡಿದ್ರ ರೊಕ್ಕ ಮಾತ್ರ ರಗಡ. ಇವನಪ್ಪನ ದಿನಾ ಯಾರ ಅಲ್ಲಿ ದುಡ್ಯಾಕ ಹೋಗಬೇಕೋ. ಏಟು ದುಡಿದ್ರು ಏನ ಐತಿ–ಕಟಗ ತಂಗಳ ರೊಟ್ಟಿ–ಕಾರ ತಪ್ಪಿದ್ದಲ್ಲ ನಮುಗ.

**ಮಲ್ಲೇಶಿ** :—ಕನ್ನಾ ಹಾಕಿದ್ರ ಐತಿ ನೋಡು–ನಮುಗ ಜೇಲ್ ಗೊತ್ತೈಯಿತಿಲ್ಲೋ.

**ಕಲ್ಲ** :—ಸಿಕ್ರ ಜೇಲಿಗ ಹೋಗ್ಬೇಕು ; ಪಾರಾದವೆಂದ್ರ ರೊಕ್ಕಾ ಇಟಗೊಂಡ ಆರಾಮ ಇರಬೇಕು. ನಮ್ಮ ಗಿರಣಿ ಮಾಲಕ……

**ಮಲ್ಲೇಶಿ** :—( ಕಾತುರದಿಂದ ) ಅವಾ ಏನೋ ! ?

**ಕಲ್ಲ**:—ನಿನಗ ಗೊತ್ತಿಲ್ಲ ಈ ಸುದ್ದಿ; ಎಲ್ಲಾರಿಗೂ ಗೊತ್ತದ ಇದು.

**ಮಲ್ಲೇಶಿ** :—ಏನೋ ಕಲ್ಲ ಅದು ?

**ಕಲ್ಲ** :—ನೀ ಪೆದ್ದ ಬಿಡು ಮಲ್ಲೇಶಿ, ಇದು ನಿನಗ ಗೊತ್ತಿಲ್ಲಂದ್ರ. ನಮ್ಮ ಗಿರಣೀ ಮಾಲಕ ಶಿರಿಮಂತ ಆಗ್ಯಾನಲ್ಲ-ಅದು ಹ್ಯಾಂಗ ಅಂತ ಮಾಡೀ ; ಮಂದಿ ಗಂಟು ಎತ್ತಿಹಾಕಿ ಆಗ್ಯಾನಂತ. ಅಲ್ಲಪಾ; ಅವಾ ಹೀಗ ಮಾಡ್ಯಾನಲ್ಲ ಅವನ್ಯಾಕ ಜೇಲಿಗ್ಹಾಕೂದುಲ್ಲ. ನಮ್ಹೊಟ್ಟಿಗೆ ಇಲ್ಲ ಅಂತ ನಾವು ಕದ್ದರ ನಮ್ಮನ್ಯಾಕ ಹಾಕತಾರ ಜೇಲಿಗೆ. ಬಡವರಗೆ ಬ್ಯಾರೇ ಕಾಯಿದೇ ಶಿರಿಮಂತರಿಗೆ ಬ್ಯಾರೇ ಕಾಯಿದೇ ಅದಾವೇನ ಈಗ ?

**ಮಲ್ಲೇಶಿ** :—ಅವನ ಪಾಪ ಅವನ ಸುತ್ತ ; ನಾವ್ಯಗೊಂಡು ಏನ ಮಾಡೂದೈತಿ.

**ಕಲ್ಲ** :—ಏನ ಮಬ್ಬ ಅದಿಯೋ ನೀನು ; ಇಲ್ಲಿ ನೋಡು—ನಾವು ದುಡೀತೇವೆಷ್ಟು ಅವನ ಗಿರಿಣ್ಯಾಗ. ದಿನಾ ಹತ್ತು ತಾಸು. ಹತ್ತ ತಾಸಿಗೆ ಕೂಲೀ ಕೊಡತಾನ ನಮಗ ಒಂದು ಆರು ಆಣೆ. ನಮ್ಮಿಂದ ಅವಗ ಫಾಯಿದೆ ಎಷ್ಟದ.

**ಮಲ್ಲೇಶಿ** :—ಕಲ್ಲಾ, ಗಾಳಿ ಬರತದ, ಒಂದಿಷ್ಟು ಕದಾ ಮುಚ್ಚು. ( ಕಲ್ಲಾ ಬಾಕಲ ಇಕ್ಕುವನು. ) ನಮ್ಮಿಂದ ಅವಗ ಫಾಯಿದೆ ಅದ, ಅವನಿಂದ ನಮಗೂ ಅದ.

**ಕಲ್ಲ** :—ಅವನಿಂದ ಏನ ಅದ ನಮಗ; ಸ್ವಲ್ಪ ಹೇಳು.

**ಮಲ್ಲೇಶಿ** :—ದಿನಾ ನಮಗ ಕೂಲೀ ಕೊಡ್ತಾನಲ್ಲ—

**ಕಲ್ಲ** :—ಯಾರುಪಕಾರ್ಕ ಕೊಡತಾನಪಾ. ನಾವು ದುಡೀತೇವಿ ಅಂತಾ ಕೊಡತಾನ. ಒಂದಿವಸ ನಾವು ಮನ್ಯಾಗ ಕೂತರ ಕೊಡತಾನೇನು ಕೂಲಿ. ಅದನ್ನ ಮುರಕೊಂತಾನ. ಅದನ್ನ ಬಿಡಪಾ. ಸ್ವಲ್ಪ ಹೋಗ

ಲಿಕ್ಕೆ ತಡ ಮಾಡಿದ್ರ ಮುರಕೊಂತಾನ; ಅಂದ ವ್ಯಾಗ ಅವನದೇನ ಹಂಗು ನಮುಗ. ಮಲ್ಲೀಶಿ, ಸಾವೂತನಕ ದುಡಿ ನೀ-ನೀ ಕೂಲೀನ; ಮಾಲಕ ಮಾಲ್ಕನ. ಕೂಲೀ ಮಾಲಕ ಆಗಾಕ ಶಕ್ಯ ಇಲ್ಲ; ಮಾಲಕ ಕೂಲೀ ಆಗಾಕ ಶಕ್ಯ ಇಲ್ಲ.

**ಮಲ್ಲೀಶಿ** :—ಮುಂದೇನಂತೀ ?

**ಕಲ್ಲ** :— ನಾಯೇನನ್ನೂದು, ನೀ ಕನ್ನಾ ಹಾಕಲಿಕ್ಕೆ ಕಲೀತೀಯೋ ಏನೋ ಅಂತ. ಯಾಕಂದ್ರ ನೀ ಶಿರಿಮಂತ ಆಗಬೇಕು; ಅರಾಮು ಇರ ಬೇಕು–ಅಂತಾ ಬಾಳ ಅದ ಇಚ್ಛಾ ನಿನಗ.

**ಮಲ್ಲೀಶಿ** :—ನಿನಗಿಲ್ಲೇನು ಇಚ್ಛಾ ?

**ಕಲ್ಲ** :—ನನಗೇನ ಇರತದ ತೆಲಿ; ಸಾಲಾ ತೀರಿಸಿ ಸತ್ರ ಸಾಕಾ ಗೇದ. ಗಂಟ್ಮಾಡೂದನಕ ದೂರ ಉಳೀತು.

**ಮಲ್ಲೀಶಿ** :—ನಾನೂ ಈ ಸಾಲದ ಸಲುವಾಗಿ ಮನ್ಯಾ ಗ್ಯನ್ನಾಕ್ತಿದ್ದೆ. ಏನಾರ ರೊಕ್ಕ ಅದೇನೋ ಅಂತ ಪೆಟಗ್ಯಾಗ್ನೋಡ ಬೇಕಂತ ಮಾಡಿದ್ದೆ.

**ಕಲ್ಲ** :—ಯಾಕ ಕೀಲೀ ಕ್ಯೆ ಏನಾತು ?

**ಮಲ್ಲೀಶಿ** : —ಅವಳ್ಕಡೆ ಐತಿ.

**ಕಲ್ಲ** : —ಇಲ್ಲ s ಮನ್ಯಾಗ ? ......... ಎಲ್ಲಿ ಹೋಗ್ಯಾಳ ? ನಾ ಉಂಡ್ಯಾಕ್ಯಸ ಮಲ್ಕೊಂಡಾಳಂತ್ಮಾಡಿದ್ದೆ.

**ಮಲ್ಲೀಶಿ** :—ಎಲ್ಲಿ ಹೋಗೋದೋ ಏನೋ, ಮಂಗ. ಈಗ ಬಂದರೂ ಬಂದೀತು.

**ಕಲ್ಲ** :—ಅದಕ್ಕೀಲೀ ಮುರೀತಿದ್ದೇನು ? ಚಿನ್ನಮ್ಮ ಬರೂತನಕ ಏನಗ್ಪುರ್ಸೊತ್ತಿಲ್ಲಲ್ಲ. ಇಷ್ಟೇನಪಾ ಅವಸರ ಅದರದು. ಎಲ್ಹೊಡ್ಹೋಗ್ತಿತ್ತು?

**ಮಲ್ಲೀಶಿ** :—ಅವನ್ಪಾಪ ಬಾಳ ಆಗೇದ. ಹೋದಲ್ಲಿ–ಬಂದಲ್ಲಿ ತ್ರಾಸ್ಕೊಡತಾನ. ಶನಿ ಬೆನ್ನ್ಹತ್ತಿದ್ಹಾಂಗ್ಹತ್ಯಾನ.

**ಕಲ್ಲ** :—ಎಷ್ಟ್ಕೊಡಬೆಕ್ನೀ ಅವಗ ?

**ಮಲ್ಲೇಶಿ** :—ಮೂವತ್ತಾರು ರುಪಾಯಿ ಕೊಡಬೇಕವಗ.

**ಕಲ್ಲ** :—ಈಡ ಇಟ್ಟಿಯಾ ಅವನ ಹತ್ತರ.

**ಮಲ್ಲೇಶಿ** :—ಎಲ್ಲೀದ ಇಡ್ಲೋ ಈಡು. ಎರಡ ವರಸದ ಹಿಂದ ಮೂರ ಇಪ್ಪತ್ತಕ್ಕ ಈಡ ಇಟ್ಟದ್ದು ಇನ್ನೂ ಬಿಡಿಸಿಕೊಂಡಿಲ್ಲ. ಅವಗ ನೋಡು ಕಲ್ಲಾ, ಈಗ ಎರಡಿಪ್ಪತ್ತು ರುಪಾಯಿ ಕೊಟ್ಟೇನಿ, ಅವ ಇನ್ನಾ ಮೂರ ಇಪ್ಪತ್ತ ರುಪಾಯಿ ಕೊಡಬೇಕಂತಾನ. ಈಗ ಕೊಟ್ಟಿದ್ದೆಲ್ಲಾ ಬಡ್ಡಿ ಅಂತ.

**ಕಲ್ಲ** :—(ಜೇಬಿನಲ್ಲಿಯ ಬೀಡಿಯನ್ನು ತಗೆಯುತ್ತ) ಮೂವತ್ತಾರು ರುಪಾಯದವಗ ಎಷ್ಟು ಕೊಟ್ಟೇದಿ. (ಜೇಬಿನಲ್ಲಿ ಬೆಂಕಿಪಟ್ಟಣವನ್ನು ಹುಡಕಿ) ಮಲ್ಲೇಶಿ, ಕಡ್ಡೀ ತಗೋ.

**ಮಲ್ಲೇಶಿ** :—(ಎದ್ದು ಕಡ್ಡಿಯನ್ನು ಹುಡುಕುತ್ತ) ಅವಗ ಎರಡ ಇಪ್ಪತ್ತು, ವ್ಯಾಲ ಹತ್ತು ರುಪಾಯಿ ಕೊಟ್ಟೇನಿ.

(ಎಲ್ಲಿ ಇಟ್ಟ್ಯಾಳೋ ಕಡ್ಡಿ, ಕಲ್ಲಾ, ಅಲ್ಲಿ ಹಾಸಿಗೀ ಬುಡಕ ಇರಬೇಕ ಕಾಣತೈತಿ ನೋಡು.)

**ಕಲ್ಲ** :—(ಹಾಸಿಗೆಯ ಬುಡಕ ಕಡ್ಡಿಯನ್ನು ಹುಡುಕಿ) ಸಿಕ್ಕಿತು ಬಾ. (ಕೊರೆಯುಹತ್ತುವನು. ಕಡ್ಡಿಯು ಹತ್ತುವದೇ ಇಲ್ಲ.) ಏನ ಮಂಜಾಳ ಇವು. ಹತ್ತುವದss ಇಲ್ಲ. ನಮ್ಮ ಆಗಿ ಬಿಟ್ಟಾವ ಕಡ್ಡಿ.

**ಮಲ್ಲೇಶಿ** :—(ಮುಂದಕ್ಕೆ ಬಂದು) ಇಲ್ಲಿ ತಾ ನಾ ಹಚ್ಚತೀನಿ. (ಎಂದು ಕೊರೆದು ಹಚ್ಚುವನು. ಕಲ್ಲ ಸೇದಹತ್ತುವನು) ಅವಗ ಅಷ್ಟು ರುಪಾಯಿ ಕೊಟ್ರೂ ಅವನ ಕಾಟ ಬಾಳ. ಇನ್ನೂ ಗಂಟ ಮುಟ್ಟಿಲ್ಲಂತ. ಬರೇ ಬಡ್ಡಿ ಅಂತ ಅದು.

**ಕಲ್ಲ** :—ಹಳ್ಳೀ ಊರ ಪಾಡ; ಇಲ್ಲೇನೈತಿ ಶಾರದಾಗ.

**ಮಲ್ಲೇಶಿ** :—ನಾವು ಕತ್ತೀ ಹಾಂಗ ದುಡೀಲಿಕ್ಕೆ ಹುಟ್ಟೇವಿ ಅಂತ ಕಾಣಸತದ. ಒಂದು ಸ್ವಲ್ಪಾರ ಸುಕ ಜೀವಕ್ಕ.

**ಕಲ್ಲ** :—ಜಾಣಾ; ನಾ ಅನ್ನುದಾದರೂ ಅದೇ. ನಾವೂ ಮನಸ್ಯಾರೂ-ಅವರೂ ಮನಸ್ಯಾರು. ಅವರು ಹಾಗ್ಯಾಕ, ನಾವ ಹೀಗ್ಯಾಕ. ಅವರು ಅರಾಮ ಇರಬೇಕು; ನಾವ ಕಷ್ಟಬಡಬೇಕು ಇದೆಲ್ಲಿಯ ನ್ಯಾಯಪಾ ?

**ಮಲ್ಲೇಶಿ** :—ಹಿಂದಿನ ಜನ್ಮದ ಪುಣ್ಯಾ ಅವರದು. ಈಗ ಅದರ ಉಪಬೋಗ ಮಾಡತಾರ. ಇದು ಶಿವನಾಟ ನೋಡು.

**ಕಲ್ಲ** :—ಎಲ್ಲಿಯ ಶಿವಾ; ಎಲ್ಲಿಯ ಪುಣ್ಯ- ಎಲ್ಲಾ ಸುಳ್ಳು. ಕಾಯಕದ ಅಪನವರು ಮಾತಾಡಿದ್ಹಾಂಗ ಮಾತಾಡಿತೀಯಲ್ಲ. ಎಲ್ಲಾ ನಮ್ಮ ಕೈಯಾಗದ.

**ಮಲ್ಲೇಶಿ** :—ನಮ್ಮ ಕೈಯಾಗಿದ್ದರ ನೀ ದುಡದು ಮುಂದ ಬರಬೇಕಾಗಿತ್ತು. ನೀ ಮುಂದ ಬಂದಿಲ್ಲಂದ ಮ್ಯಾಲೆ ಸೋಮಾರಿ ಇರಾಕಬೇಕ.

**ಕಲ್ಲ** :—ದಿನಾ ಹತ್ತ ತಾಸು ದುಡೀತೀವಿ-ನಾವ ಸೋಮಾರಿಗಳs. ಅವರೇನ ಮಾಡತಾರಪಾ; ಸುಮ್ಮನ ಮುದ್ದಿ ಗುಂಡು ಕೂತ್ಹಾಂಗ ಕೂಡತಾರ-ಅವರ ಮಾತ್ರ ಸೋಮಾರಿ ಅಲ್ಲ. ಮಲ್ಲೇಶಿ, ಅಂತವರಿಗ ರೊಕ್ಕ ಬರತದಲ್ಲ; ಅವರು ದಿನಕ್ಕ ದಿನಾ ಶಿರಿಮಂತರಾಗತಾರ; ನಾವು ದಿನಕದಿನಾ ಬಡವರ ಆಗತೀವಿ. ಇದೇ ಈಗಿಂದು ನ್ಯಾಯ್ಯಾಣ್ಶ್ರದ.

**ಮಲ್ಲೇಶಿ** :—ಅವರ ನಶಿಬಪಾ-ಪಡಕೊಂಡ ಬಂದಾರ.

**ಕಲ್ಲ** :—ನಶೀಬೇನ ಸುಡತದ ಅವರದು. ನಮಗ ನಾವು ದುಡಿದಷ್ಟು ಕೂಲೀ ಯಾಕ ಕೊಡುದುಲ್ಲಾ. ನಾವು ಹತ್ತು ರುಪಾಯ ಕೆಲ್ಸಾ ಮಾಡಿದ್ರ ಒಂದು ಆರು ಆಣೆ ಕೊಡತಾರ ನಮಗ. ಉಳಿದದ್ದು ನಮ್ಮದು ತುಡುಗ ಮಾಡಿದ್ಹಾಂಗ ಅಲ್ಲೇನು ಅವರು. ಅವರನ್ನ್ಯಾಕ ಹಾಕೂದಿಲ್ಲ ಜೇಲಿಗ. ದೊಡ್ಡ ಗಿರಿಣ್ಯಾಗ ಮೊನ್ನೆ ಸಂಪ ಆತಲ್ಲ.

**ಮಲ್ಲೇಶಿ** :—(ಆಶ್ಚರ್ಯದಿಂದ) ಸಂಪ ಆತ !

**ಕಲ್ಲ** :—ನಿನಗ ಗೊತ್ತಿಲ್ಲ ಇದು. ಮೊನ್ನೆ ಸಂಪ ಆದದ್ದು. ಆ ಕಾಲಕ್ಕ ನಮ್ಮನ್ನ ದನಾ ಬಡದ್ಹಾಂಗ ಬಡದರು. ಎಷ್ಟ್ಯೋ ಜನರ ಕಾಲ ಮುರದಾವ; ಕೈ ಮುರದಾವ. ತಲಿ ಒಡದಾವ; ಇಬ್ಬರು ಮೂರು ಮಂದಿ ಸತ್ತು ಹೋದರಲ್ಲೊ. ನನ್ನ ಎದಿ ನಡಗತ ಬಿಡು ಅದನ್ನ ನೆನೆಸಿದ್ರ ನಮ್ಮ ಗಿರಣ್ಯಾಗೂ ಆಗತದಂತ ಸಂಪು.

**ಮಲ್ಲೇಶಿ** :—ನಮಲ್ಲೇನು ಆಗತದ ಸಂಪು. ಶಕ್ಯ ಇಲ್ಲ.

**ಕಲ್ಲ** :—ಸಂಪ ಆದರ ನೀ ಮಾಡತೀಯಿಲ್ಲೋ ?

**ಮಲ್ಲೇಶಿ** :— ಸಂಪ ಯಾಕ ಮಾಡತಾರ ?

**ಕಲ್ಲ** :—ಮೊನ್ನೆ ಒಬ್ಬಾವ ಬಂದು ಲಗಚರ ಕೊಟ್ಟ ಹೋದ. ಏನಂತಂದರ "ಈ ಗಿರಣೀ ಮಾಲಕರು ಕಳ್ಳರು, ಠಕ್ಕರು, ಸೋಮಾರಿಗಳು. ನಿಮ್ಮ ದುಡಿತದ ಮ್ಯಾಲಿಂದ ಅವರು ಇಷ್ಟು ಶ್ರೀಮಂತರಾಗ್ಯಾರ ಅವರಲ್ಲಿಯ ಎಲ್ಲಾ ಗಂಟು ನಿಮ್ಮದು. ನಿಮ್ಮದು ನಿಮಗ ಕೊಡುವದಿಲ್ಲ' ಅಂತ ಬಾಹಳ ಹೇಳಿದ. ನಮಗ ಕೂಲೀ ದಿನಾ ಒಂದು ರುಪಾಯಿ ಕೊಡಬೇಕಂತ ಸಂಪು ಮಾಡುವವರಿದ್ದಾರ.

**ಮಲ್ಲೇಶಿ** :—ಸಂಪು ಮಾಡುವವರು ಹುಚ್ಚ ಇದ್ದಾರ. ಹೋಗಿ ಹೇಳಕೋಬೇಕು ಅವಗ; ನಮಗ ದಿನಾ ಒಂದು ರುಪಾಯಿ ಕೂಲೀ ಕೊಡಂತ. (ಹೊರಗೆ ಆಕಾಶದಲ್ಲಿ ಮೋಡ ಕವಿಯುಹತ್ತುವದು. ಮಿಂಚ ಹತ್ತುವದು. ಬಿರುಗಾಳಿ ಬೀಸುವದು.)

**ಕಲ್ಲ** :—ಮಳೀ ಬರತದ ಕಾಣಸ್ತದ ನಾ ಹೋಗತೀನಿ ಇನ್ನ ಮನೀಗೆ. (ಎದ್ದು ಕಿಡಕಿಯನ್ನು ತೆಗೆದು ಹೊರಗೆ ನೋಡುವನು.) ಮಲ್ಲೇಶೀ, ಮುಗಿಲು ಹರಿಯುವ್ಹಾಂಗ ಮಳೀ ಆಗತದ ಬಿಡು ಇವತ್ತು. (ಮತ್ತೆ ಅದನ್ನು ಇಕ್ಕಿ ಬಾಗಿಲ ಹತ್ತರ ಬರುವನು.) ಚಿನ್ನಮ್ಮ ಬರಲೇ ಇಲ್ಲ. ಬಹಳ ರಾತ್ರಿ ಆತು-ಹೋಗ್ಯಾರ ನೋಡಿಕೊಂಡು ಬರಬಾರದಾ ಹಾದಿ-ಗೀದಿ ತಪ್ಪಿರಬೇಕು.

**ಮಲ್ಲೇಶಿ**:— ಈಗ ಬರಬಹುದು ಎಲ್ಲಿ ಹೋಗತಾಳ. ಕಲ್ಲ, ಇನ್ನೊಂದು ಐದು ಮಿನಿಟು ಕೂತು ಹೋಗು. ಮಳ್ಯಾಗ ಸಿಕ್ಕಿ ಎಲ್ಲ್ಯಾರ.

**ಕಲ್ಲ**: —ಮನ್ಯಾಗ ಹಾದೀ ನೋಡತಾಳ ಹೋಗತೀನಿ.

**ಮಲ್ಲೇಶಿ**: —ನೋಡಲಿ ಬಿಡು ; ಈಗ ಹೋಗೀಯಂತ.

**ಕಲ್ಲ**: —ಚೆಂಜೀತನಕ ದುಡಿದು ಬಂದಿರತದ; ಒಂದಿಷ್ಟು ಮಲ ಕೋಳಿ. ಬಾಗಿಲಾ ಹಾಕಿಕೊಂಡು ಮಲಕೊಂಡ್ಲಂದ್ರ ನಾ ಹೊರಗ ಎಷ್ಟು ಕೂಗಿದ್ರೂ ಒಳಗ ಸಬ್ಬ ! ನಮ್ಮ ಗಿರಣಿ ಭುಂಗಾದಾಂಗ ನಾ ಒದರಬೇಕಾಗತದ. ಅದಕ ನಾ ಹೋಗತೀನಿ ಬಿಡು. ( ಬಾಗಿಲ ಹತ್ತರ ಹೋಗಿ ನಿಲ್ಲುವನು. )

**ಮಲ್ಲೇಶಿ** :—(ಸ್ವಲ್ಪ ಎದ್ದು ಮುಂದಕ್ಕೆ ಬಂದು) ಎಲ್ಲಿ ದುಡೀ ಲಿಕ್ಕೆ ಹೋಗತಾಳ ನಿಮ್ಮಾಕೀ.

**ಕಲ್ಲ** :—ನನಗ ಅದು ಗೊತ್ತಿಲ್ಲ.

**ಮಲ್ಲೇಶಿ** :—ಆಶ್ಚರ್ಯ ಬಿಡಪಾ ನಿನಗ ಗೊತ್ತಿಲ್ಲಂದ್ರ.

**ಕಲ್ಲ** :—ಮುಂಜಾನೆ ಅಡಗಿ ಮಾಡಿ ನನಗ ಉಣ್ಣಾಕ ನೀಡಿ ತಂದ ತೀರಿಸಿಕೊಂಡು ಇಷ್ಟ ಕಟಿಕೊಂಡು ಹೋದಳಂದ್ರ ಚೆಂಜಿಕೆ ಬರತಾಳ. ನೊದಲು ದೊಡ್ಡ ಗಿರಿಣ್ಯಾಗ ಇದ್ದಳು. ಕೆಲವು ದಿವಸದ ಮೇಲೆ ಅದನ್ನು ನಾ ಬಿಡ್ಸಿದೆ. ನಾ ಬಿಡ್ಸಿಂದ ನೆರೆಹೊರೆಯುವರ ಮನ್ಯಾಗ ಕೆಲಸಾ ಮಾಡ ಇದ್ದಳು.

**ಮಲ್ಲೇಶಿ** :—ದೊಡ್ಡ ಗಿರಣ್ಯಾಗಿಂದ ಯಾಕ ಬಿಡ್ಸಿದಿ ?

**ಕಲ್ಲ** :—ಅದೊಂದು ಕತೀನಿ ಐತಿ ಬಿಡು.

**ಮಲ್ಲೇಶಿ** :—ತೆಪ್ಪದ ಕೊಡತ್ತಿದ್ದಿಲ್ಲೇನು ಸಂಬಳ.

**ಕಲ್ಲ** :—ಸಂಬಳಕ ಅವರದು ಜಿಕೇರಿನೇ ಇರಲಿಲ್ಲಂತ. ತಪ್ಪದೆ ಕೊಡತ್ತಿದ್ರು. ಆ ಗಿರಣಿ ಮಾಲಕಗ ಸ್ವಲ್ಪು ಹೆಣ್ಣಿನ ಚಟಾ ಅಂತ.

ಕಣ್ಣು ಮೂಗಿನಿಂದ ನೆಟ್ಟಗಿದ್ದ ಹೆಣ್ಣು ಕೆಲಸಕ್ಕ ಬಂದರ ತೀರಿತು. ಅದರ ಸುತ್ತ ಶನೀ ಹತ್ತಿದ್ಹಾಂಗ ಹತ್ತಿ ಬಿಡತಾನಂತ. ನಮ್ಮಾಕೀಗೆ ಗಿರಣ್ಯಾಗ ಬ್ಯಾಡಾ ಕೆಲಸ-ಮನ್ಯಾಗ ಮಾಡ ಅಂತ ಹೇಳಿದನಂತ. ಅವನ ಖ್ಯಾತಿ ನನಗ ಮೊದ್ಲs ಗೊತ್ತಿತ್ತು. ಇದನ್ನು ಕೇಳಿ ಆಕಿನ್ನ ಅಲ್ಲಿಂದ ಬಿಡಿಸಿ ಬಿಟ್ಟೆ.

**ಮಲ್ಲೇಶಿ** :—ಹೀಗ್ಯಾಕ ಮಾಡತಾರ ಅವರು.

**ಕಲ್ಲ** :—ಅವರಿಗೆ ರೊಕ್ಕದ ಮದಾ ಇರತದ. ಅದರಿಂದ ಇಷ್ಟು ಕುಣಿತಾರ. ಅವರಕಿಂತ ಬಡವರs ಪಾಡಬಿಡು.

**ಮಲ್ಲೇಶಿ** :—ಕುಳಿತಾರ ಕುಳಿತುಕೊಳ್ಳೋ ಕಲ್ಲ ; ಕಾಲ ನೋಯಿಸ್ಯಾವು. ಎಷ್ಟು ಹೊತ್ತು ನಿಂದರತಿ.

**ಕಲ್ಲ** :—ಹೊತ್ತಾತು ಬಿಡು ಹೋಗತೀನಿ.

**ಮಲ್ಲೇಶಿ** :—ಒಂದ ಸ್ವಲ್ಪು ಕೆಲಸ ಇತ್ತೋ ನಿನ್ನ ಕಡಿಗೆ.

**ಕಲ್ಲ**: —( ಸ್ವಲ್ಪು ಮುಂದಕ್ಕ ಬಂದು ) ಏನ ಕೆಲಸ !

**ಮಲ್ಲೇಶಿ** :—ನಾಳೆ ಒಂದ ನಾಲ್ಕು ರುಪಾಯಿ ಕೊಡತೀಯಾ ಅವಗ ಕೊಡಾಕ. ನಿನಗ ಸಂಬಳ ಆದ ಕೂಡ್ಲೇ ಕೊಡತೀನಿ.

**ಕಲ್ಲ** :—ಎಲ್ಲಿಂದ ಬರತಾವೋ ನನ್ನ ಕಡಿಗೆ. ಒಂದು ಕಾಸು ಸುದ್ದಾ ಇಲ್ಲ ನನ್ನ ಹತ್ತರ.

**ಮಲ್ಲೇಶಿ** :—ಸಾಲದವರದು ಬಹಳ ಕಾಟ. ಅದಕ್ಕ ಕೇಳಿದೆ. ಕೊಟ್ರ ಬಹಳ ಉಪಕಾರ ನೋಡು. ಸಂಬಳ ಆದ ಕೂಡ್ಲೇ ಕೊಡತೇನೋ. ನಮ್ಮಾಕೀ ಸಂಬಳ ಆದರೂ ಕೊಡತೇನಿ.

**ಕಲ್ಲ** :—ಇದ್ದರ ಕೊಡಬೇಕಲ್ಲ. ಏನ ಮಾಡಲಿ, ನಿನ್ನ ಬಾಳೆ ನೋಡಿ ನನಗ ಬಹಳ ಕೆಟ್ಟ ಅನಿಸತದ.

**ಮಲ್ಲೇಶಿ** :—ಇಷ್ಟ ಸಾಲಾ ತೀರಿಸಿ ನಾ ನಮ್ಮ ಊರಿಗೆ ಹೋಗಿ ಬಿಡಬೇಕಂತ ಮಾಡೀನಿ.

**ಕಲ್ಲ** :—ನಾಳೆ ಮುಂಜಾನೆ ನೋಡೂನಂತ. ನಾಲ್ಕು ಕಡಿಗೆ ಕೇಳತೀನಿ ; ಎಲ್ಲಿಯ್ಯಾರ ಸಿಕ್ರು ನಿನಗ ಕೊಡತೀನಿ.

**ಮಲ್ಲೇಶಿ** :—ನನ್ನ ಸಲುವಾಗಿ ಒಂದಿಷ್ಟು ಯತನಾ ಮಾಡ. ಸಿಕ್ಕರ ನನ್ನ ನಸಿಬಾ ; ಹೋಗು ಮಳೀ ಬಂದೀತು.

**ಕಲ್ಲ** :—ಇವತ್ತಿನ ಮಿಂಚು ಬಹಳ ಬಿಡು. (ಹೋಗಹತ್ತುವನು) ಗಾಳಿ ಬಹಳ ಬಿಟ್ಟsದ ಕದಾ ಹಕ್ಕೋ. (ಎಂದು ಹೋಗುವನು. ಮಲ್ಲೇಶಿಯು ಕದವನ್ನು ಮುಚ್ಚಿಕೊಂಡು ಬರುವನು. ಮೂರು ನಾಲ್ಕು ನಿಮಿಷ ಅತ್ತಿಂದ ಇತ್ತ ಇತ್ತಿಂದ ಅತ್ತ ತಿರುಗಾಡುವನು. "ಇನ್ನೂ ಬರಲಿಲ್ಲ ಕೋಡೀ" ಎಂದು ಬಾಗಿಲ ತಗೆದು ನೋಡಿ ಇಕ್ಕುವನು. "ಎಲ್ಲಿ ಹೋಗೇದೇನೋ ಮಂಗ" ಎಂದು ನುಡಿಯುತ್ತ ಹಾಸಿಗೆಯ ಮೇಲೆ ಕುಳಿತುಕೊಳ್ಳುವನು. ಮಲಗ ತಕ್ಕವನು. ಅಷ್ಟರಲ್ಲಿ ಕದ ಬಡಿದಂತೆ ಆಗುವದು. ಹೊರಗೆ ಮಳಿಯು ಸುರಿಯುತ್ತಿರುವದು. ಮಿಂಚುತ್ತಿರುವದು. ಗದ್ದರಿಸುವದು. ಎದ್ದು ಬಾಗಿಲ ತಗೆಯುವನು. ಚಿನ್ನಮ್ಮ ನಡುಗುತ್ತ ಬರುವಳು. ಅವಳುಟ್ಟದ್ದೆಲ್ಲಾ ತೊಯ್ದು ತಪ್ಪಡಿಯಾಗಿ ನಡಗುತ್ತಿರುವಳು. ಮೊಗ ಖಿನ್ನವಾಗಿ ಮೊಗದ ಮೇಲಿನ ಕಾಂತಿ ಬಾಡಿರುವದು. ಅವಳು ಒಳಗ ಬಂದೊಡನೇ ನೆಲಕ್ಕ ಬೀಳುವಳು. ಮಲ್ಲೇಶಿ ಗಾಬರಿಯಾಗಿ ಅವಳನ್ನು ಹಿಡಿದು.)

**ಮಲ್ಲೇಶಿ** :—ಚಿನ್ನೀ ಚಿನ್ನೀ ; ಹೀಗೇಕೆ? (ಅವಳ ಸೀರೆಯ ನೀರನ್ನು ಹಿಂಡ ಹತ್ತುವನು.) ಮಾತಾಡು. ಏನಾಗಿರುವದು ನಿನಗೆ. ಮಾತಾಡು ಚಿನ್ನೀ.

**ಚಿನ್ನಮ್ಮ** :—(ಸ್ವಲ್ಪ ಎದ್ದು ಕುಳಿತು) ಏನೂ ಆಗಿಲ್ಲ ನನಗ. ಸ್ವಲ್ಪ ಬವಳಿ ಬಂದ್ಹಾಂಗ ಆಯಿತು. ಶೀಡ ಬಹಳ ಹಿಡಿದು ಹೀಂಗ ಮಾಡಿದೆ.

**ಮಲ್ಲೇಶಿ** :—ಕಳಿ ಒದ್ದೀನ. ಒಣಾದು ಉಟಕೋ? ಏಳು.

**ಚಿನ್ನಮ್ಮ** :—ಉಟಕೋತೀನಿ ತಡಿರಿ ; ಒಂದ ಸ್ವಲ್ಪ. ಕಣ್ಣಿಗೆ ಚಕ್ರ ಬಂದಾಂಗ್ಹ ಆಗತದ. ಏನೂ ಕಾಣಸೊಲ್ಲದು ನನ್ನ ಕಣ್ಣಿಗೆ– ಮನಿನೇ ತಿರಗಲಿಕ್ಕೆ ಹತ್ತಿದಾಂಗ್ಹ ಆಗತದ.

**ಮಲ್ಲೇಶಿ** : ಸ್ವಲ್ಪ ಕಣ್ಣು ಮುಚ್ಚಿ ಕೂಡು ; ಅಂದರ ಕಡಿಮೆಯಾಗತದ. ಮುಂಜಾನ ಹಿಡೀದು ಚೆಂಜೀತನಕ ಬರೇ ಹೊಟ್ಟೇಲಿ ಇದ್ದೀ ಅದಕ ಹೀಂಗ ಆಗತದ. ಮಳೀ ನಿಂತಮೇಲೆ ಬರಬಾರದs.

**ಚಿನ್ನಮ್ಮ** :—( ಕಣ್ಣು ತಿಕ್ಕೊಳ್ಳುತ್ತ ) ಶೇಡ ತುಸು ಕಡಿಮೆಯಾಯಿತು.

**ಮಲ್ಲೇಶಿ** :—( ಆಕೆಯ ಸೀರೆಯನ್ನು ತಗೆದುಕೊಂಡು ಬಂದು ) ಏಳು ಇದನ್ನು ಉಟಕೋ. ಥಂಡಿ ಕಡಿಮೆಯಾದರ ಎಲ್ಲಾ ಕಡಿಮೆಯಾಗತದ. ( ಚಿನ್ನಮ್ಮನನ್ನು ಎಬ್ಬಿಸಿ ಆಕೆಯ ಕೈಯಲ್ಲಿ ಸೀರೆಯನ್ನು ಕೊಡುವನು. ಚಿನ್ನಮ್ಮನು ಅಡಗಿ ಮನೆಗೆ, ಅದನ್ನು ಉಟ್ಟುಕೊಳ್ಳಲು ಹೋಗುವಳು. )

**ಮಲ್ಲೇಶಿ** :—ಹೊರಗ ಮಳೀ ಬಾಳ ಅದಲ್ಲ.

**ಚಿನ್ನಮ್ಮ** :—ಇಂದಿಂದು ಆಣೀ ಕಲ್ಲಿನ ಮಳಿ.

**ಮಲ್ಲೇಶಿ** : —ಎಲ್ಲಾ್ಯರ ನಿಂತು ಮಳಿ ನಿಂತೆಂದ್ರು ಬರಬೇಕಾಗಿತ್ತು ತೊಯ್ಸಿಕೊಂಡು ಯಾಕ ಬಂದಿ. ಜಡ್ಡೆ ಬಿದ್ದರ ಫಜೀತಿ ಹೌದಲ್ಲೊ.

**ಚಿನ್ನಮ್ಮ** :—ಎಲ್ಲಿ ನಿಂದ್ರೂದದು ; ಮನಿಗೆ ಬಂದ ಬಿಟ್ರಾತಂತ ಬಂದೆ ಗಾಬರ್‍ಯಾಗಿ.

**ಮಲ್ಲೇಶಿ** :—ಮಳೀ ಬರುದಕಿಂತ ಮೊದಲೇ ಬಂದ ಬಿಡಬೇಕಾಗಿತ್ತು ಗಡಾನ.

**ಚಿನ್ನಮ್ಮ** :—ಇವತ್ತ ಕೆಲ್ಸ ಬಹಳ ಇತ್ತು.

**ಮಲ್ಲೇಶಿ** :—ರಾತ್ರಿ ಸುದ್ದೇಕೆ ನಿಮ್ಮಲ್ಲಿ ಕೆಲ್ಸ ಇರತದೇನು ?

**ಚಿನ್ನವ್ವ** :—( ಒಳಗಿನಿಂದ ) ದೀಪಹಚ್ಚಿ ಕೆಲ್ಸಾ ಮುಗೀತು.

**ಮಲ್ಲೇಶಿ** :—ಅಂದರ ಬರಲಿಕ್ಕೆ ಇಷ್ಟ ವ್ಯಾಳ್ಯಾ ಯಾಕ ?

**ಚಿನ್ನವ್ವ** :—ನೀಲವ್ವ ನನ್ನ ಕರಕೊಂಡು ಹೋಗಿದ್ಲು. ಅದಕ ತಡ ಆತು. ಬರಬೇಕೆಂದ್ರ ಹೊತ್ತಾ ಆತು.

**ಮಲ್ಲೇಶಿ** :—ಯಾವ ನೀಲವ್ವ ಆಕಿ ?

**ಚಿನ್ನವ್ವ** :—ನಮ್ಮ ಗಿರಣ್ಯಾಗ ಆಕಿ ಹೆಂಗಸರ ವ್ಯಾಲ ಮುಕಾದಮ ಅದಾಳ. ಎಲ್ಲರ ಕೆಲಸ ನೋಡತಾಳ ಆಕಿ. ನಮ್ಮ ಗಿರಣಿ ಮಾಲಕ ನೀಲವ್ವ ಹೇಳಿದ ಮಾತು ಕೇಳತಾನ. ನೀಲವ್ವ ಅಂದರ ನಮ್ಮಲ್ಲಿ ಎಲ್ಲರೂ ಅಂಜಿ ಸಾಯುತಾರ.

**ಮಲ್ಲೇಶಿ** :—ಎಲ್ಲಿ ಕರಕೊಂಡು ಹೋಗಿದ್ಲು ?

**ಚಿನ್ನವ್ವ** :—ಒತ್ತಟ್ಟಿಗೆ ಕರಕೊಂಡು ಹೋಗಿದ್ಲು.

**ಮಲ್ಲೇಶಿ** :—(ಮುಂದಕ್ಕೆ ಹೋಗಿ ಅಡಗಿಮನಿಯ ಬಾಗಿಲವನ್ನು ಹಿಡಿದು ) ಯಾಕ ಕರಕೊಂಡು ಹೋಗಿದ್ಲು ?

**ಚಿನ್ನವ್ವ** :—ನಾವು ಬಡವರಿದ್ದೀವಿ. ನಮಗ ರೊಕ್ಕದ ತ್ರಾಸ ಬಹಳ ಅದ. ಅದಕ ಇನ್ನಿಷ್ಟು ಪ್ಪಾರ್ಯಾ ಎಲ್ಲಾ್ಯರ ಕೊಡಸು ಅಂತಾ ನಾ ಆಕಿಗೆ ಹೇಳಿದ್ದೆ. ಆಕಿ ನೋಡತೀನಿ ಅಂತಾ ಹೇಳಿದ್ದಳು. ನನ್ನ ಕೆಲ್ಸ ಮುಗಿದ ಕೂಡ್ಲೇ ನಾ ಮನೀಕಡಿಗೆ ಹೊರಟಿದ್ದೆ. ನೀಲವ್ವ ಬಂದು ಬರತೀಯೇನ ಚಿನ್ನಿ ಎಂದು ಕೇಳಿದ್ಲು ನಾ ಹೂಂ ಅಂದೆ.

**ಮಲ್ಲೇಶಿ** :—ನಿನ್ನ ಕರಕೊಂಡು ಹೋದ್ಲ. ಎಲ್ಲಿಗ ಅಂತ ನೀ ಕೇಳಲಿಲ್ಲೇನು ?

**ಚಿನ್ನವ್ವ** :— ನಾ ಕೇಳಲಿಲ್ಲ. ನಾ ಕೆಲಸಾ ಮಾಡುವ ಮುಂದ ಗಿರಣಿ ಮಾಲಕ ಬಂದು ಐದು ಮಿನಿಟು ನಿಂತು ನೀ ಕೆಲಸಾ ಬರೋಬರಿ

ಮಾಡೂದಿಲ್ಲ. ಅದಕ ನಿನ್ನ ತಗೀತೀನಿ ಅಂತಾ ಹೇಳಿದಾ. ಅದನ್ನ ಕೇಳಿ ನಾ ಗಾಬರಿಯಾದೆ.

**ಮಲ್ಲೇಶಿ** :— ನಾ ನಿನಗ ಹೇಳಲಿಲ್ಲ ಎಲ್ಲಿಯೂ ಕೆಲ್ಸಕ್ಕ ಹೋಗ ಬ್ಯಾಡಂತ. ದೇವರು ನನಗ ಸಗತೀ ಕೊಟ್ಟಾನ ದುಡೀಲಿಕ್ಕೆ. ನಾ ಗಟ್ಟಿ ಇರುತನಕ ನೀ ಹೋಗಬ್ಯಾಡಂತ ನಾ ಮ್ಯಾಲಿಂದ ಮ್ಯಾಲೆ ಹೇಳಕೋತಾ ಬರತೀನಿ. ನಿನಗೊಂದು ಹುಚ್ಚ ಅದಲ್ಲ ದುಡಿಯೋದು.

**ಚಿನ್ನಮ್ಮ** : — ನನ್ನ ಕೆಲ್ಸಾ ಮುಗ್ಸಿ ಮನೆಗೆ ಹೊರಟಿದ್ದೆ. ನಾಳಿಂದ ನೀ ಕೆಲ್ಸಕ್ಕ ಬರಬ್ಯಾಡ, ಅಂತಾ ನೀಲಮ್ಮ ನನ್ನ ಹಿಂದ ಬಂದು ಅಂದ್ಲು. ಯಾಕ ಅಂತ ನಾ ಕೇಳಿದ.

**ಮಲ್ಲೇಶಿ** :— (ಅತ್ತಿತ್ತ ಅಲೆದಾಡುತ್ತ) ನೀಲಮ್ಮ ಯಾವ ಊರಾಕೀ ?

**ಚಿನ್ನಮ್ಮ** :—ನಮ್ಮೂರ ಕಡೀಯಾಕಿ ಅಂತ.

**ಮಲ್ಲೇಶಿ** :—(ಮುಂದಕ್ಕೆ ಬಂದು ಆಶ್ಚರ್ಯದಿಂದ) ನಮ್ಮೂರ ಕಡೀಯಾಕಿ !

**ಚಿನ್ನಮ್ಮ** :— ಹೌದಂತ. ಮಟ್ಟಿಮರಿ ಹಳ್ಳಿಯಾಕಿ ಅಂತ.

**ಮಲ್ಲೇಶಿ** :—ಯಾರ ಪೈಕಿ ಅಂತS.

**ಚಿನ್ನಮ್ಮ**:—ಅಲ್ಲಿ ಸ್ವಾಮುನಗವಡ್ರ ಸೊಸಿ ಅಂತ. ನಿಮಗ ಖೂನ (ಗುರುತು) ಅದೇನು !

**ಮಲ್ಲೇಶಿ** :—ನನಗೇನು ಖೂನ ಇದ್ಹಾಂಗಿಲ್ಲ.

**ಚಿನ್ನಮ್ಮ** :—ನಮ್ಮನಿ ಸುದ್ದಿ ಎಲ್ಲಾ ಹೇಳತಾಳಾಕಿ.

**ಮಲ್ಲೇಶಿ** :—ಥಂಡಿ ಕಡಿಮೆ ಆತಿಲ್ಲೋ ?

**ಚಿನ್ನಮ್ಮ** :—ಸ್ವಲ್ಪ ಆತು.

**ಮಲ್ಲೇಶಿ** :—ಗೊಂಗಡಿ ಒಗಿಲೇನು ? ಹೊತಗೊಂಡ್ರ ಚಳಿ ಕಡಿಮೆಯಾಗ್ತದ.

**ಚಿನ್ನಮ್ಮ** :—ಬ್ಯಾಡ ಬಿಡ್ರಿ. ಆಕಿ ನಿಮ್ದು, ನಮ್ಮ ಚಿಕ ಮಾವಂದೂ ಖೂನ ಅದ ಅಂತ ಹೇಳ್ತಾಳ. ನಮ್ಮ ಚಿಕಮಾವ ಶರೆ ಕುಡಿದು ಸತ್ತನಂತ ಹೌದ ?

**ಮಲ್ಲೇಶಿ** :—ಬಡ್ತನದ ಕಷ್ಟ ಮರ್‍ಯಾಕ ಕುಡ್ದು ಸತ್ತಿದ್ದಾನು. ಏನಾತು.

**ಚಿನ್ನಮ್ಮ** :—ಇಲ್ಲಾ ಕೇಳ್ದೆ ಸುಮ್ಮಗ. ಆಕಿ ನಿಮ್ಮವನೂ ಕುಡಿತಾನೇನಂತ ನನಗ ಕೇಳಿದ್ಲು.

**ಮಲ್ಲೇಶಿ** :—ನೀಯೇನಂತ ಉತ್ತರಾ ಕೊಟ್ಟೆ ?

**ಚಿನ್ನಮ್ಮ** :—ನಾ ಏನ ಉತ್ತರಾ ಕೊಡೂದು; ನಿಮಗ ಗೊಂತ ಐತೇ ಐತಿ.

**ಮಲ್ಲೇಶಿ** :—ಇಲ್ಲ ! ಆದರೂ ನೀ ಏನ ಉತ್ತರಾ ಕೊಟ್ಟೆಂತ ಕೇಳ್ತೀನಿ.

**ಚಿನ್ನಮ್ಮ** :—ನನಗ ಗೊತ್ತಿಲ್ಲಾಂತ ಹೇಳ್ದೆ.

**ಮಲ್ಲೇಶಿ** :—ನಮ್ಮ ಚಿಕಮಾವನ್ಹಾಂಗಲ್ಲಂತ ಹೇಳಬೇಕಾಗಿತ್ತು.

**ಚಿನ್ನಮ್ಮ** :—ಹಾಂಗ ಹ್ಯಾಂಗ ಹೇಳ್ಲಿ.

**ಮಲ್ಲೇಶಿ** :—ಮರತದ್ದು ಬಾಳ ದೊಡ್ಡಿಸ್ತನ ಮಾಡ್ದಿ ಬಿಡ. ( ತಲೆ ತುರಿಸುತ್ತ ) ನಿನ್ನ ಹತ್ತರ ಪೆಟಗೀ ಕೀಲೀ ಕೈ ತತಾ ಅಟು.

**ಚಿನ್ನಮ್ಮ** :—ಇಗಾ ತಗೊಳ್ರಿ ಕೀಲೀ ಕೈ. ( ಎಂದು ಕೀಲಿ ಕೈ ಒಗೆಯುವಳು. ಮಲ್ಲೇಶಿಯು ಅದನ್ನು ತಂದುಕೊಂಡು ತಿರುವುತ್ತ ಪೆಟಗಿಯನ್ನು ತೆಗೆಯಹೋಗುವನು. )

**ಚಿನ್ನವ್ವ** :—( ಹೊರಗೆ ಬರುತ್ತ ) ಪೆಟಗಿ ಯಾಕ ತಗೀತೀರಿ ಏನ ಬೇಕಾಗೇದ.

**ಮಲ್ಲೇಶಿ** :—ಒಂದು ಆರು ರುಪಾಯಿ ಬೇಕಾಗ್ಯಾವ.

**ಚಿನ್ನವ್ವ** :—ಈಗ್ಯಾಕ್ರಿ ? ಹೊತ್ತಿಲ್ದ ಹೊತ್ತಿನಾಗ ?

**ಮಲ್ಲೇಶಿ** :—ನಾಳೆ ಮುಂಜಾನೆ ಹೋಗೂ ಮುಂದ ಮರತೇ ನಂತ ಈಗ ರುಪಾಯಿ ತಗೊಂಡು ಇಟಗೋಬೇಕಂತ ಮಾಡೀನಿ. ಆ ಸಾಲದವಂದು ಬಹಳ ತ್ರಾಸ ಆಗೇದ. ಶನಿ ಹತ್ತಿದ್ಹಾಂಗ ಬೆನ್ನು ಹತ್ಯಾನ. ಸಂಬಳ ಆದ ಕೂಡ್ಲೆ ಕೊಡತೀನಿ ಅಂತ ಹೇಳಿದ್ರ ಕೇಳೊಲ್ಲ.

**ಚಿನ್ನವ್ವ** :– ಅದಕ ನಾ ದುಡೀಲಿಕ್ಕ ಹೋಗತೀನಿ ಅಂತ ಹೇಳೂದು. ಈ ಸಾಲಾ ತೀರಿಸಿ ನಿರಂಬಳ ಇರೂನಂತ್ರಿ.

**ಮಲ್ಲೇಶಿ** :— ನಾವು ಸುಖದಿಂದ ಇರಾಕ ಆಗಾಣಿಲ್ಲ. ನಾವು ಹೀಂಗ ದುಡಿದು ಪಟ್ಟ ಅಂತ ಒಂದು ದಿವ್ಸ ಸತ್ತ ಹೋಗೋದು. ಪೆಟಿಗ್ಯಾಗ ರುಪಾಯಿ ಅದಾವೇನು ?

**ಚಿನ್ನವ್ವ** :—( ಸುಮ್ಮನೆ ನಿಲ್ಲುವಳು. )

**ಮಲ್ಲೇಶಿ** :—ಮಾತಾಡ ! ಗಪ್ಪನೇ ಯಾಕ ನಿಂತಿ ಕಲ್ಲಿನ್ಹಾಂಗ.

**ಚಿನ್ನವ್ವ** :—ಇಲ್ಲ ಕಾಣ್ಸತದ.

**ಮಲ್ಲೇಶಿ** :—ಏನ ಆದೂ?

**ಚಿನ್ನವ್ವ** :—ಮೊನ್ನೆ ರಾಧಾಬಾಯಿರು ರಘುನ್ನ ಕಳಿಸಿಕೊಟ್ಟಿದ್ರ ರುಪಾಯಿ ಕೊಡಂತ. ಅವರಿಗೆ ಕೊಟ್ಟೆ...

**ಮಲ್ಲೇಶಿ** :—ಎಲ್ಲ ಕೊಟ್ಟೇನು ?

**ಚಿನ್ನವ್ವ** :— ( ನಡುಗುತ್ತ ) ಇಲ್ಲ ! ಮೂರು ರುಪಾಯಿ ಕೊಟ್ಟೆ ಅವರಿಗೆ, ನಾಳೆ ಸಂಬಳಕ ಕೊಡತೀನಿ ಅಂತ ಹೇಳಿದ್ರು.

**ಮಲ್ಲೇಶಿ** :—ಇನ್ನ ಮೂರು ಏನ ಮಾಡಿದಿ ?

**ಚಿನ್ನಮ್ಮ** :—( ಸುಮ್ಮನೆ ನಿಲ್ಲುವಳು. )

**ಮಲ್ಲೇಶಿ** :—( ಸಿಟ್ಟಿಗೆದ್ದು ಗದ್ದರಿಸುವನು. ) ಯಾರಿಗೆ ಕೊಟ್ಟಿ ಹೇಳು. ನಾಲಿಗಿ ಹೋಗೇದs ನಿಂದು.

**ಚಿನ್ನಮ್ಮ**: - ( ಸಣ್ಣ ದನಿಯಿಂದ ) ನೀಲವ್ವಗ ಕೊಟ್ಟೆ ಆ ಮೂರು ರೂಪಾಯಿ.

**ಮಲ್ಲೇಶಿ** :—ಆ ಹುಚ್ಚ ರಂಡಿಗೆ ಯಾಕ ಕೊಟ್ಟಿ ?

**ಚಿನ್ನಮ್ಮ** :—ನನ್ನ ಕೆಲಸದ ವ್ಯಾಲಿಂದ ತಗೀ ಬ್ಯಾಡಂತ ಅವಳಿಗ ಹೇಳಿಕೊಂಡು ಕೊಟ್ಟೆ.

**ಮಲ್ಲೇಶಿ** :—ಕೊಡ್ಸಿದ್ಲೋ ಕೆಲ್ಸಾ ನಿನಗ.

**ಚಿನ್ನಮ್ಮ** :— ನಾಳೆ ಅಂತ.

**ಮಲ್ಲೇಶಿ** :—ಇವತ್ತ ಯಾಕ ಮಾಡಿದಿ ಬರಲಿಕ್ಕೆ ಇಷ್ಟ ತಡಾ.

**ಚಿನ್ನಮ್ಮ** :—ನನ್ನ ಮಾಲಕರ ಮನಿಗೆ ಕರಕೊಂಡು ಹೋಗಿದ್ಲು. ಅದಕ ಬರಲಿಕ್ಕೆ ತಡಾ ಆತು.

**ಮಲ್ಲೇಶಿ** :—ಅಲ್ಲ ಚಿನ್ನಿ, ನಿನಗ ಎಷ್ಟ ಸಾರೆ ಹೇಳಿಲ್ಲ ಇಲ್ಲಿ ಎರಡನೇ ದವರ ಮೇಲೆ ವಿಶ್ವಾಸ ಇಡಬ್ಯಾಡಂತ. ಎಲ್ಲಾರೂ ಠಕ್ಕರು. ಹೊರಗ ದುಡೀಲಿಕ್ಕ ಹೋಗಬೇಡೆಂದು ಸಾವಿರಸಾರೆ ನಿನಗ ಹೇಳೀನಿ ; ನೀ ಅದನ್ನ ಕಿವ್ಯಾಗ ಹಾಕೊಳ್ಳs ಒಲ್ಲಿ.

**ಚಿನ್ನಮ್ಮ** :—( ಅಳುತ್ತ ) ನಾ ನಾಳಿಂದ್ಹಿಡಿದು ಹೋಗೂದಿಲ್ಲ. ಮನೀ ಬಿಟ್ಟು ಹೊರಗ ಹೋಗೂದೇ ಇಲ್ಲ.

**ಮಲ್ಲೇಶಿ** :—( ಆಕೆಯ ಗದ್ದವನ್ನು ಹಿಡಿದು ) ಯಾಕೆ ಅಳುತ್ತೀ, ಸುಮ್ಮನಾಗು. ಏನಾಯಿತು ಹೇಳು.

**ಚಿನ್ನವ್ವ** :—(ಬಿಕ್ಕಿಸುತ್ತ) ನೀಲವ್ವ ನನಗ ಮೋಸಮಾಡಿದ್ಲು ಅಲ್ಲಿ ನನ್ನ ಮುದ್ದಾವು ಕರಕೊಂಡು ಹೋಗಿದ್ಲು.

**ಮಲ್ಲೇಶಿ** :—ಆಕಿ ಅಲ್ಲಿ ಏನ ಮಾಡಿದ್ಲು ಹೇಳು.

**ಚಿನ್ನವ್ವ** :— ( ಹಾಗೇ ಬಿಕ್ಕಿಸುವಳು. ಮಾತನಾಡುವದೆ ಇಲ್ಲ ).

**ಮಲ್ಲೇಶಿ** :—ಚಿನ್ನಿ, ಚಿನ್ನಿ, ಏನ ಮಾತಾಡು. ಏನ ಮಾಡಿದ್ಲು ಆಕೀ...

**ಚಿನ್ನವ್ವ** :—ಮಾಲಕರ ಮನಿಗೆ ಕರಕೊಂಡು ಹೋಗಿ ನನ್ನ ಹಾಸಿಗೆ ಹಾಕಂತ ಹೇಳಿದ್ಲು. ಅಂದ್ರ ಅವರು ಚಾಕರಿ ಬಿಟ್ಟು ಹೊರ ಹಾಕೂದಿಲ್ಲಂತ ಹೇಳಿದ್ಲು.

**ಮಲ್ಲೇಶಿ** :—ಆ ಹುಚ್ಚರಂಡೀ ಆಕಿ–ನೀಲವ್ವ ?

**ಚಿನ್ನವ್ವ** :—ಒಂದ ಮುದಕೀ ಅದ ನಮ್ಮಲ್ಲಿ. ಆಕಿ ಅ...ದ...ನ್ನ... ಹೇಳಿದ ಕೂಡ್ಲೇ ಹೂಂ ಅಂತ ಹೇಳಿ ಓಡಿ ಬಂದೆ. ನಡಬರಕ ನನಗ ಹಾದಿ ತಪ್ಪಿತು. ಬರಲಿಕ್ಕೆ ಇಷ್ಟು ಹೊತ್ತು ಆತು.

**ಮಲ್ಲೇಶಿ** :— ಇನ್ನ ಮೇಲೆ ನೀ ಹೊರಗ ದುಡೀಲಿಕ್ಕೆ ಹೋಗೂದ ಬ್ಯಾಡ. ನನ್ನ ಜೀವ ಇರೂತನಕ ನಾ ದುಡೀತೀನಿ.

**ಚಿನ್ನವ್ವ** :—ಬಹಳ ಶ್ರಮ ಆಗಿ ಜಡ್ಡಲೇ ಎಲ್ಲಿ ಬೀಳಿತೀರೊ ಅಂತ ಅಂಜಿಕಿ ಅದ ನನಗ.

**ಮಲ್ಲೇಶಿ**:— ದೇವರಿದ್ದಾನ ಕಾಯೂವ. ನಾವ್ಯಾರ ಚಿಂತಿ ಮಾಡಾಕ. ನೀ ಬಸರಿದ್ದೀ, ದುಡದ್ರ ಆ ಕೂಸಿಗೆ ತ್ರಾಸ ಆಗತದ ಆದಷ್ಟು ದುಡತ ಕಡಿಮೆ ಇರಬೇಕ.

**ಚಿನ್ನವ್ವ** :—( ನಾಚುವಳು. )......

**ಮಲೇಶಿ** :—ಸುಳ್ಳ್ಯಾ? ನೀ ಇ...ದ್ದ...ದ್ದು.

**ಚಿನ್ನಮ್ಮ** :—( ಕುಡಿನೋಟದಿಂದ ಮಲ್ಲೇಶಿಯನ್ನು ನೋಡುವಳು. ಬೆರಳಿನಿಂದ ನೆಲವನ್ನು ಕೆದರುತ್ತ ನಿಲ್ಲುವಳು. )

**ಮಲ್ಲೇಶಿ** :—ಏನ ಅಲ್ಲಿ ಹುಚ್ಚಿ ಹಾಂಗ ನಿಂತರ; ಮುಂದಕ್ಕ ಬಾ.

**ಚಿನ್ನಮ್ಮ** :—( ಒಂದೊಂದು ಹೆಜ್ಜೆ ಮುಂದಕ್ಕ ಬರುವಳು. )

**ಮಲ್ಲೇಶಿ** :—ಬರಬೇಕು, ಬರಬೇಕು; ಮೆಲ್ಲಕ; ಮೆಲ್ಲಾಕ. ಇಲ್ಲ ನೋಡು ಚಿನ್ನಿ; ನಿನಗ್ಯಾಕ ದುಡೀಬ್ಯಾಡ ಅಂತೀನಿ ತಿಳಿತೇನು ?

**ಚಿನ್ನಮ್ಮ** :—( ಗೋಣು ಅಲ್ಲಾಡಿಸಿ ತಿಳಿಯಲಿಲ್ಲೆಂದು ತಿಳಿಸುವಳು. )

**ಮಲ್ಲೇಶಿ** :—ನಾವು ಇಲ್ಲಿಗೆ ದುಡಿದು ಸಿರಿಮಂತರಾಗಬೇಕೆಂದು ಬಂದೀವಿ. ಕೈಯಾಗ ಗಂಟುಮಾಡುವದು ಅನಕ ದೂರ ಉಳಿತು. ಸಾಲಾನೇ ಬೆನ್ನ ಹತ್ತೇದ ನಮಗ. ನಾವಽ ಕಷ್ಟಬಟ್ಟರ ಚಿಂತಿಯಿಲ್ಲ. ನಮ್ಮ ಮಕ್ಕಳಾರ ಸುಖಬಡಲಿ. ನೀ ದುಡಿದು ದುಡಿದು ಸುಣ್ಣಾದರ ಹುಟ್ಟೊ ಕೂಸಿಗೆ ಬಹಳ ತ್ರಾಸಾಗಿ ಸಗತಿಯಿಲ್ಲದ್ದ ಹುಟ್ಟತದ.

**ಚಿನ್ನಮ್ಮ** :—ಇದು ನನಗ ಗೊತ್ತಿಲ್ಲ ಬಿಡ್ರಿ. ನೀವು ಹೇಳೂದು ನನಗೆ ಮೋಜ ಅನಿಸತದ.

**ಮಲ್ಲೇಶಿ** :— ನೀನೇ ಮೋಜ ಇದ್ದೀ, ನಿನಗ ಅನಿಸದೆ ಏನ ಮಾಡೀತು.

**ಚಿನ್ನಮ್ಮ** :—ನಿಮ್ಮಿಂದ ನನಗೂ ಮೋಜಽ.

**ಮಲ್ಲೇಶಿ** :—ನಿನ್ನಿಂದ ನನಗೂ ಹಾಂಗಽ.

**ಚಿನ್ನಮ್ಮ** :—ನಮ್ಮಿಬ್ಬರಿಂದ ಹುಟ್ಟೊ ಕೂಸಿಗೂ ಮೋಜೇನು ಮತ್ತಽ ?

**ಮಲ್ಲೇಶಿ** :—ಬರೋಬರಿ ನೋಡು, ಈಗ ನೀ ಮಾತಾಡಿದ್ದು.

**ಚಿನ್ನವ್ವ** :— ರಾಧಾಬಾಯರು ರಘೂನ ಕಡಿಂದ ಜೋಳಾ ಕಳ್ಸಿ ಕೊಟ್ಟಾರೇನು ?

**ಮಲ್ಲೇಶಿ** :— ಕಳಿಸಿ ಕೊಟ್ಟಾರ. ಅಲ್ಲಿ ಇಟ್ಟೇನಿ ನೋಡು. ಅವರ ಹುಡುಗ ಎಷ್ಟ ಮಾತಾಡತದ ಅದು.

**ಚಿನ್ನವ್ವ** :— ಬಹಳ ಲುಚ್ಚಾ ಅದ ಹುಡಗ. ಬಹಳ ಮುದ್ದ ಮುದ್ದ ಮಾತಾಡತದ.

**ಮಲ್ಲೇಶಿ** :— ನಾಳೆ ನೀ ಹಡೀತೀಯಲ್ಲ ಅದಾದರೂ ಹೀಗS ಮಾತಾಡತದ ನೋಡು. ( ಚಿನ್ನವ್ವ ಜೋಳಾ ಹಳಮಾಡಹತ್ತುವಳು ) ರಾತ್ರಿ ಬಹಳ ಆತು, ಇನ್ನ ಕೆಲಸಾ ಮಾಡತೀಯಾ ; ನೀ ಮಲಕೋ ಇನ್ನ.

**ಚಿನ್ನವ್ವ** :— ಹಿಟ್ಟ ನಾಳೆ ಮುಂಜಾನೆ ಅವರಗ ಬೇಕಂತ. ನಾ ಹೋಗೂ ಮುಂದ ಅವರು ಹೇಳಿದ್ದರು. ರಾತ್ರಿ ಬೀಸಿ ಕೊಡತೀನಂತ ಹೇಳಿದ್ದೆ.

**ಮಲ್ಲೇಶಿ** : - ಬೆಳಗು ಮುಂಜಾನೆ ಎಬಸತೀನಿ ಬಿಡು.

**ಚಿನ್ನವ್ವ** :- ಎಚ್ಚರಾಗಲಿಲ್ಲಂದ್ರ ಫಜೀತಿ ಆಗತದ.

**ಮಲ್ಲೇಶಿ** :—ನಾ ಎಬ್ಸತೀನಿ ಅಂತ ಅಂದ್ರ ತೀರೀತು. ಮಲಕೋ ಇನ್ನ. ನಾಳೆ ಮಾತ್ರ ಮುಂಜಾನೆ ರಾಧಾಬಾಯ್ರು ಕಡಿಂದ ಆ ಮೂರು ರುಪಾಯಿ ಇಸಕೋ. ನನಗ ಸಾಲದವರಿಗೆ ಕೊಡಾಕ ಬೇಕು.

**ಚಿನ್ನವ್ವ** :—ಪಟ್ಟಣಕ್ಕ ಬರೂನ ಬ್ಯಾಡಂತ ನಿಮಗ ಕಯ್ಯಾಗ ಕಡ್ಡಿ ಕೊಟ್ಟು ಹೇಳಿದೆ. ಇಲ್ಲಿ ದುಡಿದು ಸಿರಿಮಂತ ಆಗೂನಂತ ನನಗ ಹೇಳಿ ಕರಕೊಂಡು ಬಂದ್ರಿ. ಇಲ್ಲೇನೈತಿ ? ನಮ್ಮ ಹಳ್ಳೀನ ಪಾಡ.

**ಮಲ್ಲೇಶಿ** :—ಎಲ್ಲಾ ಶಿವನ ಕೈಯಾಗ ಅದ. ನಾವು ಬೇಕಾದ್ದ ಅಂತೀವಿ. ನೆಟ್ಟಗಿರುವದು ನಮ್ಮ ನಸೀಬ ಇಲ್ಲಂತ ಅನಬೇಕು.

**ಚಿನ್ನವ್ವ** :— ಗಿರಿಣ್ಯಾಗ ದುಡಿಯುವವರು ಯಾರ ಪಾಡ ಇದ್ದಾರ. ಎಲ್ಲಾರಿಗೂ ಕಷ್ಟ ಅದ. ಅದನ್ನ ನೋಡಿದ್ರ ನನ್ನ ಮೈ ಜುಮ್ಮ ಅಂತದ.

**ಮಲ್ಲೇಶಿ** :— ಅವರೆಲ್ಲ ಸೋಮಾರಿ ಅವರು. ದುಡೀಲಿಕ್ಕೆ ಬ್ಯಾಡ ಅವರಿಗೆ. ಬರೇ ಮುಂದಿನ್ನ ಬೈಯುಕೋತಾ ತಿರಿಗಾಡತಾರ. ದುಡಿದ್ರ ಶಿವಾ ಕೊಡುದಿಲ್ಲ.

**ಚಿನ್ನವ್ವ** :—ಶಿವಾ ನಮುಗ್ಯಾಕ ಕೊಟ್ಟಿಲ್ಲ. ನಾವೇನ ಮಾಡೀವಿ ತಪ್ಪು ಅಂಥಾದು.

**ಮಲ್ಲೇಶಿ** :—ನಮ್ಮ ಹಿಂದಿನ ಜನ್ಮದ್ದು ಅನಬೇಕು. ಅದನ್ನ ಈಗ ನಾವ ಅನಭೋಗ್ಸತೀವಿ.

**ಚಿನ್ನವ್ವ** :—ನೀವು ಬರೇ ಹೀಂಗ ಮಾತಾಡತೀರಿ ಬಿಡ್ರಿ.

**ಮಲ್ಲೇಶಿ** :—ಮತ್ತ ಹ್ಯಾಗ ಮಾತಾಡಲಿ.

**ಚಿನ್ನವ್ವ** :—ಶಾರಕ್ಕ ಬರಬ್ಯಾಡ್ರಿ ಅಂತ ನಾ ಬಹಳ ಹೇಳಿದೆ ಇಲ್ಲಿ ಬಂದ್ರ ನಮ್ಮ ಕಷ್ಟ ನೀಗತದ; ನಮ್ಮ ಕೈಯಾಗ ಗಂಟ ಆಗತದ; ವ್ಯಾಪಾರ ಮಾಡಿ ಮುಂದ ಬರೂನ ಅಂತ ಹೇಳಿದ್ರಿ. ಈಗ ಏನದ ನಮುಗ ಇಲ್ಲಿ. ಕಷ್ಟ ಮಾತ್ರ ರಗಡ.

**ಮಲ್ಲೇಶಿ** :—ನೀನು ಕಲ್ಲನ ಹಾಗ ಮಾತಾಡತೀಯಲ್ಲ.

**ಚಿನ್ನವ್ವ** :—( ಮೆಲ್ಲಗೆ ) ನಾ ಇದ್ದದ್ದು ಮಾತಾಡಿದೆ. ನಿಮುಗ ಸಿಟ್ಟು ಬಂತೇನು ?

**ಮಲ್ಲೇಶಿ** :—ನನಗ್ಯಾಕ ಸಿಟ್ಟು ಬರತೈತಿ.

**ಚಿನ್ನವ್ವ** :— ನೀವು ಕಷ್ಟ ಬಡೂದ ಮಾತ್ರ ಖರೇ ಆತು. ಸುಖಾನೇ ಇಲ್ಲ ನಿಮ್ಮ ಜೀವಕ್ಕ. ಮುಂಜ್ಯಾನ ಹೋದವರು ಚೆಂಜೀ

ತನಕ ದುಡಿದು ಉಸ್ಸೆಂತ ಅಂದು ಮನಿಗೆ ಬರತೀರಿ. ಅದನ್ನ ನೋಡಿ ನನ್ನ ಜೀವ ಕಳವಳಸ್ತದ.

**ಮಲ್ಲೇಶಿ** :—ನಾವೂ ದುಡೀಲಿಕ್ಕೆ ಹುಟ್ಟೇವಿ. ಅಂದ ಮೇಲಿ ಅದಕ ಮಿಡಿಕಿದರ ಏನಾಗತದ.

**ಚಿನ್ನಮ್ಮ** :—ನಾವಿಷ್ಟೇ ಹುಟ್ಟೇವೇ? ಉಳದವರು ಹುಟ್ಟಿಲ್ಲೇನು?

**ಮಲ್ಲೇಶಿ** :—ಎಷ್ಟೋ ಜನರು ಹುಟ್ಟ್ಯಾರ ; ನಮ್ಮ ಗಿರಿಣ್ಯಾಗ ಇಲ್ಲ ; ಅಷ್ಟ್ಯಾಕ ದೂರ ಹೋಗತಿ ? ನಮ್ಮ ಕಲ್ಲ ಇಲ್ಲೇನು ? ಅವಂದಾರ ಸ್ಥಿತಿ ಏನು ! ನಮ್ಮ ಹಾಂಗS ಅದ. ಅವಗ ಏನಾರ ಜೀವಕ್ಕ ಸುಖ ಐತೇನು. ಎರಡ ಹೊತ್ತು ಹೊಟ್ಟಿಗೆ ನೆಟ್ಟಗ ಸಿಗಾಣಿಲ್ಲ.

**ಚಿನ್ನಮ್ಮ** :—ಇಲ್ಲೆ ಈರೂನS ಬ್ಯಾಡ್ರೀ. ನಮ್ಮ ಊರಿಗೆ ಹೋಗೂನಂತ. ಇಲ್ಲಿ ನನಗ ಯಾಕೋ ಚಲೋನೇ ಅನಿಸೊಲ್ಲದು.

**ಮಲ್ಲೇಶಿ** :—ಅಲ್ಲ್ಯಾರ ಏನದ. ಅಲ್ಲಿಯೂ ಇದೇ ಹಾಡು. ಇಲ್ಲಿ ದುಡಿದರ ದುಡ್ಡಾರ ಸಿಗತದ. ಅಲ್ಲೇನದ ಮಣ್ಣು. ದುಡ್ಡಿನ ಮೋರೀನೇ ಕಾಣಾಣಿಲ್ಲ. ನಮ್ಮ ಊರಾಗಿನ ಎಲ್ಲಾರ ಸ್ಥಿತಿ ಸಾಲದಾಗS ಅದ. ಅವರೇನು ಬಹಳ ಸುಖದಿಂದ ಇದ್ದಾರಂತ ತೀಳಿದೀ ಏನು? ಈಗಿಂದಿವಸಕ್ಕ ದುಡಿವರಿಗೆ ಎಲ್ಲಿ ಹೋದರೂ ಕಷ್ಟ ; ಸುಖ ಅಂತ ಕೇಳಬ್ಯಾಡ. ಈ ಕಷ್ಟದ ಸಲುವಾಗಿ ನಾಳೆ ದೊಡ್ಡ ಗಿರಿಣ್ಯಾಗ ಸಂಪ ಆಗತದಂತ.

**ಚಿನ್ನಮ್ಮ** :—( ಆಶ್ಚರ್ಯದಿಂದ ) ಸಂಪ ! ಅಂದರೇನು ?

**ಮಲ್ಲೇಶಿ** :— ತಗೊಂಡ ಏನ ಮಾಡತೀ. ಸಂಪ ಅಂದರ ಸಂಪS

**ಚಿನ್ನಮ್ಮ** :— ಹಾಂಗಲ್ಲ ; ನಮ್ಮ ಗಿರಿಣ್ಯಾಗೂ ಆಗತದಂ[illegible] ಜನರು ಮಾತಾಡತಿದ್ದರು. ನಾ ನೀಲವ್ವನ ಮುಂದ ಅಂದೆ ; ಆ[illegible] ಅಂದ್ಲು ಹೌದು ಅಂತ ; ಈ ಸಂಪ ಮ್ಯಾಲಿಂದ ಮ್ಯಾಲೆ ಆಗತದ ಅಂ[illegible] ಅಂದ್ಲು. ನಮ್ಮ ಗಿರಣೀ ಮಾಲಕ ಸಂಪ ಮುರ್ಯಾಕ ಈ ಸಾ[illegible] ಬಂದೂಕ–ಸಿಪಾಯರನ್ನ ತಂದಾನಂತ ; ನೀಲವ್ವ ಹೇಳಿದ್ಲು.

**ಮಲ್ಲೇಶಿ** :—ಅವರನ್ಯಾಕ ಕರಿಸ್ಯಾನಂತ ?

**ಚಿನ್ನಮ್ಮ** :—ಕೆಲಸಕ್ಕ ಯಾರ ಬರೂದಿಲ್ಲ ಅಂತಾರ ಅವರ ಮ್ಯಾಲೆ ಗುಂಡ ಹಾಕತಾರಂತ. ಅದಕ ನೀಲಮ್ಮ ನನಗ ಹೇಳಿದ್ಲು ತಪ್ಪಸ ಬ್ಯಾಡಂತ ಹೇಳಿದ್ಲು. ಮತ್ತು ನಿಮ್ಮ ಹಿರ್‍ಯಾಗ ಹೇಳಂತ ಹೇಳಿದ್ಲು. ನೀವು ಹಳ್ಳಿ ಊರಿಂದ ಬಂದೀರಿ ; ಇಲ್ಲಿ ಪರಿಸ್ಥಿತಿ ನಿಮಗ ಗೊತ್ತಿಲ್ಲ ; ಸಂಪಿನ್ಯಾಗ ಸೇರಬ್ಯಾಡ್ರಿ ಅಂತ ನನಗ ಹೇಳಿದ್ಲು. ಅಲ್ರಿ ನಾವು ಕೆಲಸಕ್ಕ ಹೋಗೂದ ಬಿಟ್ರ ಅವರದೇನು ಗಂಟ ಹೋಗತದ.

**ಮಲ್ಲೇಶಿ** :—ಒಂದ ದಿವ್ಸ ಗಿರಣಿ ಬಂದ ಆದರ ಅವರದು ಸಾವಿರಾರು ರುಪಾಯಿ ವ್ಯಾಗ ಲುಗಸಾನ ಆಗತದ. ಕೂತಲ್ಲೇ ಬರೂ ಫಾಯದೇ ಹೋಗಿಬಿಡತದ. ಅಂದ ಮ್ಯಾಲೆ ಅವರ ಹೊಟ್ಟ್ಯಾಗ ಉರಿ ಬೀಳಾಕಿಲ್ಲ ?

**ಚಿನ್ನಮ್ಮ** :—ಇದು ಒಳ್ಳೇ ನ್ಯಾಯ ಬಿಡ್ರಿ.

**ಮಲ್ಲೇಶಿ** :—ಇದು ರೊಕ್ಕದ ನ್ಯಾಯ ! ಶ್ರೀಮಂತರ ನ್ಯಾಯ ! ಕಷ್ಟ ಬಡೂದು ಬಡವರ ನ್ಯಾಯ ! ಬಡವರ ಬಾಳನ್ನು ಹಾಳು ಮಾಡುವದು ಆ ಇದ್ದವರ ನ್ಯಾಯ !

( ಹೊರಗೆ ಕದ ತಟ್ಟಿದಂತಾಗುವದು. ಮಲ್ಲೇಶಿಯು ಚಿನ್ನಮ್ಮನ ಮೊಗವನ್ನು ನೋಡುವನು. ಅವಳಾದರೂ ಮಲ್ಲೇಶಿಯ ಮೊಗವನ್ನು ನೋಡುವಳು.)

**ಮಲ್ಲೇಶಿ** :—ಯಾರೋ ಕದ ತಟ್ಟಿದ್ಹಾಂಗ ಆಗಲಿಲ್ಲ ?

**ಚಿನ್ನಮ್ಮ** :—ನನಗೂ ಅನ್ನಿಸಿತು ಯಾರೋ ತಟ್ಟಿದ್ಹಾಂಗ ಅಂತ. ( ಮತ್ತೆ ಕದ ತಟ್ಟಿದಂತಾಗುವದು. )

**ಮಲ್ಲೇಶಿ** :—ಯಾರವರು ? ( ಉತ್ತರವೇ ಇಲ್ಲ ) ( ಸ್ವಲ್ಪ ಮುಂದಕ್ಕ ಬಂದು ) ಯಾರವರು ! ( ಚಿನ್ನಮ್ಮ ಎದ್ದು ಮಲ್ಲೇಶಿಯ ಹತ್ತರ ನಿಲ್ಲುವಳು ) ಯಾರ ನೀವು.

**ಹೊರಗಿನಿಂದ** :– (ಸಾವಕಾಶವಾಗಿ) ನಾನು !

**ಮಲ್ಲೇಶಿ** :—ನಾ ಅಂದರ ಯಾರು ?

**ಹೊರಗಿನಿಂದ** :—ನಾ…ನಾ…ಕಲ್ಲ.

**ಮಲ್ಲೇಶಿ** :—ಯಾಕೋ ಕಲ್ಲ, ಈಗ ಬಂದಿ ಮತ್ತ ಕತ್ತಲಿ ಯಾಳೇದಾಗ ಏನ ಅಂಥಾ ದಗದವಾ.

**ಕಲ್ಲ** :—(ಹೊರಗಿನಿಂದ) ಮಲ್ಲೇಶಿ, ಲಗೂನೇ ಬಾಗಿಲ ತಗಿಯೋ.

**ಮಲ್ಲೇಶಿ** :– ತಗಿದೆ ನಿಂದ್ರು. (ಬಾಗಿಲವನ್ನು ತಗೆಯುವನು)

**ಕಲ್ಲ** :—(ನಡುಗುತ್ತ) ಇಕ್ಕು ಬಾಗಲಾ.

(ಚಿನ್ನಮ್ಮ ಬಾಗಿಲ ಇಕ್ಕುವಳು.)

**ಕಲ್ಲ** :—(ಆವೇಶದಿಂದ) ಏಳು ! ಮಲ್ಲೇಶಿ ; ಕೈಯಲ್ಲಿ ದೊಣ್ಣಿ ತಗೋ ; ಗಂಡಗಚ್ಚಿ ಹಾಕು. ನಮ್ಮನ್ನ ಮರಾ ಮರಾ ಮರಿಗಿಸಿ ನಮ್ಮ ಗೋಣು ಮುರಿದು, ನಮ್ಮನ್ನ ಕತ್ತಿಹಾಂಗ ದುಡಿಸಿಕೊಂಡು ಫಾಯದೇ ತಗೊಂಬೂ ಅವರನ್ನ ದನಾ ಬಡದ್ಹಾಂಗ ಬಡೀಯೂನಂತ. ಇದೇ ವ್ಯಾಳ್ಯೆ ನೋಡು ಅವರ ಮೇಲೆ ನಮ್ಮ ಸೇಡು ತೀರಿಸಿಕೊಳ್ಳಾಕ ಕಳ್ಳನನ ಮಕ್ಕಳು ತಂದ ನಡಮನೀಗೆ, ನಮ್ಮನ್ನಂದ್ರು ದನಾ ಅಂತ ತೀಳ ಕೊಂಡಾರ. ಒಂದು ನಾಲ್ಕು ದುಡ್ಡ ಹಾಕತಾರ ; ಅದರ ವ್ಯಾಲೆ ಸಿರಿ ಮಂತರಾಗಿ ಮೆರೀಬೇಕಂತಾರ.

**ಮಲ್ಲೇಶಿ** :—ಏನಪಾ ಕಲ್ಲ, ಇದು ; ಬಹಳ ಆವೇಶ ಕಾಣ್ಸೆತದ.

**ಕಲ್ಲ** :—ಎಲ ನಿನ ಮಂಜಾಳ ; ಈಗ ಮಾತಾಡಾಕ ಪುರಸೊತಿಗಿ ಇಲ್ಲ ಬಿಡು ; ಏಳ ! ಗಂಡಗಚ್ಚಿ ಹಾಕು ; ಕೈಯಾಗ ದೊಣ್ಣಿ ತಗೋ, ಒಂದ ನಾಲ್ಕು ಸಾಮು ತಗೀ ; ಮೈಯಾಗ ಹುರಪ ಬರಲಿ. ಹೋಗಿ ಅವರ್ನ ದನಾ ಬಡದ್ಹಾಂಗ ಬಡೀಯೂನಂತ.

**ಮಲ್ಲೇಶಿ** :—ಯಾರನ್ನ ? ಎಲ್ಲಿ ? ಯಾಕ ? ಹೇಳು.

**ಕಲ್ಲ** :– ಯಾರನ್ನ– ಎಲ್ಲಿ– ಯಾಕ– ಅಂತ ಕೇಳಬ್ಯಾಡ. ಇದ ನೋಡು, ಒಳ್ಳೇ ವ್ಯಾಳ್ಯೆ ಕೂಡೀ ಬಂದsದ. ಇಂಥಾದು ಬರೂದು ಬಹಳ ಕಠಿಣ. ಏಳತೀಯೋ ಇಲ್ಲೋ ? ಚಿನ್ನಮ್ಮ, ಆ ಮೂಲಿಯೊಳಗಿಂದ ಬಡಗೀ ತಗೋ ! ಇಲ್ಲಿ ತಾ.

**ಚಿನ್ನಮ್ಮ** :—ಯಾಕ ಕಲ್ಲಪ್ಪ, ಮೈಯಾಗ ಬಹಳ ರವಸ ತುಂಬೇದ.

**ಕಲ್ಲ** :—ಅದನ್ನ ಮುಂದ ಹೇಳತೀನಿ ರವಸ ಯಾಕ ತುಂಬೇದಂತ ; ಈಗ ಸವಡು ಇಲ್ಲ ಹೇಳಲಿಕ್ಕೆ.

( ದೂರದಿಂದ ಗಲಾಟೆಯ ಸಪ್ಪಳವು ಕೇಳ ಬರುವದು. ಜನಗಳ ಕೂಗಾಟವು ಕೇಳಬರುವದು. '**ಹೊಡಿ**' 'ಬಡಿ' ಎಂದು ಕೂಗುತ್ತಿರುವರು.)

**ಕಲ್ಲ** :—ಕೇಳಿದ್ಯಾ ಹೊರಗಿಂದು ಸಪ್ಪಳಾ ; ಹೊರಡು. ನಾವs ಹೋಗಲಿಲ್ಲಂದ್ರ ಅವರನ್ನು ಮೋಸ ಮಾಡಿದ್ಹಾಂಗ ಆಗತದ. ಏಳಪಾ, ಮಲ್ಲಾ.

**ಮಲ್ಲೇಶಿ** :—ಜರಾ ತಡಿ ; ಇದೇನು ಮೊದಲು ಹೇಳು. ಆ ಮೇಲೆ ಬರತೇನಿ.

**ಕಲ್ಲ** :— ಎಲಾ ಮಂಜಾಳ ; ಎಷ್ಟ ಮಾಡತಿಯೋ ಬರತೀಯೋ ಇಲ್ಲೋ ? ಇಷ್ಟ ಕಷ್ಟ ಬಡತೀ ಯ್ಯಾಕ ಅಂಬೂದು ತಿಳಿಯೊಲ್ಲದಲ್ಲ. ಘನ ಬುದ್ಧಿ ಬಿಡು ನಿಂದು.

**ಮಲ್ಲೇಶಿ** :—ಹೇಳಲೇ ಕಲ್ಲ.

**( ಹೊರಗಿನ ಕೂಗಾಟವು ಮತ್ತೆ ಜೋರಾಗುವದು. )**

**ಕಲ್ಲ** :—ಬಾ ಮಲ್ಲ, ಲಗೂನೇ ನಿಂದರಬ್ಯಾಡ (ಕಲ್ಲ ಹೋಗ ಹತ್ತುವನು.)

**ಚಿನ್ನವ್ವ** :—ಅಲ್ಲ ಮಾವಾ, ಇದೇನಿದು ವಿರಬದ್ರದೇವರ ಅವತಾರ ತಾಳಿದ್ಹಾಂಗ ಮಾಡತೀಯಲ್ಲ. ಒಂದ ಜರಾ ದಮ್ಮ ಹಿಡಿ; ಕೂತಕೋ.

**ಕಲ್ಲ** :—(ನಿಂತು) ಇಲ್ಲ ಬಿಡು ಸವಡು ಮಾತಾಡಾಕ. ನಾ ಅನಕ ಮಾತ ಕೊಟ್ಟೇನಿ, ಹೋಗೇತೀರೀನಿ. ಮಲ್ಲೇಶಿ, ನೀ ಬರತಿದ್ರ ಬಾ; ಬಿಡತಿದ್ರ ಬಿಡು. ನಿನಗೆಷ್ಟು ಹೇಳೂದು.

**ಚಿನ್ನವ್ವ** :— ನಿಮಗ ಕಡ್ಡೀ ಕೊಟ್ಟ ಹೇಳತೀನಿ, ಹೋಗ ಬ್ಯಾಡಂತ. ಯಾಕೋ ಜೀಂವಾ ನಿಮಗ ಹೋಗ ಬ್ಯಾಡಂತದ. ಒಂದ ಜರಾ ಕೂತಾರ ಕುಂದ್ರು.

**ಕಲ್ಲ** :— ಚಿನ್ನವ್ವಾ, ನೀ ಹೆಂಗಸುಬಾಲಿ ನಿನಗ ನಮ್ಹಾಂಗ ತಿಳಿದೂಲ್ಲ. ಮಾತಾಡ ಬ್ಯಾಡ. ನನಗ ಈಗ ಪೂರಸೊತಿಗೆ ಇಲ್ಲ ಹೋಗತೀನಿ. ಮಲ್ಲೇಶೀ, ಬರತೀಯೋ-ಇಲ್ಲೊ ? ಹೇಳಷ್ಟು ?

**ಮಲ್ಲೇಶಿ** :—ಹೂಂ, ಬರತೀನಿ.

**ಕಲ್ಲ** :—ನಾ ಹೋಗತೀನಿ ಬಾ. (ಎಂದು ಹೋಗುವನು.)

**ಚಿನ್ನವ್ವ** :—ಇದೇನಿದು ; ಕಲ್ಲ, ಎಲ್ಲಿಗ ಕರೆದ.

**ಮಲ್ಲೇಶಿ** :— ನನಗ ಗೊತ್ತಿಲ್ಲ. ಏನೋ ಬಿಡ ; ಕರೆದು ಹೋದ. ಇಷ್ಟೇ ಗೊತ್ತದ. ಇರಲಿ ಬಿಡು ; ಅದನ್ನ ತಗೊಂಡು ಏನ ಮಾಡತೀ. ಗಟ್ಟಿಯಾಗಿ ಕದಾ ಇಕ್ಕಿಕೊಂದು ಮಲಕೋ. ನಾ ಈಗ ಬರತೀನಿ ಹೋಗಿ.

**ಚಿನ್ನವ್ವ** :—ನನಗ ನೀವು ಬರೂತನಕ ನಿದ್ದಿ ಹತ್ತೂದುಲ್ಲ ನೀವು ಬರೂತನಕ ಏನಾರ ಹೋರೇವು ಮಾಡತೀನಿ.

**ಮಲ್ಲೇಶಿ** :—ಬಹಳ ರಾತ್ರಿ ಆಗೇದ; ಮಲಕೋಬಾರದ. ಏನ ಕೆಲಸಾ ಮಾಡತೀ; ನಿನಗ ಏನ್ಯಾರ ಹುಚ್ಚು ಹಿಡದದೇನು? ಸುಮ್ಮನ ಮಲಕೋ.

**ಚಿನ್ನಮ್ಮ** :—ಮಲಕೋತೀನಂತ.

**ಮಲ್ಲೇಶಿ** :—ಮಲಕೋ; ಕೂಡ್ರಬ್ಯಾಡ. ಎಲ್ಲಾರ ಜಡ್ಡ ಆದೀತು.

**ಚಿನ್ನಮ್ಮ** :— ನನಗೇನ ಆಗತದ; ನಿಮ್ಮ ಜೀವಾ ಜಪ್ಪಿಸಿ ಕೊಳ್ರಿ. ನಿಮ್ಮಿಂದ ನನ್ನ ಜೀವಾ.

**ಮಲ್ಲೇಶಿ** :—ನಿನ್ನ ಜೀವಾನೂ ಅಷ್ಟೇ ಅದ; ನಂದೂ ಅಷ್ಟೇ ಅದ.

**ಚಿನ್ನಮ್ಮ** :— ನಿಮ್ಮದು—ನಂದು ಅಷ್ಟೇ ಹ್ಯಾಗ ಆದೀತರಿ. ಬಹಳ ರಾತ್ರಿ ಮಾಡಬ್ಯಾಡ್ರಿ. ಲಗೂನೇ ಬರ್ರಿ. ಈಗೇ ಬಹಳ ರಾತ್ರಿ ಆಗೇದ.

**ಮಲ್ಲೇಶಿ** :– ಈಗ ಒಂದ ಕ್ಷಣದಾಗ ಬರತೀನಿ. ಅದರ ಕಾಳಜಿ ಬಿಡು.

**ಚಿನ್ನಮ್ಮ** :—(ನಗುತ್ತ) ಕಾಳಜಿ ಬಿಟ್ಟು ಚಿಂತೀ ಹಿಡೀಲ್ಯಾ.

**ಮಲ್ಲೇಶಿ** :— ಅಬ್ಬ! ಚಿನ್ನೀ, ಮಾತ ಕಲತೀಹಾಂಗಾರ, ಪಟ್ಟ ಣಕ್ಕ ಬಂದು.

**ಚಿನ್ನಮ್ಮ** :— (ನಗುತ್ತ) ನಾ ಏನ ಕಲೀಲಿ! ನೀವ ಕಲ್ಸಿದ್ದ ಇದು.

**ಮಲ್ಲೇಶಿ** :—ಬುದ್ಧಿ ಚುರಕ ಆಗೇದ್ಹಂಗಾರ ಪಟಣ್ಣ ಬಂದು.

**ಚಿನ್ನಮ್ಮ** :–ನೀವೇ ಚುರಕ ಮಾಡಿದವ್ರು ಪಟ್ಣಕ ಕರಕೊಂಡು ಬಂದು. ನೀವು ಕರಕೊಂಡು ಬಂದಿದ್ದಿಲ್ಲಂದ್ರು ನಂದೇನು ಚುರಕ ಆಗತಿತ್ತ ಬುದ್ಧಿ.

( ಹೊರಗಿನಿಂದ ಕಲ್ಲ—ಮಲ್ಲೇಶಿ, ಏ, ಏ, ಏ, ಮಲ್ಲೇಶೀ, ಲಗೂನೇ ಬ್ಯಾರೋ ಬಾ, ಎಂದು ಕೂಗುವನು. )

**ಮಲ್ಲೇಶಿ** :— ಕಲ್ಲಂದು ಗಂಟ್ಲ ಹೋಗತsದ ಕೂಗಿಕೊಂಡು. ಹೋಗ ಬರತೀನಿ. ಗಪ್ಪಚುಪ್ಪ ಮಲಕೋ ಕದಾ ಇಕ್ಕಿಕೊಂಡು ದಗದಾ ಮಾಡಬ್ಯಾಡ.

**ಚಿನ್ನಮ್ಮ** :— ಮಾಡೂದಿಲ್ಲ.

**ಮಲ್ಲೇಶಿ** :— ನೋಡ ಮಾಡಿದೆಂದರ.

**ಚಿನ್ನಮ್ಮ** :—(ತನ್ನ ಬೊಗಸೆಗಣ್ಣಿನಿಂದ ಮಲ್ಲೇಶಿಯನ್ನು ದುರು ದುರನೆ ನೋಡುತ್ತ ನಿಲ್ಲುವಳು.) ನೋಡತೀರಾ ?

**ಮಲ್ಲೇಶಿ** :—ಬಹಳ ಖೋಡಿ ಆಗೀದೀ ನೋಡು. ಸುಮ್ಮ ಮಲಕೋ. ನಾ ಹೋಗತೀನಿ ನೋಡು. (ನಾಲ್ಕು ಹೆಜ್ಜೆ ಮುಂದಕ್ಕೆ ಹೋಗಿ) ಕದಾ ಗಟ್ಟಿಯಿಕ್ಕೋ.

**ಚಿನ್ನಮ್ಮ** :—ಯಾಕ ಹೋಗತೀರಿ; ಏನ ಕೆಲ್ಸ ಅದ.

**ಮಲ್ಲೇಶಿ** :—ಮಂಗಾ, ಹೀಂಗ ಹೋಗೂ ಮುಂದ ಕೇಳಬಾ ರದು. ಅದನ್ನ ತಗೊಂಡು ನೀ ಏನ ಮಾಡತೀ.

**ಚಿನ್ನಮ್ಮ** :— ಸುಮ್ಮನ ಕೇಳಿದೆ.

**ಮಲ್ಲೇಶಿ** :—ಅಂದ್ರ ಸುಮ್ಮನ ಮಲಕೋ— ನಾ ಹೋಗತೀನಿ— ಹಾ, ನಾ ಹೋಗಿ ಬರಲ್ಯಾ. ( ಚಿನ್ನಮ್ಮ ಸುಮ್ಮನೇ ಇರುವಳು. ) ಮಾತಾಡು; ಮೂಕದೆವ್ವ ಬಡದದೇನು. ಮಾತೂ ಬರೂದಿಲ್ಲs.

(ಹೊರಗಿನಿಂದ ಕಲ್ಲ:—ಏೀೕ ಮಲ್ಲೇಶಿ, ಬಾರೋ ಬಾ, ಎಂದು ಗಟ್ಟಿಯಾಗಿ ಕೂಗುವನು.)

**ಮಲ್ಲೇಶಿ** :—ಬಂದ್ನ್ಯೋ ಕಲ್ಲ; ಸ್ವಲ್ಪ ನಿಂದ್ರು. ನಾ ಹೋಗ ತೀನಿ. ನಾ ಬರೂತನಕ ಮನಿ ಜೋಕೆ. ಅಂ! (ಎಂದು ಹೇಳಿ ಹೋಗು

ವನು. ಚಿನ್ನಮ್ಮ ಬಾಗಿಲವನ್ನು ಇಕ್ಕುತ್ತಿರುವಳು. ಮಲ್ಲೇಶಿ ಮತ್ತೆ ಹೊರಳಿ ಬಂದು "ಕದಾ ಗಟ್ಟಿ ಇಕ್ಕೋ" ಎಂದು ಹೇಳಿ ಹೋಗುವನು.

ಚಿನ್ನಮ್ಮ ಬಾಗಿಲವನ್ನು ಇಕ್ಕಿಕೊಳ್ಳುವಳು. ಹೊರಗೆ ಜನಗಳ ಗಲಾಟೆ ಬಹಳವಾಗುವದು. ಅವಳು ಬೀದಿಗೆ ಇರುವ ಗವಾಕ್ಷವನ್ನು ತಗೆದು ಕೆಲವು ನಿಮಿಷ ನೋಡುತ್ತ ನಿಲ್ಲುವಳು. "ಲಗೂನೇ ಬರ್ರಿ ಮಳೀ ಬರಲಿಕ್ಕ ಹತ್ತೇದ; ಬಹಳ ತೊಯ್ಸಿಕೋತೀರಿ" ಎಂದು ಕೂಗಿ ಮಾತನಾಡಿ ಕಿಡಕಿಯನ್ನು ಇಕ್ಕುವಳು. ಹಾಸಿಗೆಯನ್ನು ಹಾಸುವಳು. ಕೆಲವು ನಿಮಿಷ ತಿರುಗಾಡುವಳು. ಗಲಾಟೆಯು ಹಾಗೇ ಕೇಳಿಸುವದು. ಅದರ ಕಡಿಗೆ ಲಕ್ಷ್ಯಗೊಟ್ಟು ಕೇಳುತ್ತ ನಿಲ್ಲುವಳು. ಗಲಾಟೆ ಹೆಚ್ಚಾಗುವದು. ನಿದ್ರೆ ಬರುವದಿಲ್ಲೆಂದು ತಿಳಿದು ಬೀಸಹತ್ತುವಳು. ಬೀಸುತ್ತ ಕೆಳಗಿನ ಪದ್ಯಗಳನ್ನು ಹಾಡಹತ್ತುವಳು.

ಅತ್ತೀಯ ಮನಿಯಾಗ ಮುತ್ತಾಗಿ ಇರಬೇಕ ।
ಹೊತ್ತ ನೀಡಿದರ ಉಣಬೇಕ । ತವರವರ ।
ಉತ್ತಮರ ಹೆಸರ ತರಬೇಕ ॥

ಕಾಚ ಕಪ್ಪುರ ಹೀನ, ನೀಚ ನಾಲಿಗೆ ಹೀನ ।
ಆಚಾರ ಹೀನ ಗರತೀಗಿ । ಅಕಿಮುಂದ ।
ದೇಸಾಯಿ ಅಣ್ಣ ನಗು ಹೀನ ॥

ಚಿಂತಿ ಮಾಡಲಿಬ್ಯಾಡ ಛೀ ಹುಚ್ಚಿ ಹಡೆದಂತ ।
ಚಿಂತ್ಯಾಗ ಕಾಯ ಇಳಿದರ । ಪಾಂಡವರ ।
ಅಂಥವರಿಗುಂಟು ವನವಾಸ ॥

ಅತ್ತಿ-ಮಾವಗಂಜಿ ಸುತ್ತೇಳು ನೆರೆಗಂಜಿ ।
ಮತ್ತ ನಲ್ಲನ ಧನಿ ಗಂಜಿ । ನಡೆದರ ।
ಎಂಥ ಉತ್ತಮರ ಮಗಳೆಂದ ॥

ಅಂಜೂರಿ ಹಣ್ಣೊಂದು ತಂದು ತೂರಲಿಬ್ಯಾಡ ।
ಹೆಂಡರಿಗೆ ಸಲಿಗಿ ಕೊಡಬ್ಯಾಡ । ನನತಮ್ಮ ।
ಮುಂದ ನಿನ ಮಾತ ನಡಿಯಾವ ॥

ಕಲ್ಲ ಕೊಟ್ಟವಗ ಎಲ್ಲ ಭಾಗ್ಯವು ಇರಲಿ ।
ಪಲ್ಲಕ್ಕಿ ಇರಲಿ ಪದವಿರಲಿ । ಹಡೆದವ್ನ ।
ನೆಲ್ಲಬಾನಿರುವ ಮನಿಯಿರಲಿ ॥

ನಮ್ಮ ಬೀಸಿದ ಹಿಟ್ಟು ಸೂತಕ ಆದಾವ ।
ಪಾತಾಳದಾನ ಸಿರಿಗಂಗಿ । ನಾ ಹಾಡಿದರ ।
ಸೂತಕವಿಲ್ಲ ಹೊಲಿಯಿಲ್ಲ ॥

ಆದ ಮುಕ್ಕಿಗಿ ನನ್ನ ಸ್ವಾದರನ ಹಾಡುವೆನು ।
ಸ್ವಾದರನ ತಂಗಿ ಹಡೆದಮ್ಮ । ನಿನ ಹಾಡಿ ।
ಓಡೀಸಿ ರಥವ ನಿಲಿಸೇನ ॥

ಕಪ್ಪು ಹೆಂಡತಿಯಂತ ಕರಕರಿ ಮಾಡಬ್ಯಾಡ ।
ನೀಲದ ಹಣ್ಣು ಬಲು ಕಪ್ಪು । ಇದ್ದರು ।
ತಿಂದು ನೋಡಿದರ ರುಚಿ ಭಾಳ ॥

ಕೆಂಪು ಹೆಂಡತಿಯೆಂದು ಸಂತೋಸಪಡಬ್ಯಾಡ ।
ಅತ್ತೀಯ ಹಣ್ಣು ಅತಿ ಕೆಂಪು । ಇದ್ದರು ।
ಒಡೆದು ನೋಡಿದರ ಹುಳ ಭಾಳ ॥

ಚೆಲುವಿ ಚೆಲುವಿಯಂತ ಅತಿ ಬಾಯಿ ಬಿಡಬ್ಯಾಡ ।
ಚಲುವಿದ್ದರೇನು ಗುಣವಿಲ್ಲ, ಕೊಳೆ ನೀರ ।
ತಿಳಿಯಿದ್ದರೇನು ರುಚಿಯಿಲ್ಲ ॥

ಉಡುಕೀಯ ಹೆಂಡೂತಿ ಉಡಿಯಾನ ಲಿಂಗೆಂದಾ ।
ಕಿರಿಬಳ್ಳು ಹಿಡಿದ ಮಡದೀಯ । ಸಂಗಾಟ ।
ಸಿಡಿಸೀಡಿ ಯಾಕೋ ಸಿರಿರಾಯಾ ॥

ಜಾತ ಮಲ್ಲಿಗಿ ಹೂವ ಜೆಗ್ಗಿ ಕೊಯ್ಯುವರೇನ ।
ಜಗ್ಗಿದರ ಮಗ್ಗಿ ಉದುರ್‍ಯಾವ । ಪರಹೆಣ್ಣ ।
ದಿಟ್ಟೀಸಿ ನೋಡಿ ಫಲವೇನ ॥

ಆದಾವ ನಮ ಜೋಳ ಉಳಿದಾವ ನಮ ಹಾಡ ।
ಈಗ ಸಾಕವ್ವ ನಿನ ಕಲ್ಲ । ಕೈಯಾನ ।
ಹಾಕಿದುಂಗರ ಸವಿದಾವ ॥

ಆದ ಮುಕ್ಕಿಗೆ ಶರಣು ಗೋದಿ ಕಲ್ಲಿಗೆ ಶರಣು ।
ಓನಾಮ ಶಿವಗ ಶರಣು । ಮಲ್ಲಯ್ಯ ।
ನಿಮ್ಮ ಪಾದಕ ನಮೋ ಶರಣು ॥

ಕದವನ್ನು ಯಾರೋ ತಟ್ಟುವರು. ಚಿನ್ನಮ್ಮ ಗಾಬರಿಯಾಗಿ ಸಪ್ಪಳ ಬಂದ ಕಡಿಗೇ ಕಿವಿಗೊಟ್ಟು ಬೀಸೂದು ಬಿಟ್ಟು ಕುಳಿತು ಕೊಳ್ಳುವಳು. ಮೊಗದ ಮೇಲೆ ಬಂದ ಬೆಮರ ಹನಿಗಳನ್ನು ಒರಿಸಿ ಕೊಳ್ಳುತ್ತ ಗಾಬರಿಯಾಗಿ ಕುಳಿತುಕೊಳ್ಳುವಳು. ಮತ್ತೆ ಕದವನ್ನು ತಟ್ಟುವರು. ಚಿನ್ನಮ್ಮ ಮಾತನಾಡುವದಿಲ್ಲ. ಕದವನ್ನು ನಾಲ್ಕಾರು ಸಾರೆ ತಟ್ಟುವರು. ಆಕೆ ಬದಿಯಲ್ಲಿದ್ದ ದೀಪವನ್ನು ಆರಿಸಿ ಅಲ್ಲಿಯೇ ಒರಗುವಳು. ಕೋಣೆಯಲ್ಲಿ ಕತ್ತಲೆ. ಹೊರಗೆ ಗಾಳಿಯು ಬೀಸು ತ್ತಿರುವದು. ಮಳೆಯು ಬರುತ್ತಿರುವದು. ಕದವನ್ನು ಜೋರಿನಿಂದ ತಟ್ಟುವರು. ಅದಕ್ಕೆ ಚಿನ್ನಮ್ಮನ ಉತ್ತರವೇ ಇಲ್ಲ. "ಚಿನ್ನಮ್ಮ, ಚಿನ್ನಮ್ಮ, ಕದಾ ತಗೀ" ಎಂದು ಕೂಗುವರು. ಅದಕ್ಕೆ ಉತ್ತರವೇ ಇಲ್ಲ. "ಚಿನ್ನಮ್ಮ, ಚಿನ್ನಮ್ಮ" (ಗಟ್ಟಿಯಾಗಿ ಚಿನ್ನಮ್ಮ ಏ ಚಿನ್ನೂ, ಎಂದು ಹೊರಗೆ ಯಾರೋ ಕೂಗುವರು. ಚಿನ್ನಮ್ಮ ಒಳಗಿನಿಂದ 'ಯಾರು ?' ಎಂದು ಮೆಲ್ಲಗೆ ಕೇಳುವಳು. ಕದಾ ತಗೀ ಮೊದಲು ಚಿನ್ನೂ, ಎಂದು ಕೂಗುವರು. ಚಿನ್ನಮ್ಮ ಒಳಗಿನಿಂದ "ಯಾರ ನೀವು" ಎಂದು ಕೇಳುವಳು. ಹೊರಗಿನಿಂದ "ಮಲ್ಲೇಶಿಗೆ ತಲಿಗ

ಪೆಟ್ಟು ಬಿದ್ದಹಾಗಿದೆ, ಅಲ್ಲಿ ಬವಳಿ ಬಂದು ಬಿದ್ದಾನ. ಲಗೂನೇ ಬಾಗಿಲ ತಗಿ; ಲಗೂನೇ ಬಾ" ಚಿನ್ನಮ್ಮ ಗಾಬರಿಯಾಗಿ ಎದ್ದು ದೀಪವನ್ನು ಹಚ್ಚುವಳು. "ಚಿನ್ನಮ್ಮ ಲಗೂನೇ ನೀರು ತಗೊಂಡು ಬಾ" ಎಂದು ಹೊರಗಿನಿಂದ ಕೂಗುವರು. ಒಳಗಿನಿಂದ ಚಿನ್ನಮ್ಮ "ದೀಪಹಚ್ಚುವೆನು. ತಡಿರೀ." ದೀಪಹಚ್ಚಿ ಬಾಗಿಲ ತಗೆಯಲು ಹೋಗುವಳು. ಎಡಗೈಯಲ್ಲಿ ದೀಪವನ್ನು ಹಿಡಿದುಕೊಂಡು ಬಾಗಿಲವನ್ನು ತೆಗೆಯುವಳು. ಹೊರಗೆ ದೀಪವನ್ನು ಹಿಡಿದು ಸ್ವಲ್ಪ ಮೊಗವನ್ನು ಹೊರಗೆ ಯಾರಿರುವರೆಂದು ನೋಡಬೇಕೆಂದು ಚಾಚುವಳು.

"ಯವ್ವಾ SSS ಇವಾ, ಚ....ಂ...ಡಾ...ಲಾ" ಎಂದು ಕೂಗುವಳು. ಹೊರಗಿನಿಂದ ಗಾಳಿ ಬೀಸಿ ದೀಪನೊಂದುವದು. ಮನೆಯಲ್ಲಿ ಕತ್ತಲೆ. ಹೊರಗಿನ ಮಿಂಚು ಮನೆಯಲ್ಲಿ ಕಾಣಿಸುವದು.

**ಚಿನ್ನಮ್ಮ**:—(ಮತ್ತೆ) ಯವ್ವಾ SSS ಈವಾ !

## ಒಂದನೆಯ ಪ್ರಮೇಯ ಮುಗಿದುದು.

# ಪ್ರಮೇಯ ಎರಡು

(ಸೂರ್ಯನು ಉದಯವಾಗಿ ಎರಡು ತಾಸಾಗಿತ್ತು. ಎಲ್ಲ ಕಡೆಗೂ ಬಿಸಿಲು ಪಸರಿಸಿತ್ತು. ನೈಸರ್ಗಿಕದೇವತೆಯು ಆನಂದದಿಂದ ಕುಣಿಯುತ್ತಿದ್ದಳು. ಮಲ್ಲೇಶಿಯ ಮೊಗದ ಮೇಲೆ ನಿರುತ್ಸಾಹ ಕಳೆ. ಮಲ್ಲೇಶಿಯು ಇಂದು ತನ್ನ ದಿನದ ಕೆಲಸಕ್ಕೆ ಹೋಗದೆ ಹಾಗೇ ನಿರುತ್ಸಾಹದಿಂದ ಮನೆ ಹಿಡಿದು ಕುಳಿತುಕೊಂಡಿದ್ದನು. ಮಲ್ಲೇಶಿಯ ಮನೆ ಬಡವನ ಮನೆ ; ಎಲ್ಲ ಕಡೆಗೂ ಹೊಲಸು. ಮೂಲಿಗೊಂದು ಕಸದ ಗುಂಡಿ. ಮನೆಯು ತುಂಬೆಲ್ಲಾ ಸುಟ್ಟ ಬೀಡಿಗಳೇ. ಆತನ ಮನೆಯ ಬಾಗಿಲ ಪೂರ್ವಕ್ಕೆ. ಅದರ ಎದುರಿಗೇ ಮಲ್ಲೇಶಿ ಒಂದು ಮುರುಕು ಹೊರಸನ್ನು ಹಾಕಿದ್ದನು. ಅದರ ಬದಿಯುಲ್ಲಿಯ ನೆಲದ ಮೇಲೆ ತನ್ನ ಅರಿವಿ–ಅಂಚಡಿಗಳನ್ನು ಹಾಗೇ ಬೀಸಾಡಿದ್ದನು. ಅವು ಬೀಡಿಯ ಗುಂಡಿಯಲ್ಲಿ ಬಿದ್ದು ಹೊರಳಾಡುತ್ತಿದ್ದವು.

ಮಲ್ಲೇಶಿಯು ತಲೆ ತಿಕ್ಕುತ್ತ ಹೊರಸಿನ ಮೇಲೆ ಕುಳಿತಿದ್ದನು. ಕಲ್ಲ ಕೆಳಗೆ ನೆಲದಮೇಲೆ ಒಂದು ಹರಕು ಶರ್ಟನ್ನು ಹಾಕಿಕೊಂಡು ಕುಳಿತಿದ್ದನು. ಮಲ್ಲೇಶಿಯ ಶರ್ಟ ಎಲ್ಲವೂ ಹರಿದು ಹೋಗಿರುವದು. ಮೊಗದ ಮೇಲೆ ಗಡ್ಡ ಬೆಳೆದಿರುವವು. ಆತನ ತೇಜ ಎಲ್ಲಿಯೋ ಅಡಗಿ ಹೋಗಿರುವದು. ದೇಹದಲ್ಲಿ ಆಲಸ್ಯ ; ಮೊಗದ ಮೇಲೆ ನಿರುತ್ಸಾಹ ಕಳೆ. ಉಟ್ಟಿದ್ದಾದರೂ ಒಂದು ಹೊಲಸು ಹರಕು ವಲ್ಲಿ. ಅದಕ್ಕೆ ಸಾವಿರಾರು ಬ್ರಹ್ಮ ಕಂಬಿಗಳು.

ಕಲ್ಲನ ವೇಷವಾದರೂ ಮಲ್ಲೇಶಿಯಂತಯೇ. ಆತ ಉಟ್ಟದ್ದು ಮಾತ್ರ ಸ್ವಲ್ಪ ಗಟ್ಟಿ ; ಹಾಗೂ ಸ್ವಲ್ಪ ಸ್ವಚ್ಛ. ಕಲ್ಲ ಬೀಡಿಯನ್ನು ಸೇದುತ್ತ ಮಾತಾಡಹತ್ತುವನು.)

**ಕಲ್ಲ** :—ಮಲ್ಲೇಶೀ, ಇದೇ ನೋಡು ನಮ್ಮ ಬಡವರ ಬಾಳು. (ಬೀಡಿಯನ್ನು ನಲಕ್ಕೆ ತಿಕ್ಕುತ್ತ) ನಾವು ಕತ್ತೆ ದುಡಿಯುವ್ಹಾಂಗ

ದುಡಿಯೋದು ಮಾತ್ರ ಖರೇ. ಏನಾರೆ ಜರಾ ಅದೇ ಏನ ಅದನ ಜೀವಕ್ಕ ಸುಖಾ. ನೋಡಿದಿಲ್ಲೋ ನಿನ್ನೆ ರಾತ್ರಿ ನಮ್ಮ ಸ್ಥಿತಿ.

**ಮಲ್ಲೇಶಿ** :—( ತನ್ನ ಎರಡೂ ಹಸ್ತದಿಂದ ಮೊಗವನ್ನು ತಿಕ್ಕಿ ಕೊಳ್ಳುತ್ತ ) ಅದು ಹಾಳಾಗಿ ಹೋಗಲಿ ನಿನ್ನೀದು. ಮನ್ಯಾಗಿಂದ ರಗಡ ಆಗೇದ ; ಹೊರಗಿಂದು ತಗೊಂಡು ಏನಮಾಡ್ಲಿ. ಚಿನ್ನಿ ಎಲ್ಲಿ ಹೊತೋ ನಿನ್ನ ರಾತ್ರಿ. ನಾ ಅಷ್ಟ್ಯಾಗ ಹೇಳಿದ್ದೆ ಕದ ಗಟ್ಟ ಇಕ್ಕಿಕೊಂಡು ಮಲಕೋ ಅಂತ.

**ಕಲ್ಲ** :— ಮಲ್ಲೇಶೀ, ಯಾಕ ಗಾಬರಿಯಾಗತೀ ಕೋಡೀ. ಗಂಡನ ಮ್ಯಾಲಿನ ಕರಣಾದಿಂದ ನೀ ಬರಲಿಕ್ಕೆ ತಡ ಆತೆಂತ ನಿನ್ನ ಹುಡಕಾಕ ಹೋಗಿ ಹಾದೀ ತಪ್ಪಿಸಿಕೊಂಡಿದ್ದಾಳು. ಬಂದಾಳು ಈಗ. ಅದಕ್ಯಾಕ ಅಷ್ಟ ಗಾಬರಿಯಾಗತೀ.

**ಮಲ್ಲೇಶಿ** :— ಕಲ್ಲಾ, ಅದು ಹಾಂಗ ಅಲ್ಲ; ಏನೋ ನನ್ನ ಮನಸ್ಸಿನ್ಯಾಗ ತರತರದ ವಿಚಾರ ಬರತಾವ. ನೀ ನಿನ್ನೆ ಕರದಾಗ ನಾ ಬರ ಬಾರದಂತ ಮಾಡಿದ್ದೆ. ನೀ ಹೊರಗ ಗಂಟ್ಲ ಹರಿಯೂ ಹಾಂಗ ಕೂಗಿ ಕೊಂಡಿ ಅಂತ ನಾ ಬಂದೆ. ಮನೀಗಿ ಬರೂದರಾಗ ಕದ ತಗದು ಇಟ್ಟಿತ್ತು; ಮನ್ಯಾಗ ದೀಪ ಇದ್ದಿಲ್ಲ; ಇದನ ನೋಡಿ ನನ್ನ ಎದಿ ಧಸ್ಸಲ್ ಅಂತ ಅಂತು ಕದಾ ಹಾಕೊಳ್ಳಿಕ್ಕೆ ಮರೆತಿದ್ದಳಂತ ಒಳಗ ಬಂದು ಹುಡುಕಿದೆ. ಚಿನ್ನಿನೇ ಇದ್ದಿದ್ದಿಲ್ಲ. ಗಾಬರಿಗೆಟ್ಟು ನಾ ಹಿಂದಗಡೆ ಬೆಳತನಕ ಊರ ತುಂಬಾ ಹುಡುಕಿದೆ ಚಿನ್ನಿ ಎಲ್ಲ್ಯೂ ಸಿಗಲಿಲ್ಲ. ರಾತ್ರಿ ನಿನ್ನ ಮನಿಗೆ ಬರಬೇಕಂತ ಮಾಡಿದ್ದೆ.

**ಕಲ್ಲ** :— ಬರಬೇಕಾಗಿತ್ತೋ ನಿನ.

**ಮಲ್ಲೇಶಿ** :—ನಿದ್ದಿಗಟ್ಟ, ಸುಮ್ಮನೆ ಯಾಕ ಬರಬೇಕಂತ ಬಿಟ್ಟೆ. ಬೆಳ್ಳಿ ಚಿಕ್ಕಿ ಮೂಡಿತ್ತೋಡು ನಾ ಮನಿಗೆ ಬಂದಾಗ. ಆಸಪಾಸ ಮನೀ

ಯುವರು ಬೀಸತಿದ್ದರು. ಬಂದೀನಿ, ಹೀಗೆ ಹಾಸಿಗೀ ಮ್ಯಾಲ ಕೂತೀನೀ; ಕಣ್ಣಿಗೆ ಕಣ್ಣ ಹಚ್ಚಿಲ್ಲ.

**ಕಲ್ಲ** :—ಸುಳ್ಳೇ ಮನಸಿಗೆ ಹಚಕೋತೀ ನೀs, ಒಂದ ಸ್ವಲ್ಪ ಏನಾರೆ ಆದರೆ ಗಾಬರಿಗೆಟ್ಟು ಕೈಕಾಲು ಬಿಡತೀ—ನಾ ಹುಡುಕಿಕೊಂಡು ಬರತೀನಿ. ನೀ ಮಾತ್ರ ಕೈಕಾಲ ಬಿಡಬ್ಯಾಡ.

**ಮಲ್ಲೇಶಿ** :—( ಎದ್ದು ಕಲ್ಲನ ಹತ್ತರ ಕುಳಿತು ) ನೀ ಹುಡಿಕಿ ಕೊಂಡ ಬರತೀಯಾ ಕಲ್ಲ. ಆಂ; ನೀ ಹುಡುಕಿಕೊಂಡ ಬರತೀ.

**ಕಲ್ಲ** :—ನಾ ಬಂದೇ ಬರತೀನಿ ಬಿಡು; ಅದಕ್ಯಾಕ ಕಾಳಜಿ.

**ಮಲ್ಲೇಶಿ** :—ನೀ ಹುಡ್ಕಿಕೊಂಡು ಬಂದ್ರ ನಿನ್ನ ಕೈಯಾಗ ಒಂದು ಕಡೇ ಹಾಕತೀನಿ ನೋಡು.

**ಕಲ್ಲ** :—ಅದಕ್ಯಾಕ ಅಷ್ಟು; ಚಿನ್ನಮ್ಮ ನನ್ನ ತಂಗಿ ಇದ್ದ್ಹಾಂಗ ಇದ್ದಾಳ ಅದಕ್ಯಾಕ ಅಷ್ಟು.

**ಮಲ್ಲೇಶಿ** :—ನೋಡ ಕಲ್ಲ; ಆಕೀ ಹೊಟ್ಟೇಲೆ ಇದ್ದಾಳೋ. ನಾ ಅದಕ ಎಷ್ಟ ಹೇಳಿದ್ದೆ ಹೊರಗ ಹೋಗಬ್ಯಾಡಂತ; ಏನ ಮಾಡಲಿ. ನಾ ಅದಕ ಅಂಜಿದ್ದೆ ಅದೇ ಆತು.

**ಕಲ್ಲ** :— ಅಳ್ಳೆದೆಯುವಾ ಇದ್ದೀ ನೀನು. ಒಂದ ಜರಾ ಅರೇ ಧೈರ್ಯ ಇಟೀಟಿಕ ಕಳಕೊಂಡ್ರ ಮುಂದೇನ ಗತಿ. ಗಂಡಸಾಗಿ ಯಲ್ಲೋ ? ಎದಕ ಆಗೀ.

**ಮಲ್ಲೇಶಿ** :—ಗಂಡಸಾತು ಹೆಂಗಸಾತು; ಈ ಪರಿಸ್ಥಿತಿ ನಿನಗ ಬಂದಿತ್ತಂದರ ಗೊತ್ತಾಗುತ್ತಿತ್ತು. ಹೀಂಗ ಮಾತಾಡೂದು ನಾ ಹೇಳತಿದ್ದೆ.

**ಕಲ್ಲ** :—ಏನ ಬಿಡಲೇ ಹೀಂಗ ಮಾಡಿದ್ರ. ನನ್ನ ಮ್ಯಾಲ ವಿಶ್ವಾಸ ಅದನೋ ಇಲ್ಲೋ. ಇದ್ದರ ಗಪ್ಪ ಕೂಡು. ನಾ ಹುಡಕಿಕೊಂಡು ಬರತೀನಂದ್ರ ತೀರಿತು.

**ಮಲ್ಲೇಶಿ** :—( ಎದ್ದು ತಿರಿಗಾಡುತ್ತ ' ನಾ ಗಪ್ಪ ಕೂಡತೀನಿ. ಏ ಕಲ್ಲ, ಆ ಮೂಲ್ಯಾಗ ಒಂದ ಬಾಟ್ಲಿ ಅದ ತಗೋ.

**ಕಲ್ಲ** :—ಎದರ ಬಾಟ್ಲೀ.

**ಮಲ್ಲೇಶಿ** :— ತಗೋ ನಾ ಹೇಳತೀನಿ.

**ಕಲ್ಲ** :— ಹೇಳ್ಯಾರ ಹೇಳು; ನಾ ತಗೋತಿನಿ.

**ಮಲ್ಲೇಶಿ** :—( ಅಧಿಕಾರಯುಕ್ತ ವಾಣಿಯಿಂದ ) ತಗೋ ಅಂತ ಮೊದ್ಲ ಹೇಳತೀನಿ.

( ಮಲ್ಲೇಶಿಯು ತಾನೇ ಅದನ್ನು ತಗೆದುಕೊಂಡು )

**ಮಲ್ಲೇಶಿ** :— ಇದು ನೋಡು ಕಲ್ಲ, ದುಃಖ ಮರಿಸುವ ಅಮರತ; ಬಡವರ ಆನಂದ. ( ಎಂದು ಕುಡಿಯುವನು )

**ಕಲ್ಲ** :—( ಎದ್ದು ಮಲ್ಲೇಶಿಯ ಕೈಯಲ್ಲಿಯ ಬಾಟಲಿಯನ್ನು ಕಸಿದುಕೊಳ್ಳಲು ಯತ್ನಿಸುವನು ).

**ಮಲ್ಲೇಶಿ** :—(ಅವನನ್ನು ಎಡಗೈಯಿಂದ ದೂರ ಸರಿಸಿ) ಕಲ್ಲಾ, ಇದರ ಸುಕಾ ನಿನಗ ಏನ ಗೊತ್ತ ಅದ. ಒಂದ ನಾಲ್ಕು ಮಂದಿ ಬೈತಾರಂತ ನೀ ಬೈತೀ. ಯಾರ ಕುಡೀತಾರ ಅವರಿಗೆ ದುಃಕ ಅದ ಅಂತ ತಿಳಿಕೋ ; ದುಃಖ ಮರ್ಸ್ತದ ಇದು. ಮನಸ್ಸಿಗೆ ಒಂದ ತರದ ಆನಂದ ಕೊಡತದ. ಬರೇ ಕುಡೀ ಬ್ಯಾಡಂತ ನಾಲ್ಕು ಮಂದಿ ಹೇಳ್ತಾರ ಅವರಿಗೆ ನಮ್ಮ ದುಃಖ ಏನ ಗೊತ್ತು. ನಮ್ಮ ದುಃಖ ಕಸಕೊಳ್ಳಿ ನಾವು ಕುಡೀದು ಬಿಡ್ತೀವಿ. ಕುಡಿದರ ಗೊತ್ತ ಆಗತದs ಇದರ ಸುಖಾ ಇಗಾ ತಗೋ ಸ್ವಲ್ಪ. ( ಕಲ್ಲನಿಗೆ ಕೊಟ್ಟ ಹಾಗೆ ಮಾಡಿ ಮತ್ತೆ ಕುಡಿಯ ಹತ್ತುವನು. )

**ಕಲ್ಲ** :— ( ಗಾಬರಿಯಾಗಿ ನಿಂತುಕೊಳ್ಳುವನು. ) ಮಲ್ಲೇಶೀ, ಇದೇನೋ ಎಂದ ಕಲ್ತೀ ?

**ಮಲ್ಲೀಶಿ** :—( ಬಾಟ್ಲಿಯನ್ನು ಭೂಮಿಗೆ ಬೀಸಾಡಿ ) ಇದನೇನು ಕಲೀಲಿಕ್ಕೆ. ನಿನಗೂ ಭಾಳ ದುಃಖ ಆದರ ಅದನ್ನ ಮರಸಲಿಕ್ಕೆ ನೀನೂ ಕೂಡೀಲಿಕ್ಕ ಕಲೀತೀದಿ; ಇದೇನು ದೊಡ್ಡ ವಿದ್ಯಾ ಅಲ್ಲ. ಇದು ಬಡವರ ವಿದ್ಯಾ, ಸಿರಿಮಂತರ ವಿದ್ಯಾ; ಎಲ್ಲರ ವಿದ್ಯಾ; ಬಡವರ್‍ನ ಸಿರಿಮಂತರ್‍ನ ಎಲ್ಲರನೂ ಬೇದವಿಡದೆ ಒಂದೇ ರೀತಿಯಲ್ಲಿ ತರತದ ಇದು. ಆ ಕಾಲಕ್ಕ ಅವರು ನಮ್ಮ ಯಜಮಾನರು, ನಾವು ಅವರ ಆಳು, ಎಂಬ ಬುದ್ಧಿ ಇಬ್ಬರಿಗೂ ಬರೂದಿಲ್ಲ.

**ಕಲ್ಲ**: — ಮಲ್ಲೀಶೀ, ಇದೇನೋ ಇದರಾಗ ಇಷ್ಟ ಅಯಿತೇ ಮಹಿಮಾ ?

**ಮಲ್ಲೀಶಿ** : — ಏನಲೇ ಮಂಜಾಳ; ಇದರ ಮಹಿಮಾ ನಿನಗ ಗೊತ್ತಿಲ್ಲ; ಭಾಳ ಆಶ್ಚರ್ಯ ಬಿಡಲೇ. ಬಡವರು ದುಃಕ ಮರೀಬೇಕಾದ್ರ ಇದೊಂದೇ ನೋಡು ಅವಷುಧ್ಯ. ಸಿರಿಮಂತರಿಗಾದರೂ ಇದೇ ನೋಡು. ಅವರಗ ರೊಕ್ಕ ಭಾಳ ಅದ ಅಂತ ಅವರು ತರತರದ ಕುಡೀತಾರ; ನಮಗ ರೊಕ್ಕ ಇಲ್ಲ ಅಂತ ಕಡಮೀದು ಕೂಡೀತೀವಿ. ಸುಕಾ ಸುಕ ಇಬ್ಬರಿಗೂ ಅಷ್ಟೇ. ಅವರಿಗೆ ಜಾಸ್ತಿ ನಮಗ ಕಡ್ಮಿ ಅಂತ ತಿಳೀಬ್ಯಾಡ. ಎಲ್ಲಾರಿಗೂ ಅಷ್ಟೇ.

**ಕಲ್ಲ** : — ಇದರಾಗ ಸುಖ ಅದೇನು ?

**ಮಲ್ಲೀಶಿ**:—ನೀ ಕುಡಿದ್ರ ಗೊತ್ತಾಗತದ; ಇಲ್ಲಂದ್ರ ಹಾಂಗ ಗೊತ್ತ ಆಗಬೇಕು.

**ಕಲ್ಲ** :—ನಿನಗ ಮೊದ್ಲ ಹ್ಯಾಂಗ ಗೊತ್ತ ಆತು ?

**ಮಲ್ಲೀಶಿ** :—ನಾಲ್ಕು ಮಂದಿ ಬಾಯಿಂದ ಕೇಳ್ಕೊಂಡು.

**ಮಲ್ಲೇಶಿ** :— ಏನ ಹೇಳಬೇಕಲೇ ಇದರಾಗಿಂದು ಮಜ್ಯಾ, ಕೂಡಿ ತಗೋ ( ಎಂದು ಅವನಿಗೆ ಕೊಡಲು ಹೋಗುವನು. ಕಲ್ಲ ಅದನ್ನ ಕೈಯಾಗ ತಗೆದುಕೊಂಡು ಕುಡಿಯಬೇಕೆಂದು ಮಾಡುವನು. )

**ಕಲ್ಲ**:— ಮಲ್ಲೇಶೀ, ನಾ ಒಲ್ಲೆ ; ತಗೋ ಇದನ್ನ ( ಎಂದು ಮಲ್ಲೇಶಿಗೆ ಕೊಡುವನು. )

**ಮಲ್ಲೇಶಿ** :—(ಅದನ್ನು ತಗೆದುಕೊಂಡು) ಒಂದ ಜರಾ ನೋಡು. ಭಾಳ ಬ್ಯಾಡಾ. ನಿನಗ ಮಜ್ಯಾ ಹತ್ತಿದರ ಕುಡಿ ; ನಿನ್ನ ತಲ್ಯಾಗ ಭೀಂವ SSS ಅಂತ ತಿರುಗೂ ವಿಚಾರ ಹಾರಿ ಹೋಗತಾವ. ತಲ್ಯಾಗ ಒಂದ ತರ್‍ದ ಶಾಂತ ಉತ್ಪನ್ನ ಆಗಿ ಈ ಭೂಮಿನೇ ಮರತ ಬಿಡತೀ ನೋಡು. ನನಗ ಯಾವಾಗ ಯಾವಾಗ ತಲ್ಯಾಗ ಭೀಂವ ಅಂತ ವಿಚಾರ ಬಂದು ತಲಿ ಕೆಡತದ ಆಗ ನಾ ಕುಡೀತೀನಿ. ಆ ಸುಖದಾಗ ಎಲ್ಲಾ ಮರತು ಬಿಡತೀನಿ. ಇದಕ್ಯಾಕ ಇಷ್ಟ ಹೆದರತೀ ? ಒಂದ ಸ್ವಲ್ಪ ಕುಡಿ. ಇದನ್ನ ಹಿಂದಕ್ಕ ಶಿಂವಾ—ಪಾರವತಿ ಗಂಡ—ಬಸವಣ್ಣನ ಮ್ಯಾಗ ಬೂದೀ ಬಡಕೊಂಡು ಕೂತಾನಲ್ಲ, ಅವಾ ಕುಡದಾನಂತ, ನಾವು ಕುಡೀದು ಅವನ ಎಂಜಲ–( ಗುಂಗು ತಲೆಗೇರುವದು ) ನಾಲ್ಕು ಮುಖದ ದೇವರು ... ಬ್ರಹ್ಮ... ಸರಸತಿ ಗಂಡ— ಹಾಂ ; ಮಗಳ್ನ ಮಾಡಿಕೊಂಡಾವಾ — ಬ್ರಹ್ಮ ಇದನ್ನ ಕುಡಿದಾನ. ( ಝೋಲಿಯನ್ನು ಹೊಡೆಯ ಹತ್ತುವನು.) ದೇವರೂ—ಕೃಷ್ಟಪ್ಪ ; ನಮ್ಮೂರಾಗ ಗುಡಿ ಅದಲ್ಲ—ಆ ಕೃಷ್ಟಪ್ಪ, — ಹಾರೂರ ದೇವರು ; ಆ ಕೃಷ್ಟಪ್ಪ ಇದನ್ನ ಕುಡಿದಾನ. ಕೃಷ್ಟಪ್ಪ ಕುಡಿದಾನಂತ ಹಾರೂರೂ ಕುಡಿದಾರ. ಅವರು ಬಿಟ್ಟಾರಂತ ತಿಳಿದೀಯೇನು ? ಸರಗದಾದ ಇಂದ್ರ ಅಂತ ಇದ್ದಾನಲ್ಲ, ಅವಾರೇ ಏನು! ಅವನೂ ಹಿಂಗSS— ಅವಾ ಅನಕ ದಿನಾ ಇಂತಾ ಸಾವಿರ ಬಾಟ್ಲೆ ಹಾರಸ್ತಾನಂತ. ಏ ಕಲ್ಲ, ಇದರ ಇಷ್ಟ ಸುಖಾ ಅದಲೇ ? ( ಮದವು ತಲಿಗೇರುವದು. ಅತ್ತಿಂದ ಇತ್ತ, ಇತ್ತಿಂದ ಅತ್ತ, ಝೋಲಿಯನ್ನು ಹೊಡೆಯುತ್ತ ) ಕುಡಿಯಲೇ ಕಲ್ಲ; ಯಾಕ ನಿಂತೀದೀ ಮುಗದ್ಯೆನ್ಹಾಂಗ. (ಶೆರೆಯ ಬಾಟಲಿಯನ್ನು ಅವನ

ಕೈಯಲ್ಲಿ ಕೊಡುವನು. ಮಲ್ಲೇಶಿಯು ಹೊರಸಿನ ಮೇಲೆ ಹೋಗಿ ಮೈ ಮುರಿದುಕೊಳ್ಳುತ್ತ ಕುಳಿತು ಕೊಳ್ಳುವನು.) ಕಲ್ಲಾ, (ಅಲ್ಲಿಂದ ಜಿಗಿದು ಮುಂದಕ್ಕ ಬಂದು) ಹೌದು ನೋಡಲೇ ರೊಕ್ಕಾ ಹಾಕಿ ದೊಡ್ಡ ದೊಡ್ಡ ಕಾರಖಾನೆ ತಗೀತಾರಲ್ಲ, ಅವರು ತುಡಗರು ನೋಡು. ಅವರು ನಮ್ಮನ್ನ ದನಾ ದುಡಿಸಿಕೊಂಡ್ಹಾಂಗ ದುಡಿಸಿಕೋತಾರ; ನಮಗ ಕೊಡೂದು ಒಂದು ಕಾಸು. ನಾವೇ ದುಡಿಲಿಲ್ಲಂದ್ರ ಅವರಿಗೆಲ್ಲಿಂದ ಬರತದ ಫಾಯದೆ ನಮ್ಮಿಂದ. ಫಾಯದೇ ತಗೊಂಡು ನಮ್ಮ ಗೋಣ ಮುರೀತಾರಲ್ಲ. ರೊಕ್ಕಾ ಹಾಕಿ ಉದ್ಯಮ ತಗೆದು, ಬಡವರ್ನ ದುಡಿಸಿ ಕೊಂಡು, ಅವರ ಮೇಲಿಂದ ಫಾಯದೇ ತಗೊಂಡು ಸಿರಿಮಂತರಾಗ ತಾರಲ್ಲ—ಅವರೆಲ್ಲಾರನೂ ದನಾ ಬಡಿದ್ಹಾಂಗ ಬಡೀಬೇಕ ನೋಡು. ಸರ ಕಾರದವರು ಅವರ ರೊಕ್ಕಾ ಕಸಕೊಂಡು ಎಲ್ಲರಿಗೂ ಹಂಚಿ ಕೊಟ್ಟರ, ಎಲ್ಲರೂ ಆರಾಮ ಇರತೀವಿ. ಅಲ್ಲಿಂದ ಈ ಬಡವರು—ಸಿರಿಮಂತರು ಎಂಬ ಭೇದಾನೇ ಹೋಗಿ ಬೀಡತದ. ನಾ ಜರ ರಾಜಾ ಆದ್ನೆಂದ್ರ ಬಡವರು ಸಿರಮಂತರು ಎಂಬ ಬೇದಾ ಕಿತ್ತಿ ಒಗೀತೀನಿ. ತಾ ಅದನ್ನ ಇಲ್ಲಿ – ಬಾಟ್ಲೆ; ಕುಡಿಲಿಲ್ಲೋ್ಹೈದಿಲ್ಲೋ. ಇಲ್ಲ ತಾ (ಎಂದು ಇಸಕೊಳ್ಳುವನು. ಕುಡಿಯ ಹತ್ತುವನು. ಅದನ್ನು ಭೂಮಿಗೆ ಬಿಸಾಟಿ ಹಾಸಿಗೆಯ ಬುಡ ದಲ್ಲಿ ಬಚ್ಚಿಟ್ಟ ಮತ್ತೊಂದು ಬಾಟಲಿಯನ್ನು ತಗೆದುಕೊಳ್ಳುವನು.) ಬೀರನ ಮನ್ಯಾಗಿಂದು ನಾಲ್ಕು ಬಾಟ್ಲಿ ಇಸಕೊಂಡು ಬಂದೇನಿ ನಿನ್ನೆ ರಾತ್ರಿ. ರೊಕ್ಕ ಕೊಡೂನಂತ ಹಿಂದಾಗಡೆ ಅವಗ ಸಾವಕಾಸ. ಹೊಡಿ; ಕುಡೀ ಹೋಗಲಿ. ಭಿಡೇ ಮಾಡಬ್ಯಾಡ. ಅದರ ಕಾಳಜಿ ಬಿಡು ನಾ ತಂದ ಕೊಡತೀನಿ. (ಕಲ್ಲನ ಸಮೀಪಕ್ಕೆ ಹೋಗುವನು) ಕಲ್ಲ, ಸುಳ್ಳೇ ವಿಚಾರದಿಂದ ಸೊರಗಿ ಸೊರಗಿ ಕಡ್ಡಿ ಯಾಕ ಆಗತೀ. ಸೆರೆ ಕುಡಿದೆಂದ್ರ ಎಲ್ಲಾ ವಿಚಾರ ಮಟಾಮಾಯ ಆಗಿ ಹೋಗತಾವ. ಒಂದ ಜರಾ ಅರೆ ಜೀವಕ್ಕ ಸುಖಾ ಆದೀತು. (ಶರೆ ಕುಡಿಯಹತ್ತುವನು. (ಕಲ್ಲ ಮಲ್ಲೇ ಶಿಯ ಕೈಯೊಳಗಿಂದ ಅದನ್ನು ಕಸಿದುಕೊಳ್ಳಲು ಪ್ರಯತ್ನಿಸುವನು.

ಮಲ್ಲೇಶಿಯು ಅದನ್ನು ಬಿಡುವದಿಲ್ಲ. ರೊಚ್ಚಿಗೆದ್ದು ಮಲ್ಲೇಶಿಯು ಕಲ್ಲನನ್ನು ನೂಕುವನು. ಕಲ್ಲನು ಭೂಮಿಗೆ ಬೀಳುವನು. ಮಲ್ಲೇಶಿಯು ತುಂಬಾ ನಗುತ್ತ). ಹ್ಯಾಗಾಯಿತು ? ಇನ್ನೊಮ್ಮೆ ಕಸಿದುಕೊಳ್ಳಲು ಬರ್ತೀಯಾ. ಇನ್ನೊಮ್ಮೆ ನನ್ನ ಸುಖಕ್ಕ ಅಡ್ಡ ಬಂದರೆ ನಿನ್ನ ತೆಲಿ ಒಡೆದು ಬಿಡ್ತೀನಿ.

**ಕಲ್ಲ** :—( ಮೃದುವಾಗಿ ) ಮಲ್ಲೇಶೀ, ಗುಣವಂತ ನೀ ಹೀಂಗ ಮಾಡೂದಂದ್ರ ನಶಿಬ. ನಮಗ ಬುದ್ಧೀ ಮಾತು ಹೇಳತಿದ್ದಿ ನೀ ಹೀಂಗ ಮಾಡಿದ್ರ ಮುಂದೇನ ಗತಿ.

**ಮಲ್ಲೇಶಿ** :—( ಮತ್ತನಾಗಿ ಎಲ್ಲ ಕಡಿಗೂ ತಿರುಗಾಡುತ್ತ ) ಗತಿ ಯಿಲ್ಲ; ಗೋತ್ರ ಇಲ್ಲ; ಬುದ್ದಿಗೇಡಿ ಬಡವರ್ನ ಶಿವಾ ಕತ್ತೀಹಾಂಗ ದುಡೀ ಲಿಕ್ಕೆ ಹುಟ್ಟಿಸ್ಯಾನಂತ ತಿಳಿಕೊಂಡು ರೊಕ್ಕದ ಮದದಿಂದ ಕೊಬ್ಬಿದ ಸಿರಿ ಮಂತರು ಬಡವರ್ನ ಹಗಲ ರಾತ್ರಿ ದುಡ್ಸಿಕೊಂಡು ಅವರ ದುಡಿಮೆಯ ಒಂದೊಂದು ಹನಿ ರಕ್ತಕ್ಕ ನಾಲ್ಕ ವರಾ ಫಾಯದೆ ಮಾಡಿಕೊಂಡು ದುಡಿದವರಗ ಬೊಗಳೂ ನಾಯೀ ಮುಂದ ಒಂದು ತುಣುಕು ರೊಟ್ಟಿ ಒಗೆದು ಗಪ್ಪ ಮಾಡೂ ಹಾಂಗ ಒಂದು ಟೆಂಕಿ ಕೂಲೀ ಕೊಟ್ಟು ಅವರ ಜೀವಾ ಹಿಂಡಿ ಹಿಪ್ಪೀ ಮಾಡತಾರಲ್ಲ– ಅವರ–ಆ ದುಡಿಯುವರ–ಗತೀ ಏನ ಅದ. ಅದೇ ನಮ್ಮ ಮುಂದಿನ ಗತಿ. ಬಡವನ ಹೆಂಡತಿ ಸ್ವಲ್ಪ ಚಲುವಿಯಿದ್ದರ ಆ ಬಡವ್ನ ಗತಿಯೇನ ಯಾಗತದ ಅದೇ ಗತಿ ನೋಡು. ಕಲ್ಲಾ, ಇಲ್ಲಿ ನೋಡು ( ಎಂಥು ಗದ್ದರಿಸುವನು. ಕಲ್ಲನು ಗಾಬರಿ ಯಾಗಿ ನಿಲ್ಲುವನು. ) ನಿನ್ನೆ ರಾತ್ರಿ ನಾವ ಏನ ಮಾಡ್ದೆವು. ಮುಂದ ಏನ ಮಾಡಬೇಕಂತ ನಾವೆಲ್ಲಾರೂ ಕೂಡಿಕೊಂಡು ವಿಚಾರ ಮಾಡುತ್ತ ಕುಳಿ ತರ ಆ ಮಾಲಕರು ನಮ್ಮನ್ನ ಗುಂಡಿನಿಂದ ಓಡಿಸಿ ಬಿಟ್ಟಾರು. ನಾವು ಕೈಯಾಗ ಬಡಗೀ ಹಿಡಿದಿದ್ವಿವಿ ಅಂತ ಅವರಗ ಬೆದರಕಿ ಹುಟ್ಟಿ ಗುಂಡ ಹಾಕಿದರಂತ. ಎಷ್ಟ ಜನರ ಸತ್ತರು; ಎಷ್ಟ ಜನಾ ಕೈ ಮುರಕೊಂಡಿತು; ಎಷ್ಟ ಜನದ್ದ ತಲಿಬುರಡಿ ಒಡೀತು. ಅದರ ಏನಾರೇ ವಿಚಾರ ಅದನ

ನಿನಗ. ನಿನ್ನಿಯುವರದು ಏನ ಗತೀ ಆತು ಅವೇ ಗತಿ ನೋಡು ನಮ್ಮದು. ತುರಕರು ಕೋಳೀ ಮರೀ ಗೋಣು ಮುರಿದ್ಹಾಂಗ ನಾವೆಲ್ಲಾರೂ ಕೂಡಿ ಅವರವು ಗೋಣು ಮುರಿಬೇಕ ನೋಡು. ಅಂದ್ರ ಏನಾರೆ ಅವರ ಸೊಕ್ಕು ಮುರುತವ. ಎಷ್ಟ ದಿವ್ಸ ಹೀಂಗ ಕಷ್ಟ ಸಹಿಸೂನು. ಹೀಂಗ ಜೀವಾ ಹಿಡಿಯೂದಕಿಂತ ಸಾಯೂದ ಪಾಡ ನೋಡು ಶಿವಗಾರೇ ಏನ; ಅವಗ ಜರಾ ಬುದ್ಧಿ ಅದೇನು ? ನಮ್ಮೆಲ್ಲಾರ್ನ ಅವಾ ಹುಟ್ಟಿಸ್ಯದವ. ಹೀಗ್ಯಾಕವಾ; ನಾವ ಬಡವರಂತ, ಅವರು ಸಿರಿಮಂತರಂತ. ನಮ್ಮಪ್ಪ ಬಡವ ಅಂತ ನಾವ ಬಡವರೇನು ? ಅವರಪ್ಪ ಸಿರಿಮಂತ ಅಂತ ಸಿರಿಮಂತರೇನು ಅವರು. ಅವರೇನು ಮೊಮ್ಮಕ್ಕಳು ಹುಟ್ಟಿ ಮುಂದ ಗಂಟು ಕಟಿಕೊಂಡು ಹುಟ್ಟತಾರ. ನಾವು ಹ್ಯಾಂಗ ಹುಟ್ಟೇವಿ ಹಾಂಗೇ ಅವರು ಹುಟ್ಟ್ಯಾರ ; ಅವರ ಕಡೆಗಿದ್ದ ರೊಕ್ಕ ಅವರೇನು ಭೂಮ್ಯಾಗಿಂದು ಅಗಿದು ತಗದಾರ; ನಮ್ಮ ಅಪ್ಪ, ನಿಮ್ಮ ಅಪ್ಪ, ನಮ್ಮ ನಿಮ್ಮ ಅಜ್ಜ, ಮುತ್ತ್ಯಾ, ವಣಜ್ಯಾ, ಇವರ ಎಲ್ಲರ ಗೋಣು ಮುರಿದು ಅವರೆಲ್ಲರ ರಕ್ತ ಹೀರಿ ಗಂಟು ಮಾಡಿಕೊಂಡಾರ ಈ ಬಡ್ಡೀ ಮಕ್ಕಳು.

**ಕಲ್ಲ** :—ಮಲ್ಲೇಶಿ, ಭಾಳ ಮಾತಾಡಬ್ಯಾಡ; ಭಾಳ ತ್ರಾಸ ಆಗತವ. ಒಂದ ಜರಾ ಗಪ್ಪ ಕೂಡು.

**ಮಲ್ಲೇಶಿ** :—(ಮದವು ಇಳಿಯುಹತ್ತುವದು.) ಕಲ್ಲಾ, ಹ್ಯಾಂಗ ಗಪ್ಪ ಕೂಡಲಿ; (ಹಲ್ಲು ಕಡಿಯುತ್ತ) ಯಪ್ಪಾ ಹಾಂಗ ಗಪ್ಪ ಕೂಡಲೀ, ನನ್ನ ಹೊಟ್ಟಿ ಊರೀಲಿಕ್ಕ ಹತ್ತೇದ. ನಮ್ಮ ಹಳ್ಳೀ ಬಿಟ್ಟಿ ಬರೂ ಮುಂದ ನನಗ ನಮ್ಮೂರವರು ಹೋಗಬ್ಯಾಡಂತ ಕಡ್ಡೀ ಕೊಟ್ಟು ಹೇಳಿದ್ರು ಅವರಗ ಬೈದು ನಾ ಬಂದೆ. ಕಲ್ಲಾ, (ಉಸುರು ಹಾಕುತ್ತ) ರೊಕ್ಕ ಇಲ್ಲ ಕೈಯಾಗ, ಜೀವಕ್ಕ ಏನಾರೆ ಸುಖ ಅದನs. ದುಡಿದು ಸುಕದಿಂದ ನಾಲ್ಕು ತುಣುಕು ರೊಟ್ಟೀ ತಿಂದು ಅರಾಮ ಇರೂನಂತಂದ್ರ ಅದು

[illegible]

**ಕಲ್ಲ** :—ನಿಂದು ಒಬ್ಬಂದ ಸ್ಥಿತಿ ಹೀಗಂತ ತಿಳಿದಿದ್ಯಾ. ನಮ್ಮ ಎಲ್ಲಾರ ಸ್ಥಿತಿ ಹೀಂಗs ಅದ್ನೋಡು.

**ಮಲ್ಲೇಶಿ** :—( ಮದವು ಮತ್ತಿಷ್ಟು ಇಳಿಯುವದು ) ನಾ ಇಲ್ಲಂತ ಎಲ್ಲಿ ಅಂತೀನಿ. ನಾವೆಲ್ಲಾರೂ ಇರೂದಕಿಂತ ಸತ್ತುಹೋಗೂದು ಪಾಡ ನೋಡು. ಮನಸ್ಯಾ ಜಗತ್ತ್ಯಾಗ ಯಾಕ ಇರೂದಂದಿ—ಆಶಾದ ಸಲು ವಾಗಿ. ಆ ಆಶಾನೇ ಹೋದ ವ್ಯಾಲಿ ಇರೂದರೇ ಹ್ಯಾಂಗ ? ನೀನೇ ಹೇಳ, ಕಲ್ಲ.

**ಕಲ್ಲ** :—ಆಶಾ ಯಾಕ ಹೋಗತದ ! ಜೀವ ಇರೂತನಕ ಆಶಾ ಇರತದ.

**ಮಲ್ಲೇಶಿ** :—ಹಾಂಗ ಅಲ್ಲ, ಕಲ್ಲ; ಆಶಾ ಇರೂತನಕ ಜೀವ ಇರತದ. ನಿನಗ ಐತಿ ಆಶಾ.

**ಕಲ್ಲ** :—ನಿನಗ ಇಲ್ಲೇನು ?

**ಮಲ್ಲೇಶಿ** :—ನನಗ ನಿನ್ನ ರಾತ್ರಿನೇ ಹೋತು. ಆಶಾ ಹೋಗೇದಂತ ಕುಡಿಯೋದು ಬಿಟ್ಟದ್ದು ಮತ್ತೆ ಸುರು ಮಾಡೀನಿ. ನನ್ನ ಜೀವದ ಚಿನ್ನಿ, ಯಾವಾಗ ಅದೃಶ್ಯ ಆದಲು ಆವಾಗ ಹೋಗೇದ ನನ್ನ ಆಶಾ. ಚಿನ್ನಿ ಅಂದ್ರ ಏನ ತಿಳದೀದಿ. ಭಾಳ ಉತ್ತಮ. ಗುಣಾ ಭಾಳ ಹೇಳಕೋಂಭಾಂಗ ಅದಾವ. ರೂಪ ರತಿದೇವಿ ರೂಪ. ಆಕಿನ್ನ ನಾ ಮಾಡಿಕೊಂಡದ್ದು ನನ್ನ ಪೂರ್ವ ಜನುಮದ ಪುಣ್ಯಾ. ಅಂಥಾ ಹೆಂಗಸು ಎಂದಾರೇ ಸಿಗೂದ ನನ್ನಂಥವಗ. ನೋಡು ಕಲ್ಲಾ, ನಿರಾಶೆ ಆಗಿ ಶರೇ ಕೂಡೀಲಿಕ್ಕೆ ಹತ್ತಿದೆ.

**ಕಲ್ಲ** :—ಮಲ್ಲೇಶಿ, ಇನ್ನ ಮ್ಯಾಲಿ ಮಾತ್ರ ಶರೇ ಕೂಡೀಬ್ಯಾಡ. ಅದು ಭಾಳ ಕೆಟ್ಟ ಅದsನೋ !

**ಮಲ್ಲೇಶಿ** :—ಅದು ಏನೇ ಇರಲಿ; ನನಗ ಮಾತ್ರ ಭಾಳ ಸುಖಾ ಆಗತದ ಕುಡದ್ರ. ಜಗತ್ತೇ ಮರೆತು ಬಿಡ್ತೀನಿ. ಈ ಜಗತ್ತು ಬಿಟ್ಟು

ಏನೋ ವ್ಯಾಲಿ ಓಡ್ಯಾಡದ್ಹಾಂಗ ಆಗತದ. ಕಲ್ಲಾ, ನೀರಡಕಿ ಭಾಳ ಆಗ ಲಿಕ್ಕೆ ಹತ್ತೇದೋ—ಒಂದ ಜರಾ ನೀರಾರೆ ತಗೋ, ಅಂದ್ರಾರೆ ಹೋದೀತು.

( ಕಲ್ಲ ನೀರು ತರಲು ಒಳಗೆ ಹೋಗುವನು. )

**ಮಲ್ಲೇಶಿ** :—ಅತ್ತ ಮೂಲ್ಯಾಗ ಇರಬೇಕ ನೋಡು.

**ಕಲ್ಲ** :—ಹಾ, ತಂದೆ ( ಕಲ್ಲನು ನೀರು ತರುವನು. )

**ಮಲ್ಲೇಶಿ** :—( ನೀರು ಕುಡಿಯುತ್ತ ) ತಂಗಳ ನೀರ ಕಾಣ್ಸತಾವ. ಮನೀ ಲಗಮೀನೆ ಘೋಗಿಂದ ತರುವವರು ಯಾರು ? ನೋಡ ಕಲ್ಲಾ, ನಾ ನಿನಗ ಕಡ್ಡೀ ಕೊಟ್ಟು ಹೇಳಿ ನಿನ್ನೆ ರಾತ್ರಿ ಹೋಗೂಣ ಬ್ಯಾಡಂತ. ಅಲ್ಲೀ ಕೆಲ್ಸಾರೇ ಆತs ಅದೂನೂ ಇಲ್ಲ. ಇಲ್ಲೇ ನನ್ನ ಹಾಳ ನಸಿಬ. ಪನೀಹತ್ತೇದ ಬಿಡು.

**ಕಲ್ಲ** :—ನಿನ್ನೆ ನಂಪ ಆಗುತ್ತಿತ್ತು ಎಲ್ಲಾಪೂ ಬಂದಿದ್ರು. ಕೆಲ ವರು ತಪ್ಸಿದ್ರು. ಅದರಿಂದ ಹೀಂಗ ಆತು.

**ಮಲ್ಲೇಶಿ** :— ಬರೇ ಕೂಗ್ಯಾಟ ಚೀರ್ಯಾಟ ಇದೇ ಆತು ನಿನ್ನೆ ರಾತ್ರಿ. ನಾವ್ಕೊಂದು ಕೆಲವರು ಮಾತ್ರ ಕೆಟ್ಟ ಆದೆವು. ಉಳಿದವರು ಮಾತ್ರ ಹಾಂಗೇ ಉಳಕೊಂಡರು.

**ಕಲ್ಲ** :—ಜಗತ್ತಿನಾಗ ಕಷ್ಟಬಡುವವರು ಬ್ಯಾರೇ, ಅದರ ಸುಖಾ ಉಣ್ಣುವರು ಬ್ಯಾರೇ, ಇದೇ ನ್ಯಾಯ ಜಗತ್ತಿಂದು.

**ಮಲ್ಲೇಶಿ** :—ಕಲ್ಲಾ, ನನ್ನ ತಲ್ಯಾಗ ಮಾತ್ರ ನೂರಾರು ವಿಚಾರ ಬರಲಿಕ್ಕೆ ಹತ್ಯಾವ. ಒಂದ ಕಡಿಗೆ ನನ್ನ ಹೊಟ್ಟೀ ಚಿಂತಿ, ಮತ್ತೊಂದು ಕಡಿಗೆ ಚಿನ್ನೀ ಚಿಂತಿ. ನಾ ಒಲ್ಲೆಪಾ ಈ ಸಂಸಾರ. ( ಬುಟ್ಟಿಯಲ್ಲಿ ಮುಚ್ಚಿಟ್ಟ ಮತ್ತೊಂದು ಬಾಟಲಿಯನ್ನು ತಗೆದುಕೊಂಡು ಒಡಿಯು ಹತ್ತುವನು. )

**ಕಲ್ಲ** :— ಮಲ್ಲೇಶಿ, ನಿನಗ ನಮಸ್ಕಾರ ಮಾಡತೀನಿ ಶರೆ ಮಾತ್ರ ಕೊಡಿಬ್ಯಾಡ. ವ್ಯರ್ಥ ಹಾಳಾಗೀ ಹೋಗತೀ.

**ಮಲ್ಲೇಶಿ** :—ಗಿರಣ್ಯಾಗಂತೂ ಹ್ವಾರೇ ಸಿಗೂದಿಲ್ಲ. ಇವತ್ತ ಮುಂಜಾನೆ ನಸಿಕ್ನೇ ಹೋಗಿದ್ದೆ, ನನಗಂತೂ ಅಪಣೀ ಕೊಟ್ಟರು. ನಿನ್ನೆ ರಾತ್ರಿ ಮಂದಿನ್ನ ಹುರಿದುಂಬಿಸಿ ನಮ್ಮ ವಿರುದ್ಧ ಸಂಪ ಮಾಡ್ಸಬೇಕಂತ ಮಾಡಿದ್ದೀ, ಅದಕ ನಿನ್ನ ಕೆಲ್ಸಕ್ಕ ತಗೋಳೂದಿಲ್ಲ ಅಂತ ಹೇಳಿ ನನ್ನ ಹೊರಗ ಹಾಕಿದ್ರು. ಹೊಟ್ಟಿಗಂತೂ ಇಲ್ಲ. ಹೆಂಡತೀನೂ ಹೋದ್ಲು. ಭಾಳ ವೇದಾಂತ ಹೇಳತೀ; ನಾ ಎದರಿಂದ ಆನಂದ ತಗೊಳ್ಳಲಿ ? ಸ್ವಲ್ಪ ಇದು ಮರತಾರೇ ಮರೀಲಿ ಅಂತ ಶರೆ ಕುಡೀತೀನಿ.

**ಕಲ್ಲ**:— ಚಿನ್ನಮ್ಮನ್ನ ನಾ ಹುಡಕಿಕೊಂಡ ಬರತೀನಿ ಕಾಳಜಿ ಬಿಡು.

**ಮಲ್ಲೇಶಿ** :— ಕಲ್ಲಾ, ನಾ ನಿನ್ನೆ ರಾತ್ರಿ ಬರೂ ಮುಂದ ಕಾಳಜಿ ಯಿಂದ ಮಲಕೋ ಅಂತ ನಾ ಹೇಳಿದ್ದೆ ಚಿನ್ನಿಗೆ ; ಆಕಿ ಕಾಳಜಿ ಬಿಟ್ಟು ಚಿಂತೀ ಹಿಡಕೊಂಡು ಹೋಗ್ರಿ ಅಂತ ಅಂದ್ಲು. ಕಲ್ಲಾ, ಆಕೆ ಅಂದದ್ದು ಇನ್ನೂ ಕಿವ್ಯಾಗ ಗುಣಗುಡತದ.

**ಕಲ್ಲ** :— ಈಗ ಬಂದರೂ ಬರಬಹುದು ; ನಿನ್ನೆ ರಾತ್ರಿ ಹಾದೀ ಸಿಕ್ಕಿರಲಿಕ್ಕಿಲ್ಲ. ಬೆಳಗಾದಿಂದ ಹಾದೀ ಹುಡಕಿಕೊಂಡು ಬರಬಹುದು.

**ಮಲ್ಲೇಶಿ** : – ಇಲ್ಲ ಕಲ್ಲಾ, ನಿನ್ನೆ ರಾತ್ರಿ ನಾವು ಹೊರಗ ಹೋದಾಗ ನೀಲಮ್ಮ ಇವಳ್ನ ಎಳಕೊಂಡು ಹೋಗಿರಬೇಕು ಅಂತ ನನಗ ಅನಿಸತದ.

**ಕಲ್ಲ** :—( ಸಿಟ್ಟಗೆದ್ದು ) ಆ ಹುಚ್ಚರಂಡಿ ನೀಲಿ ; ಅವಳದು ಹ್ಯಾಂಗ ಗುರತು ಆತು ಚಿನ್ನಮ್ಮಗ ?

**ಮಲ್ಲೇಶಿ**:— ( ಗಾಬರಿಯಾಗಿ ) ಯಾಕ ಕಲ್ಲಾ ! ಸಿಟ್ಟಗೆದ್ದಿ !

**ಕಲ್ಲ:**—ಆ ಹುಚ್ಚ್ಯರಂಡಿನ್ನ ಚೂರಚೂರ ಕಡೀಬೇಕು, ಅಂದ್ರ ನನ್ನ ಸಿಟ್ಟು ಹೋಗತದ. ಆ ಕತ್ತೀಮುಗಳು ನಮ್ಮಂತಹ ಬಡವರ ಪರಪಂಚ ಎಷ್ಟೋ ಹಾಳ ಮಾಡ್ಯಾಳ. ಬಡವರ ಹೆಂಡತಿ ನೆಟ್ಟಗಿದ್ರ ಸಾಕು. ಆಕಿ ಅವರ್ನ ಒಯ್ದು ಆ ದೊಡ್ಡ ಗಿರಣೀ ಮಾಲಕಗ ಕೊಟ್ಲ. ಅದಕ ನನ್ನ ಹೆಣತೀನ್ನ ಅಲ್ಲಿಂದ ಹ್ಯಾರ್ಯಾ ಮಾಡೂದು ಬಿಡ್ಸಿದೆ. ಆ ನೀಲಿನ್ನ ಒಮ್ಮೆ ತಲೀಬೋಳ್ಸಿ ಕರೀ ಅರಿವಿ ಕಟ್ಟತೀನಿ ಬಿಡು. ನಾ ಸಾಯುದ್ರಾಗ ಅಷ್ಟ ಮಾಡೇ ಸಾಯತೀನಿ. ಆಕಿ ಮಾಡಿದ್ದು ಒಂದ, ಎರಡ, ಮೂರ, ಎಷ್ಟಂತ ಹೇಳಿದ್ರೂ ಕಡಿಮೀನೇ. ಅಂತವರಿಗೆ ಮಾತ್ರ ಸಿರಿಮಂತರು ತಮ್ಮ ರೊಕ್ಕ ಕೊಡತಾರ ; ನಾವು ಜೆಂಜೀತನಕ ಬೆವರು ಬರೂಹಾಂಗ ದುಡಿದ್ರ ನಾಲ್ಕು ಆಣೆ ಕೊಡೂದಿಲ್ಲ.

**ಮಲ್ಲೇಶಿ** :— ಮುಂಪೇನ ಗತಿ ?

**ಕಲ್ಲ** :– ಗಾಬರಿಯಾಗಬ್ಯಾಡ ಮಲ್ಲೇಶಿ ; ನಾ ಎಲ್ಲಾ ಕೆಲ್ಸಾ ಮಾಡತೀನಿ ಅಂತ. ಚಿನ್ನನ್ಮನ್ನ ನಾ ಹುಡಕಿಕೊಂಡು ಬರತೀನಿ. ನೀ ಬಿಟ್ಟು ಬಿಡು ಅದರ ಕಾಳಜೀ. ನೀ ಮಾತ್ರ ಶರೇ ಕುಡೂದಿಲ್ಲ ಅಂತ ಹೇಳು ಅಂದ್ರ ನಾನು ಹುಡಕಿಕೊಂಡು ಬರತೀನಿ.

**ಮಲ್ಲೇಶಿ** : - ( ಶರೆಯ ಬಾಟಲಿಯನ್ನು ಕೆಳಗೆ ಇಟ್ಟು ) ಕಲ್ಲಾ, ನೀ ಹೇಳತೀ ಅಂತ ನಾ ಕುಡೂದುಲ್ಲ ನೋಡು ಇನ್ನಮ್ಯಾಲ ಶರೆ. ಆಯಿತಿಲ್ಲೊ. ನೀ ಮಾತ್ರ ಆಕಿನ್ನ ಹುಡಕಿಕೊಂಡು ಬರಬೇಕ ನೋಡು.

( ಹೊರಗೆ ಕೂಗ್ಯಾಟದ ಸಪ್ಪಳವಾಗುವದು. ಇಬ್ಬರೂ ಅತ್ತ ಕಡೆಗೆ ಲಕ್ಷಗೊಡುವರು. )

**ಮಲ್ಲೇಶಿ** :— ಮತ್ತೇನ ಬಂತಪಾ.

**ಕಲ್ಲ** :—ಮಾತಾಡಬ್ಯಾಡ ನಿಂದ್ರೋ. ಯಾರೋ ನಿನ್ನ ಮನೀ ಕೇಳುವ್ಹಾಂಗ ಕಾಣಸತದ.

**ಮಲ್ಲೇಶಿ** : – ( ಗಾಬರಿಯಾಗಿ ) ಕಲ್ಲಾ, ಬಂತಪಾ ನನ್ನ ಸುತ್ತ

**ಕಲ್ಲ** :—ಏನ! ಬಂತೋ ನಿನ್ನ ಸುತ್ತ.

**ಮಲ್ಲೇಶಿ** :—ಆ ಸಾಲಾ ಕೊಟ್ಟ ಪಠಾಣ ಬರೂಹಾಂಗ ಕಾಣ್ಸತದ. ಇವತ್ತ ಬರತೀನಂತ ಹೇಳಿದ್ದ.

**ಕಲ್ಲ** :—ಬಂದರ ಬರಲಿ ಬಿಡು. ಒಂದ ಕೈ ನೋಡತೀನಿ ಅವನ್ನ. ಇನ್ನೊಮ್ಮೆ ಇಚೀಕಡಿಗೆ ಹಾದಿರಬಾರದು ಹಾಂಗ ಮಾಡತೀನಿ.

**ಮಲ್ಲೇಶಿ** :—ಹಾಂಗ ಮಾಡಬ್ಯಾಡ ಗಪ್ಪಕೂಡು. ಮೊದಲು ಕದಾ ಹಾಕು. ಆ ಮೇಲೆ ಹೇಳತೀನಿ.

**ಕಲ್ಲ** :—ಯಾಕ ಇಕ್ಕಲಿ, ಮೊದಲು ಹೇಳು ಅಂದ್ರ ನಾ ಇಕ್ಕ ತೀನಿ.

**ಮಲ್ಲೇಶಿ** :—ನಾ ಹೇಳತೀನಂತ ಮೊದಲು ಇಕ್ಕು.

**ಕಲ್ಲ** :—ಅವಾ ಹೌದೋ ಅಲ್ಲೋ ಅದಾರೆ ಹ್ಯಾಂಗ ಗೊತ್ತು. ಮತ್ತ ಯಾರಾರೆ ಆಗಿದ್ರ.

**ಮಲ್ಲೇಶಿ** :—ಯಾರೂ ಇಲ್ಲ ಬಿಡು ಅವನ ಹೊರ್ತು. ಆ ಸೂಳೀ ಮಗನ& ಬಂದಿದ್ದಾನಾದೀತು. ಬಡ್ಡೀ ಕೇಳಲಿಕ್ಕೆ.

**ಕಲ್ಲ** :—ಇಷ್ಟ್ಯಾಕ ಹೆದರತೀ ಅವಗ.

**ಮಲ್ಲೇಶಿ** :—ಅವಗ ಇಲ್ಲ ಅಂತ ಹೇಳಲಿಕ್ಕೆ ನನ್ನ ಮೈಮ್ಯಾಲೆ ಮುಳ್ಳಬರತಾವ. ಅವಾ ನನ್ನ ಮಾನಾ ತಗೋತಾನ.

**ಕಲ್ಲ** :—ನೀ ಮಾನಕ್ಕ ಹೆದರತೀಯಂತ ಅವಾ ಹೀಂಗ ಮಾಡ ತಾನ. ಒಂದ ಸೊನ್ನಿ ಕೊಡು ಅಂದ್ರ ತಿಳೀತದ ಅವಗ.

**ಮಲ್ಲೇಶಿ** :—(ಬಾಟಲಿಯನ್ನು ಮತ್ತೆ ಕೈಯಲ್ಲಿ ಹಿಡಿದುಕೊಂಡು) ಇಕ್ಕ ಮೊದಲು ಕದಾ. ಕಲ್ಲ, ಅವನ ಹೊರ್ತು ಬೇರೆ ಯಾರೂ ಇಲ್ಲ. ಆ ಬಡ್ಡೀ ಮಗವ ಬಂದಾನ, ಮನೀ ಕೇಳಕೋತಾ.

**ಕಲ್ಲ** :—ನಾ ಒಂದಿಷ್ಟ ನೋಡ್ಯಾರಾ ನೋಡತೀನಿ.

**ಮಲ್ಲೇಶಿ**:—ಹಾಂಗ ಮಾಡಬ್ಯಾಡ ; ನೀ ನೋಡುದ್ರಾಗ ಬಂದ ಬಿಟ್ಟಾನು ಅವಾ. ಅವಾ ಶನೀ ಇದ್ಹಾಂಗ ಇದ್ದಾನ.

**ಕಲ್ಲ**:—ಕೈಯಾಗಿಂದು ಬಿಡು ಹಾಂಗಾರ ಬಾಟಲಿ ಮತ್ಯಾಕ ?

**ಮಲ್ಲೇಶಿ**:—( ಮೆಲ್ಲಗೆ ಭೂಮಿಯಮೇಲೆ ಇಟ್ಟು ) ಇಟ್ಟೆ. ನಾನೇ ಕದಾ ಹಾಕತೀನಿ ಬಿಡು. ( ಹಾಕ ಹೋಗುವನು. )

**ಕಲ್ಲ**:—( ಅವನನ್ನು ಹಿಂದಕ್ಕೆ ಸರಿಸಿ) ಒಂದ ಜರಾ ತಡೀ ನಾ ಬಗ್ಗಿ ನೋಡತೀನಿ. ಹೆಜ್ಜಿ ಸಮೀಪಕ್ಕ ಕೇಳಿಸಲಿಕ್ಕೆ ಹತ್ತಿದವು. ಯಾರ ಇದ್ದಾರಂತ ನೋಡತೀನಿ ನಿಂದ್ರು. ( ಬಾಗಿಲ ಹೊರಗೆ ಹಣಿಕಿ ಹಾಕುವನು. ಮಲ್ಲೇಶಿಯು ಅವನನ್ನು ಹಿಂದಕ್ಕೆ ಜಗ್ಗಹತ್ತುವನು. ) ಒಂದ ಜರಾ ತಡಿ; ಏನಾರೇ ನೋಡತೀನಿ ಹೀಂಗ್ಯಾಕ ಮಾಡತೀ ಹುಚ್ಚ ನಾಂಗ. ಮಲ್ಲೇಶಿಯು ಬಿಡುವನು ಜಗ್ಗುವದನ್ನು. ಹಿಂದಕ್ಕೆ ಸರಿದು ನಿಲ್ಲುವನು. ( ಕಲ್ಲ ಒಂದೆರಡು ನಿಮಿಷ ನೋಡಿ ಓಡಿ ಹೋಗುವನು. )

**ಮಲ್ಲೇಶಿ** :— ಏ ಽಽ ಕಲ್ಲ ಽಽ ಇದೇನಿದು ಓಡಿಹೋಗ್ತಿ !

**ಕಲ್ಲ** :— ( ಹೊರಗಿನಿಂದ ) ಬಂದೆ ನಿಂದ್ರು. ಏ ಭರಮಾ, ಓಡ ಅವಾ ಓಡಿ ಹೋಗತಾನ ನೋಡು; ಅವ್ನ ಹಿಡಿ. ಭೀಮಾ, ನಿಂಗಾ, ಓಡರಿ ಜೋರ್ಲೆ. ಅವ್ನ ಹಿಡ್ರಿ ಬಿಡಬ್ಯಾಡ್ರಿ. ಬೀರಾ, ಅವಾ ಆ ಸಂದ್ಯಾಗ ಓಡತಾನ ನೋಡು, ಓಡ ಜೋರ್ಲೆ. ಹಿಡಿ ಅವ್ನ ಹೋಗಿ. ಹೆಡ ಮುರಗಿ ಕಟ್ಟಿಕೊಂಡು ಬಾ, ಆ ಬಡ್ಡೀಮಗ್ನ. ಬಡೀರಿ, ನಾ ಬಂದೆ, ಈಕಿನ್ನ ಮನ್ಯಾಗ ಮಲಗ್ಸಿ. ಬಿಡಬ್ಯಾಡರಿ ಅವ್ನ. ಏ ಽ ಽ ನಿಂಗಾ ಹೀಂಗ ಮಾಡಿದ್ರ ಏನಲೇ? ಮೈಯಾಗ ಜೋರ ಅದನೋ ಇಲ್ಲೋ ? ಓಡ ಜಗ್ಗಿ ಒಂದ ಜರಾ. ನಾನೂ ಬಂದೆ. ( ಚಿನ್ನಮ್ಮನನ್ನು ಎರಡೂ ಕೈಗಳಲ್ಲಿ ಹಿಡಿದು ಕೊಂಡು ಬರುವನು. ) ಒಂದಿಷ್ಟು ಹಾಸ ಲಗೂನೇ ( ಮಲ್ಲೇಶಿಯು ಗಾಬರಿಯಾಗಿ ನೋಡುತ್ತ ನಿಲ್ಲುವನು. ) ಪೆದ್ದನ್ಹಾಂಗ ನಿಂದ್ರಬ್ಯಾಡ.

ಒಂದಿಷ್ಟು ನೋಡತೀಯೋ ಇಲ್ಲೋ ಚಿನ್ನಮ್ಮನ ಸ್ಥಿತಿ; ಸ್ಮೃತಿ ತಪ್ಪಿ ಹೋಗೇದ. ಒಂದಿಷ್ಟು ಹಾಸ ಲಗೂನೇ.

**ಮಲ್ಲೇಶಿ:**—(ಅವಳ ಮೈ ಕೈಗಳನ್ನು ಹಿಡಿಯುತ್ತ) ಅಯ್ಯಯ್ಯೋ ಕಲ್ಲಾ, ಮೈ ತಣ್ಣಗಾಗೇದ. ಸತ್ತಾಳ ಬಿಡ (ಎಂದು ನೆಲಕ್ಕೆ ತಲೆಯು ಮೇಲೆ ತನ್ನ ಎರಡೂ ಕೈಗಳನ್ನು ಇಟ್ಟುಕೊಂಡು ಕುಳಿತುಕೊಳ್ಳುವನು.)

**ಕಲ್ಲ** :—(ಸಿಟ್ಟಿನಿಂದ) ಏನ ಮೂರ್ಖ ಇದ್ದೀ. ಏಳು; ಒಳಗ ಹಾಸು. ಇವಳಿಗೆ ಏನೂ ಆಗಿಲ್ಲ. ಧೈರ್ಯ ತಗೋ. ಹೀಂಗ ಹೆಂಗಸ ರ್ಹಾಂಗ ಮಾಡಿದ್ರ ಏನ ಮುಂದ ಗತಿ. (ಮಲ್ಲೇಶಿಯು ಏಳುವದಿಲ್ಲ. ಹಾಗೇ ಕುಳಿತುಕೊಳ್ಳುವನು. ಕಲ್ಲನು ಚಿನ್ನಮ್ಮನನ್ನು ಹಾಗೇ ಎತ್ತಿ ಕೊಂಡು ನಡುಮನಿಗೆ ಹೋಗುವನು.)

**ಮಲ್ಲೇಶಿ** :—ಕಲ್ಲಾ ಒಂದಿಷ್ಟು ಇಲ್ಲ ತಗೊಂಡು ಬಾ; ಅವಳ ಮಾರೀ ನೋಡತೀನಿ. (ಕಲ್ಲ ಬರುವದೇ ಇಲ್ಲ.) ಒಂದಿಷ್ಟು ತೋರಿಸೋ ಅವಳ ಮಾರಿಯಾರs.

**ಕಲ್ಲ** :—(ಒಳಗಿನಿಂದ) ಬಂದೆ ನಿಂದ್ರು. (ಅವಳನ್ನು ಒಳಗೆ ಮಲಗಿಸಿ ಬರುವನು.)

**ಮಲ್ಲೇಶಿ** :—(ಅವನ ಹತ್ತರ ಹೋಗಿ) ಏನಾಗಿರುವದು ಕಲ್ಲಾ, ನನ್ನ ಚಿನ್ನಿಗೆ ಉಸಲು ಐತಿಲ್ಲೋ?

**ಕಲ್ಲ** :—ಅವಳಿಗೇನು ಆಗೇದ—ಬವಳಿ ಬಂದಿರಬೇಕು. (ಚಿಂತಾ ಮಗ್ನನಾಗಿ ಅತ್ತಿಂದ ಇತ್ತ ಇತ್ತಿಂದ ಅತ್ತ ತಿರುಗಾಡುವನು. ಅವನ ಹಿಂದೆ ಮಲ್ಲೇಶಿಯೂ ತಿರುಗಾಡುವನು. ಕಲ್ಲ ಮತ್ತೆ ಒಳಗೆ ಹೋಗು ವನು. ನಡುಮನಿಯ ಬಾಗಿಲಕ್ಕೆ ಮಲ್ಲೇಶಿಯು ನಿಂತು ಒಳಗೆ ಮೊಗ ವನ್ನು ಹಾಕುವನು.)

**ಮಲ್ಲೇಶಿ** :—ಕಲ್ಲಾ, ತಲಿಗೆ ನೀರ ಬಡಿ; ಗಾಳೀ ಹಾಕು.

**ಕಲ್ಲ** :— ಬಾ ಒಳಗ ಮಲ್ಲೇಶಿ.

**ಮಲ್ಲೇಶಿ** :— ಒಲ್ಲೆ. ಆಕಿ ಮೋರಿ ನೋಡಿದ್ರ ನನಗ ದುಃಖ ಉಕ್ಕಿ ಭರತೈತಿ. ನಾ ಒಲ್ಲೆಪಾ ಒಳಗ ಬರಾಕ.

**ಕಲ್ಲ** :— ಅಂದ್ರ ಅಲ್ಲಿಂದ ಸರಿ, ಒಂದ ಜರಾ ಬೆಳಕು ಬಿಡು. ಕತ್ತಲಾಗ ಕಾಣ್ಸೋದುಲ್ಲ.

**ಮಲ್ಲೇಶಿ** :— ( ಸರಿದು ) ಕಲ್ಲಾ, ಅಲ್ಲಿ ವಲ್ಯಾಗ ಬೂದಿ ಅದ ನೋಡು. ಅದ್ನ ಕಾಲಿಗೆ ತಿಕ್ಕು. ಬಾಯಾಗ ನೀರ ಹಾಕು.

**ಕಲ್ಲ** :— ( ಒಳಗಿನಿಂದ ) ತಿಕ್ಕತೀನಿ.

**ಮಲ್ಲೇಶಿ** :— ( ತಿರುಗಾಡಹತ್ತುವನು. ಏನೋ ಗುಣುಗುಡ ಹತ್ತುವನು. )

" ಯಾರೇನು ಮಾಡುವರು ಯಾರಿಂದಲೇನಹುದು,
ಪೂರ್ವ ಜನ್ಮದ ಕರ್ಮ ವಿಧಿ ಬೆನ್ನಬಿಡದೂ "

( ಎಂದು ಅತ್ತಿಂದ ಇತ್ತ ಇತ್ತಿಂದ ಅತ್ತ ಮೇಲಣ ಪಲ್ಲವಿಯನ್ನು ಗುಣಗುಡುತ್ತ ತಿರುಗಾಡುವನು. ದನಿ ಹೆಚ್ಚಿಸಿ ರಾಗ ತೆಗೆದು ಹಾಡ ಹತ್ತುವನು. ರಾಗ ಹೆಚ್ಚಿದಂತೆ ಹೆಜ್ಜೆಯನ್ನು ವೇಗದಿಂದ ಹಾಕ ಹತ್ತುವನು. ರಾಗಕ್ಕೆ ಸರಿಯಾಗಿ ಹಸ್ತದಿಂದ ತಾಳವನ್ನು ಹಿಡಿಯುವನು. )

**ಕಲ್ಲ**:— ( ಒಳಗಿನಿಂದ ) ಮಲ್ಲೇಶಿ, ಸುಮ್ಮನಾಗೋ ಸ್ವಲ್ಪ.

**ಮಲ್ಲೇಶಿ** :— ( ಹಾಡುವದನ್ನು ಬಿಟ್ಟು ) ಏನಂದಿ ಕಲ್ಲಾ ?

**ಕಲ್ಲ** :—(ಒಳಗಿನಿಂದ) ಏನೂ ಇಲ್ಲ ; ರಾಗss ಬಂದ ಮಾಡೂ ಅಂತ ಅಂದೆ. ಸ್ವಲ್ಪ ದೇವರ ಕೂತ್ಹಾಂಗ ಕೂಡ್ರು ಅಂತ ಅಂದೆ.

**ಮಲ್ಲೇಶಿ** :— ನಮ್ಮ ಪಾಲಿಗೆ ದೇವರೇ ಇಲ್ಲ ; ಜಗತ್ತಿನಾಗ ದೇವರು ಇದ್ದಾನೇನು ? ಅವಾ ಇದ್ದರ ಹಿಂಗ್ಯಾಕ ಆಗತಿತ್ತು. ಮುಂಜಾಳ ಹೋಗ ಎಲ್ಲಿ ಹೋಗ್ಯಾನೋ ಏನೋ.

**ಕಲ್ಲ** :—( ಒಳಗಿನಿಂದ ) ಒಂದ ಪಾವಡಾ ಒಗಿ ಒಳಗ.

**ಮಲ್ಲೇಶಿ** :—ಪಾವಡಾ ಒಗಿಲ್ಯಾ, ಕಲ್ಲಾ. ಹೂಂ. ಒಗೀತೀನಿ ಜರಾ ತಡಿ. ( ಹೊರಗಿನ ಪಾವಡವನ್ನು ತಗೆದುಕೊಂಡು ಒಳಗೆ ಒಗೆಯುವನು.) ಮತ್ತೇನಬೇಕು, ಕಲ್ಲಾ, ಡಾಗದರ್ನ ಕರಕೊಂಡು ಬರಲ್ನೇನು?

**ಕಲ್ಲ**:— ( ಒಳಗಿನಿಂದ ) ಬ್ಯಾಡ ಬಿಡು ಯದಕ. ಸ್ವಲ್ಪ ಕಣ್ಣು ತಗ್ಯಾಕ ಹತ್ಯಾಳ.

**ಮಲ್ಲೇಶಿ** :- ( ಆನಂದದಿಂದ ) ಕಣ್ಣ ತಗ್ಯಾಕ ಹತ್ಯಾಳ ! ( ನಡುಮನೆಯ ಬಾಗಿಲಕ್ಕೆ ನಿಂತು ) ಕಣ್ಣ ತಗದ್ಲ !

**ಕಲ್ಲ** :—( ಒಳಗಿನಿಂದ ) ಗಪ್ಪಾಗು ; ಮಲ್ಲೇಶೀ ಒದರ ಬ್ಯಾಡ.

**ಮಲ್ಲೇಶಿ** :-- ಒದರೂದಿಲ್ಲ ಬಿಡು. ಗಪ್ಪ ಆಗತೀನಿ. ನೀ ಹ್ಯಾಂಗ ಹೇಳತೀ ಹಾಂಗ ಕೇಳತೀನಿ.

**ಚಿನ್ನಮ್ಮ** :— (ಒಳಗಿನಿಂದ ನೆರಳುತ್ತ ) ಯುವ್ವಾ, ಯು···ವ್ವಾ ಯು···ವ್ವಾ...ಯು···ವ್ವಾ··· ( ಎಂದು ನೆರಳುವಳು. )

**ಮಲ್ಲೇಶಿ** :— ಕಲ್ಲಾ, ನೆರಳತಾಳಲ್ಲೋ ?

**ಕಲ್ಲ** :— ( ಒಳಗಿನಿಂದ) ಹೌದು.

**ಮಲ್ಲೇಶಿ** :— ಒಂದಿಷ್ಟ ಶರೆ ಹಾಕ ಹುರವ ಬರತದ.

**ಕಲ್ಲ** :—( ಉತ್ತರ ಕೊಡುವದಿಲ್ಲ.)

**ಮಲ್ಲೇಶಿ** :— ಯಾಕೋ ನಾ ಅಂದದ್ದು ತಿಳೀತ ?

**ಕಲ್ಲ** :— (ಒಳಗಿನಿಂದ) ಗಪ್ಪ ಆಗೋ ಮಲ್ಲೇಶಿ, ಎಷ್ಟ ಮಾತಾಡತೀಯೋ ?

**ಮಲ್ಲೇಶಿ** :— ಭಾಳ ಮಾತಾಡತೀನೇನೋ ? ಬಿಡ ಹಾಂಗಾರ-ಬಿಟ್ಟೆ ಮಾತಾಡೂದು.

( ಮಲ್ಲೇಶಿಯು ಬಾಯ್ಗೆ ಬಂದ್ಹಾಂಗ ಹಾಡುತ್ತ ತಿರುಗಾಡುವನು.)

ಗಂಡ ಹೆಂಡರ ಜಗಳ ಗಂಧ ತೀಡಿಧಾಂಗ ।
ಸಿಂಗಕ ನೀರು ಎರೆಧಾಂಗೋ...... ।
......ಸಾರಿ ಹರಿದಂಗೊ...... ॥

ಮಡದೀನ ಬಡಿದಾನ ಮನದಾಗ ಮರಿಗ್ಯಾನ ।
......ಹಿಡಿಯೂತ । ಕೇಳ್ಯಾನ ।
ನಾ ಹೆಚ್ಚೊಽಽಽಽಽ ತವಗ್ಹೆಚ್ಚೊಽಽಽ ॥

ಗಂಡ ಪಂಡಿತರಾಯಾ ರಂಡೀಯ ಮಾಡಿದರ ।
ಭಂಡ ಮಾಡುವರ ...... ನ ।
ಗುಂಡು......ಕೊಡುವೇನೋ...... ॥

ಕೂಲಿ ಮಾಡಿದರೇನ, ಕೋರಿ ಕೋರಿ ಹೊತ್ತರೇನ ।
ನಮಗ ನಮ ರಾಯ ಬಡವೇನ । ಬಂಗಾರ ।
ಮಾಲ ಇದ್ದಂಗ ಮನಿಯಾಗಽಽ ॥

ಕಡಗದ ನನ ಕೈಯ ಬಿಡು ನನ್ನ ಮಾರಾಯಾ ।
ಕದನ ಬಂದಾವು ನಮ ನಿಮಗ । ವೀಳ್ಯವ ।
ಮಡಚಾಗ ಕಂಡ ನಿಮ ಮನವಽಽ ॥

ಸಿಟ್ಟಿ ನಾ ಆದೇನ ಶ್ರೀಹರಿ ನನ ಮ್ಯಾಲ ।
ಉಚ್ಚಿ ಒಗದೇನ ರುಳಿ ಸರಿಗಿ । ಗೋಕುಲದ ।
ಕೃಷ್ಣ ನಿನ ಮ್ಯಾಲ ಮುನಿದೇನಽಽ ॥

( ಕಲ್ಲ ಹೊರಗೆ ಬರುವನು. )

**ಕಲ್ಲ** :—ಏನ ಮಲ್ಲೇಶಿ, ನಿನ ಬುದ್ಧಿ ಹೋತೇನು ? ಚಿನ್ನಮ್ಮ ಏನ ಮಲಕೊಂಡಾಳ, ನೀ ಯೇನ ಹಾಡತೀ !

**ಮಲ್ಲೇಶಿ** :—ತಲ್ಯಾನ ವಿಚಾರ ನೀ ಕಡಮಿ ಮಾಡತೀಯ್ಯಾ, ಅಂದರ ನಾ ಹಾಡೂದು ಬಿಟ್ಟೀನಿ.

**ಕಲ್ಲ :**—ಚಿನ್ನಮ್ಮಗ ನಿದ್ದಿ ಹತ್ತಿದ್ರ ಜರಾ ನೆಟ್ಟಗಾಗತದ.

**ಮಲ್ಲೇಶಿ :**—( ಕಾತುರದಿಂದ ) ನೆಟ್ಟಗಾಗತದ ನಿದ್ದಿ ಹತ್ತಿದ್ರ. ಬಿಟ್ಟೆ ನಾ ಹಾಡೂದು. ನನ್ನ ವಿಚಾರ ಹಾರಿ ಹೋದು ನನ್ನ ತಲ್ಯಾಗಿಂದು. ( ಸ್ವಲ್ಪ ವಿಚಾರ ಮಾಡಿ ಅತ್ತಿತ್ತ ತಿರುಗಾಡಿ ) ನೋಡ ಕಲ್ಲಾ, ಚಿನ್ನೀ ಸ್ಥಿತಿ ಹೀಂಗ್ಯಾಕ ಆಗಿರಬೇಕು, ನಿನ್ನೆ ರಾತ್ರಿ ಅವಳು ಎಲ್ಲಿ ಹೋಗಿರಬೇಕು—ಹೀಂಗ್ಯಾಕ ಕಬರು ತಪ್ಪಿ, ಮನಿಗ ಬಂದ್ಲು ? ಇದೆಲ್ಲ ಬಂಗಾಲೀ ವಿದ್ಯಾನ ಅನಿಸತದ ನನಗ. ನನಗ ಏನೂ ತಿಳಿಯೊಲ್ಲದು ಇದರಾಗ. ಹೀಂಗ್ಯಾಕ ಆಗಿರಬೇಕ ಕಲ್ಲಾ. ನಿನಗ ಏನ್ಯಾರ ಗೊತ್ತ ಐತೇ ?

**ಕಲ್ಲ :**—ನನಗಾರೆ ಹ್ಯಾಂಗ ಗೊತ್ತಿರಬೇಕು. ನಿನ್ನ ರಾತ್ರಿ ನಿನ್ನ ಲಗಚರ ಮುಗಿದ ಬಳಿಕ ನನಗ ನಿದ್ದಿ ಭಾಳ ಬಂತು ನಾ ಹಾಂಗೇ ಮನಿಗೆ ಹೋಗಿ ಮಕ್ಕೊಂಡೆ. ಮುಂಜಾನೆ ಚುಮು ಚುಮು ನಸಿಕಿನ್ಯಾಗ ಎದ್ದು ಗಿರಣಿ ಕಡೆಗೆ ಹೋದೆ. ನಿಮ್ಮನ್ನ ಕೆಲ್ಸದಿಂದ ತಗದ ಹಾಕೇದs ಅಂತ ಹೇಳಿದರು ಮುಕಾದಮರು. ನಾ ಹಾಂಗs ಮನೀಗೆ ಬಂದೆ; ಮನಿಯಿಂದ ಇಲ್ಲಿಗೆ ಬಂದೆ.

**ಮಲ್ಲೇಶಿ :**—ಆ ಹುಚ್ಚ್ಯ ರಂಡಿ ನೀಲಮ್ಮ ಏನಾರೆ ಗದ್ಲಾ ಹಾಕಿದ್ದಾಳೇನು? ನಾವ ಹೊರಗ ರಾತ್ರಿ ಹೋಗಿದ್ದು ತಿಳಕೊಂಡು ಹೀಂಗ ಮಾಡಿರಬೇಕೇನ ?

( ಹೊರಗೆ " ಕಲ್ಲಪ್ಪ, ಏ ಕಲ್ಲಪ್ಪ, ಕಲ್ಲಾ, ಎಂದು ಕೂಗುವರು. )

**ಕಲ್ಲ :**—( ಬಾಗಿಲ ಸಮೀಪಕ್ಕೆ ಹೋಗಿ ) ಯಾರವರು ಕೂಗುವರು ?

**ಹೊರಗಿನಿಂದ :**—ನಾ ಬೀರ.

**ಕಲ್ಲ :**—ಅವಾ ಸಿಕ್ಕನೇನು ?

**ಹೊರಗಿನಿಂದ :**—ಅವಾ ಸಿಗಲಿಲ್ಲ. ಓಡಿ ಹೋದ.

**ಕಲ್ಲ**:—ಏ ಬೀರಾ, ಬಾ ಒಳಗ. ಏನಾತು ಹೇಳ ಬಾ.

**ಬೀರ**:—(ಹೊರಗಿನಿಂದ) ಈಕಡೆ ಪೋಲೀಸರು ಬರತಾರಂತ ಅದಕ ನಾ ಒಲ್ಲೆ.

**ಮಲ್ಲೇಶಿ**:—(ಗಾಬರಿಯಾಗಿ) ಕಲ್ಲಾ, ಏನಂದ ಬೀರ?

**ಕಲ್ಲ**:—ಈಕಡೆ ಪೋಲೀಸ್ರು ಬರತಾರಂತ.

**ಮಲ್ಲೇಶಿ**:—(ನಡುಗುತ್ತ) ಯಾ...ಕ...ಕೇಳು ಅವ್ನ.

**ಕಲ್ಲ**:—ಏನ ಸುದ್ದಿ ಬೀರಾ ಇದು.

**ಬೀರ**:—(ಹೊರಗಿನಿಂದ) ನನಗ ಗೊತ್ತಿಲ್ಲ. ಬೀದ್ಯಾಗ ಮಾತಾಡತಿದ್ರು ಜನರು. ಎಲ್ಲಾ ಗಿರಣಿ ಬಂದ ಆಗ್ಯಾವ. ನಮ್ಮನ್ನ ಹಿಡಕೊಂಡು ಹೋಗತಾರಂತ.

**ಕಲ್ಲ**:—ಯಾಕ?

(ಬೀರ ಉತ್ತರವೇ ಕೊಡುವದಿಲ್ಲ.)

**ಮಲ್ಲೇಶಿ**:—ಕಲ್ಲಾ, ಇನ್ನೊಮ್ಮೆ ಕೂಗು ಬೀರನ್ನ.

**ಚಿನ್ನಮ್ಮ**:—(ಒಳಗಿನಿಂದ) ಯ...ವ್ವಾ...ಯ...ವ್ವಾ (ಎಂದು ನೆರಳುವಳು.)

**ಮಲ್ಲೇಶಿ**:—ಕಲ್ಲಾ, ನೆಳ್ಳತಾಳಲ್ಲ ಚಿನ್ನಿ.

**ಕಲ್ಲ**:—ನೀ ಒಳಗ ಹೋಗಿ ನೋಡು, ಮಲ್ಲೇಶಿ.

**ಮಲ್ಲೇಶಿ**:—ನಾ ಒಲ್ಲೆ ಕಲ್ಲ; ನೀನೇ ಒಳಗ ಹೋಗು. ನಾ ಆಕಿನ್ನ ನೋಡಿದ್ರ ನನಗ ದುಃಕ ಉಕ್ಕತದ. ನನಗ ಹುಚ್ಚ ಹಿಡೀತದ.

**ಕಲ್ಲ**:—ಏ ಬೀರಾ, ಏऽऽ ಬೀರಾ (ಕೂಗುವನು.)

**ಬೀರ**:—(ಹೊರಗಿನಿಂದ) ಯಾಕೋ ಕಲ್ಲಾ?

**ಕಲ್ಲ**:—ಬಾರೋ ಇಲ್ಲೊಂದೀಟ.

**ಬೀರ :**—(ಹೊರಗಿನಿಂದ) ನಾ ಒಲ್ಲೆಪಾ. ಮನಿಗೇ ಹೊಗತೀನಿ. ಪೋಲೀಸರು ಬಂದು ಬಡದ–ಗಿಡದಾರು.

**ಕಲ್ಲ :**– ಪೋಲೀಸರ್‍ಯಾಕ ಬಡೀತಾರೋ ?

**ಬೀರ :**— (ಹೊರಗಿನಿಂದ) ಕೆಲವರ್‍ನ ಇಂದು ಹಿಡಕೊಂಡು ಹೋಗಿ ಜೇಲಿಗೆ ಹಾಕತಾರಂತ, ದಟ್ಟ ಸುದ್ದಿ ಅದ ಊರಾಗ.

**ಮಲ್ಲೇಶಿ :**—ಕಲ್ಲಾ, ಊರಾಗ ಹೋಗಿ ತಿಳಕೊಂಡು ಬಾ.

**ಕಲ್ಲ :**—ಏನ ಮಾಡತೀ ಬಿಡು ಅದನ್ನ ತಗೊಂಡು.

**ಚಿನ್ನಮ್ಮ :**— ( ಒಳಗಿನಿಂದ ನರಳುವಳು.) ಯ...ವ್ವಾ, ಯ...ವ್ವಾ; ಯ...ವ್ವಾ.

**ಕಲ್ಲ :**—ಎಷ್ಟ ನರಳತಾಳಲ್ಲೋ ಮಲ್ಲೇಶಿ, ಚಿನ್ನಮ್ಮ.

**ಮಲ್ಲೇಶಿ :**—ಭಾಳ ನರಳತಾಳ.

**ಕಲ್ಲ :**—ಮಲ್ಲೇಶಿ, ನೀ ಆಕೀ ಹತ್ತೀಲೆ ಕೂತು ನೋಡು, ನಾ ಹೋಗಿ ಎಲ್ಲಾ ತಿಳಕೊಂಡು ಬರತೀನಿ.

**ಚಿನ್ನಮ್ಮ :**— (ಒಳಗಿನಿಂದ) ಮ...ಲ್ಲ...ಮಲ್ಲೇಶಿ...ಯ .. ವ್ವಾ ; ಈ ೯ ೯ ೯ ೯ ... ಮಲ್ಲೇಶೀ... (ಎಂದು ಚೀರುವಳು.)

(ಮಲ್ಲೇಶಿಯು ಗಾಬರಿಯಾಗುವನು. ಕಲ್ಲನು ಮಲ್ಲೇಶಿಯ ಮೊಗವನ್ನು ನೋಡುತ್ತ ನಿಲ್ಲುವನು.)

**ಮಲ್ಲೇಶಿ :**—ಚೀರಿದ್ಲು ಅಲ್ಲ ಚಿನ್ನಿ, ಕಲ್ಲ.

**ಕಲ್ಲ :**– ಹೌದು ಚೀರಿದ್ಹಾಂಗ ಆತು.

**ಮಲ್ಲೇಶಿ :**—ಯಾಕ ಚೀರಿದ್ಳಾಳು ?

**ಕಲ್ಲ :**—ತಲೀಗೆ ಭಾಳ ತ್ರಾಸ ಆಗಿರಬೇಕು.

**ಮಲ್ಲೇಶಿ** :— ( ನಡುಮನೆಯ ಬಾಗಿಲಕ್ಕೆ ನಿಂತು ಹಣಕಿ ಹಾಕುವನು. ) ಕ…ಲ್ಲಾ.

**ಕಲ್ಲ** :—( ಗಾಬರಿಯಾಗಿ ) ಯಾಕೋ ಮಲ್ಲೇಶಿ ?

**ಮಲ್ಲೇಶಿ** :—ಇಲ್ನೋಡು ಹ್ಯಾಂಗ ಮಾಡತಾಳ, ಚಿನ್ನಿ.

**ಕಲ್ಲ** :—( ಒಳಗೆ ಹೋಗಬೇಕೆಂದು ಮುಂದಕ್ಕೆ ಬರುವನು.)

( ಹೊರಗಿನಿಂದ ) " ಏ ಕಲ್ಲಾ,.. ಮಲ್ಲೇಶೀ ಕದಾ ಹಾಕ್ಕೊಳ್ಳೋ. ಪೋಲೀಸರು ಬರಾಕ ಹತ್ಯಾರ. ಏ ಕಲ್ಲಾ, ಕದಾ ಹಾಕ್ಕೋಲಗೂನೇ."

**ಕಲ್ಲ** :—( ಮತ್ತೆ ಮುಂಬಾಗಿಲಕ್ಕೆ ಬಂದು ) ಏನೋ ಬೀರಾ, ಏ ಬೀರಾ, ಏನದು ?

( ಉತ್ತರವೇ ಬರುವದಿಲ್ಲ. )

**ಕಲ್ಲ** :—ಮಲ್ಲೇಶಿ, ನಾ ಹೋಗಿ ಬೀರನ್ನ ಕೇಳಕೊಂಡ ಬರ್ತೀನಿ. ನೀ ಚಿನ್ನಮ್ಮನ ನೋಡು. ನಾ ಈಗ ಬಂದೆ.

**ಮಲ್ಲೇಶಿ** :—ನನ್ನಾಣಿ ಆಗೇದ ನೋಡು ನೀ ಹೋದರ. ನನ್ನ ಕಡಿಂದ ಆಗೂದಿಲ್ಲ ಚಿನ್ನಿನ್ನ ನೋಡೂದು.

**ಕಲ್ಲ** :— ಬಂದೆ ನಿಂದ್ರು. ಗಾಬರಿಯಾಗಬ್ಯಾಡ. ( ಹೋಗ ಹತ್ತುವನು.)

**ಮಲ್ಲೇಶಿ** :— ಕಲ್ಲಾ, ಹೋದ್ರ ನನ್ನ ಅಡ್ಡ ಹರಕೊಂಡು ತಿಂದ್ಹಾಂಗ.

**ಕಲ್ಲ** :—ಏನ ಹೀಂಗ ಹುಚ್ಚನ್ಹಾಂಗ ಮಾಡಿದರ. ಒಳಿತನ್ನು.

**ಮಲ್ಲೇಶಿ** :—ನಾ ಒಳಿತ ಅನ್ನೂದುಲ್ಲ ನೀ ಹೋದ್ರ. ಚಿನ್ನೀ ಆಣಿ ಆಗೇದ ನೋಡು ನೀ ಹೋದ್ರ.

**ಚಿನ್ನಮ್ಮ** :—( ಒಳಗಿನಿಂದ ) ನೀ ऽऽ ಲೀ, ನ...ನ್ನ ಜೀ...ವಾ ತಗೊಂಡ್ಯಾ. ಯ...ವ್ವಾ...ಬಂದ ( ಎಂದು ಕೂಗುವಳು.)

**ಮಲ್ಲೇಶಿ** :— ( ಓಡುತ್ತ ಹೋಗಿ ಕಲ್ಲನನ್ನು ಗಟ್ಟಿಯಾಗಿ ಹಿಡಿದುಕೊಂಡು.) ಕಲ್ಲಾ, ಕಲ್ಲಾ, ಹ್ಯಾಂಗ ಮಾಡತಾಳ ನೋಡೋ ಚಿನ್ನಿ! ನೀ ಹೋಗಬ್ಯಾಡ.

( ಚಿನ್ನಮ್ಮ ಕೂದಲನ್ನು ಹರವಿಕೊಂಡು ರಣಭೈರವಿಯಂತೆ ಹೊರಗೆ ಬರುವಳು. ಕಣ್ಣುಗಳಿಂದ ಕಿಡಿಗಳು ಹಾರುತ್ತಿರುವವು. ಮೈ ಮೇಲೆ ಪ್ರಜ್ಞೆಯಿಲ್ಲ. ಮಲ್ಲೇಶಿಯು ಗಾಬರಿಯಾಗುವನು. ಕಲ್ಲನು ನಡುಗುತ್ತ ನಿಲ್ಲುವನು. ಒಬ್ಬರ ಮೊಗವನ್ನು ಒಬ್ಬರು ನೋಡುತ್ತ ಸ್ತಂಭಿತರಾಗಿ ನಿಲ್ಲುವರು. ಅವಳು ಮೆಲ್ಲಕ್ಕೆ ಒಂದೊಂದು ಹೆಜ್ಜೆಯನ್ನಿಕ್ಕುತ್ತ ಮಲ್ಲೇಶಿಯನ್ನು, ಕಲ್ಲನನ್ನು ದಿಟ್ಟಿಸಿ ನೋಡಹತ್ತುವಳು. )

**ಚಿನ್ನಮ್ಮ** :—ಯಾರು ? ಮಲ್ಲೇಶಿ. ಅವನಾರು ? ಕಲ್ಲ. ಅಲ್ಲ ; ಬಡತನದ ಗೊಂಬಿ. ಕೂಲಿಯಿಂದ ಹೊಟ್ಟೆ ಹರಿದುಕೊಳ್ಳುವ ಬಡವ. ಮಲ್ಲೇಶಿ, ಅಲ್ಲ ; ಮಲ್ಲ ಚಿನ್ನಮ್ಮನ ಗಂಡ. ನೀಲಮ್ಮ..... ನೀಲಿ, ಮಲ್ಲೇಶಿ ಹೊರಗ ಹೋಗ್ಯಾನಂತ ನನ್ನ ಎಳಕೊಂಡು ಹೋದ್ಯಾ ಆ ಗಿರಣಿಯವನ ಹತ್ತರ. ನೀಲೀ ಹುಚ್ಚರಂಡೆ ಬಿಡು ನನ್ನ ಕೈ. ಒಲ್ಲೆ ನಾ ಬರೂದೊಲ್ಲ. ಬಿಡು ಕೈ, ಕಡೀತೀನಿ ನೋಡು. ಕೆಡ್ಸಿದ್ಯಾ ನನ್ನ ಆ ಗಿರಣಿಯವನ ಕಡಿಂದ. ( ಹುಚ್ಚನಂತೆ ಕುಣಿಯ ಹತ್ತುವಳು. ) ಕೆಟ್ಟೆ ! ಕೆಟ್ಟೆ !! ಕಟ್ಟೆ !!! ರೊಕ್ಕ ! ರೊಕ್ಕದ ಮದದಿಂದ ನನ್ನ ಮೈ ಮುಟ್ಟಿದನಲ್ಲ. ಕೆಡ್ಸಿದಾ. ಯ......ವ್ವಾ ಕೆಡ್ಸಿದಾ. ( ಎದುರಿಗೆ ದುರುದುರುನೆ ನೋಡುತ್ತ ) ಬಂದ—ಬಂ—–ದ ಎದೂರಿಗೆ. ರೊಕ್ಕದ ಸೊಕ್ಕಿನಿಂದ ಬಂದ. ಇಲ್ಲಿ ಬಂದ, ಅಲ್ಲಿ ಬಂದ—ಬಂದ ! ಬಂದ !! ಬಂದ !!! ( ಬಲಗೈ ತೋಳಿನಿಂದ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತ) ನಾ ಒಲ್ಲೆ ನಿನ್ನ ಮಾರೀ ನೋಡಲಿಕ್ಕೆ. ದೂರ ಸರಿ ! ಕೈ ಬಿಡು. ನಾ ಒಲ್ಲೆ ನಿನ್ನ ಗಿರಿಣ್ಯಾನ ಹ್ವಾರಾ. ಬಿಡು ಕೈ. ನೀಲೀ

ಮೋಸ ಮಾಡಿದ್ಯಾ. ಮಲ್ಲೇಶಿಗ ತೆಲಿ ಒಡದದ ಅಂತ ಹೇಳಿದ್ಯಾ— ನನಗ ಮೋಸ ಮಾಡಿದ್ಯಾ. ಬಂದನವ್ವ, ಯವ್ವಾ ಬಂದ ಮೈಮ್ಯಾಲ. ತಿಂತೀನ ನಿಂದ್ರು ನಿನ್ನ. ರೊಕ್ಕದ ಸೊಕ್ಕ ಅಲ್ಲಽನಿಂದು. ನಾವ ಬಡವರಂತ ಮಾಡತೀಯಲ್ಲ, ನಿನ್ನ ಹೆಣಾ ಛಂದಾ ಮಾಡ್ಲೀ (ಎಂದು ಲಟಕಿ ಮುರಿಯುವಳು.) ಯ...ವ್ವ ಉಸ್ಸ! ಉಸ್ಸ!! ಇವನ ಬಿಕ್ಕೊಂಡು ಹೋಗ್ಲೀ, ಮರಗವ್ವ ನುಂಗಲಿ. ಕೆಡ್ಸಿದಾ ; ಯವ್ವಾ ಕೆಡ್ಸಿದಾ. ಮುಗೀತು. ಯ...ವ್ವಾ. (ಅಳಹತ್ತುವಳು.) ನಾ ನುಂಗತೀನಿ ಅವನ್ನ (ಉಸುರು ಬಿಡುತ್ತ) ಅವನ ಪಾತಾಳಕ್ಕ ಒತ್ತತೀನಿ. ಮುಗೀತು ಇನ್ನ ಮೇಲೆ ಹಣದ ರಾಜ್ಯ. ಸುರು ಆತು ಬಡವರ ರಾಜ್ಯ. ಬಡವರ ಬಾಳುವೆ ಮುಗಿಯಿತು. ಬಡವರ ಕಷ್ಟ ಹೋಯಿತು. ಗಂಟು ಇಟ್ಟಕೊಂಡವರನ್ನ ಹೊಡಿಯಿರಿ, ಬಡಿಯರಿ, ಕಡಿಯಿರಿ, ಅವರ ಗಂಟು ಕಸಿದುಕೊಳ್ಳಿರಿ ; ಅವರ ರಕ್ತ ಕುಡಿಯಿರಿ ; ಅವರ ಗೋರಿ ಕಟ್ಟಿ ಕುಣಿಯೋಣ ಬರ‍್ರಿ. ಇದೇ ನಮ್ಮ ಹಬ್ಬಾ. ಇದೇ ನಮ್ಮ ಸಣಸೋಮಾರ. ಶಿವಗ ಅವರ ರಕ್ತಾ ಎಡಿ ಕೊಡ್ರಿ.

(ಎಂದು ಕುಣಿ ಕುಣಿದು ಮೂರ್ಛೆ ಬಂದು ಬೀಳುವಳು.)

(ಕಲ್ಲನೂ ಮಲ್ಲೇಶಿಯೂ ಗಾಬರಿಯಾಗಿ ನಿಲ್ಲುವರು. ಮಲ್ಲೇಶಿಯು ಓಡಿ ಹೋಗಿ ಅವಳನ್ನು ತಬ್ಬಿಕೊಳ್ಳುವನು.)

**ಮಲ್ಲೇಶಿ** :—(ದುಃಖಿಸುತ್ತ) ಚಿನ್ನೂ, ಚಿನ್ನೀ ಮಾತಾಡ; (ಕೈಕಾಲುಗಳನ್ನು ಹಿಡಿಯುತ್ತ) ಕಲ್ಲಾ, ಕೈ ಕಾಲು ತಣ್ಣಗೆ ಆಗ್ಯಾವ; ನೋಡು.

**ಕಲ್ಲ** :—(ಕೈ ಕಾಲುಗಳನ್ನು ಹಿಡಿದು) ಮಲ್ಲೇಶಿ, ಅವಳಿಗೆ ಸನ್ನಿ ಹಿಡಿದದ. ಗಾಬರಿಯಾಗಬ್ಯಾಡ.

**ಮಲ್ಲೇಶಿ** :—ಸನ್ನೀ ಹಿಡೀತದ ! ಕಲ್ಲಾ, ನನಗ ಪಟ್ಟಣ್ಣ ಬರೂನ ಬ್ಯಾಡಂತ ಕಡ್ಡೀ ಕೊಟ್ಲು. ನಾ ಯೇನ ಮಾಡಿದೆ ಇದನ್ನ,

ಕಲ್ಲಾ. ಚಿನ್ನೀ ಮಾತ ನಾ ಕೇಳಲಿಲ್ಲ. ಆಕಿನ್ನ ಬಲಿ ಕೊಟ್ಟಂಗಾತು ಇಲ್ಲಿಗ ಬಂದು. ನನ್ನ ಪರಪಂಚ ಮುಗೀತು ಇನ್ನು. ಶಿವಾ ಬೆಳಗಿ ಬಿಟ್ಟ ನಮ್ಮ ಪರಪಂಚ.

**ಕಲ್ಲ** :—ಗಪ್ಪಾಗು ಮಲ್ಲೇಶಿ, ಧೈರ್ಯ ತಗೋ. ಗಾಬರಿಯಾಗ ಬ್ಯಾಡ.

**ಮಲ್ಲೇಶಿ** :—ಎಲ್ಲಿ ಧೈರ್ಯ ತಗೊಳ್ಲಿ ಎಲ್ಲಾ ಮುಗೀತು ನಂದು. ಹೀಂಗ್ಯಾಕ ಮಾಡತಾಳ ನೋಡು, ಕಲ್ಲ.

**ಕಲ್ಲ** :—ಸರಿ ಒಂದೀಟ ದೂರ; ನಾ ಎಲ್ಲಾ ಮಾಡತೀನಂತ.

**ಮಲ್ಲೇಶಿ** :—ಎನ್ ಮಾಡ್ತಿ ಕಲ್ಲಾ. ( ಕಾತುರದಿಂದ ) ಕಲ್ಲಾ ಚಿನ್ನಿ ಬದಕತಾಳ !

**ಕಲ್ಲ** :—ಏನು ಹುಚ್ಚ ಇದ್ದೀಯೋ ಮಲ್ಲೇಶಿ, ಅವಳಿಗೆ ಏನ ಆಗೇದ. ತಲ್ಯಾಗ ವಿಚಾರ ಭಾಳ ಆಗಿ ಬಡಬಡ್ಸಿತಾಳ. ವಿಚಾರ ಒಂದ ಜರಾ ಕಡ್ಮಿ ಆದರ ತಾನೇ ನೆಟ್ಟಗ ಆಗತದ. ಸುಳ್ಳೆ ಗಾಬರಿ ಯಾಗ ಬ್ಯಾಡ.

**ಮಲ್ಲೇಶಿ** :—ನೆಟ್ಟಗ ಆಗತದ !

**ಕಲ್ಲ** : – ಆಗತದ ಧೈರ್ಯಾ ತಗೋ.

**ಮಲ್ಲೇಶಿ** : –ಏನ ಮಾಡ್ಲಿ, ಹ್ಯಾಂಗ ನೆಟ್ಟಗ ಆದೀತು.

**ಕಲ್ಲ** :—ಆಕೀಗೆ ಏನ ಆಗೇದ. ಬುದ್ಧಿ ವಿಭ್ರಮ ಆಗಿ ಹೀಂಗ ಮಾಡತಾಳ. ಬುದ್ಧಿ ಜರಾ ಸರಿ ಆತಂದ್ರ ಎಲ್ಲಾ ನೆಟ್ಟಗ ಆಗತದ.

( ಹೊರಗ ಬಹಳೇ ಗದ್ದಲ ಆಗುವದು. ಜನಗಳ ಕೂಗ್ಯಾಟ ಕೇಳ ಬರುವದು. " ನನ್ನ ಯಾಕ ಹಿಡಿತೀರಿ ಪೋಲೀಸಸಾಬರ, ನಾ ಏನ ಮಾಡೀನಿ. ಬಿಡ್ರಿ ನನ್ನ " ಎಂದು ಕೇಳ ಬರುವದು. ' ನನ್ನ ಹಿಡಿ ಬ್ಯಾಡ್ರಿ ' ಎಂದು ಕೂಗಿದ್ದು ಕೇಳಿಸುವದು. )

**ಕಲ್ಲ** :— ಮಲ್ಲೇಶಿ, ಚಿನ್ನಮ್ಮನ ಒಳಗ ಮಲಗಿಸು. ಪೋಲಿಸರು ಬರತಾರಂತ ಕಾಣ್ಸೆತದ.

**ಮಲ್ಲೇಶಿ** :—ನನ್ನ ಚಿನ್ನೂನ ಬಿಟ್ಟು ನಾ ಎಲ್ಲಿಯೂ ಹೋಗೂದುಲ್ಲಾ.

**ಕಲ್ಲ** :—ಹಾಂಗ ಮಾಡಬ್ಯಾಡ ಮಲ್ಲೇಶಿ. ಒಂದ ಜರಾ ಆಕೀಗೆ ವಿಶ್ರಾಂತಿ ಸಿಗಲಿ. ಹೊರಸಿನ ಮ್ಯಾಲೆ ಮಲಗ್ಲೂನಂತ.

**ಚಿನ್ನಮ್ಮ** :— ಯ... ವ್ವಾ ... ಮಲ್ಲೇಶಿ ( ಎಂದು ಮಲ್ಲೇಶಿಯನ್ನು ತಬ್ಬಿಕೊಳ್ಳುವಳು. )

**ಮಲ್ಲೇಶಿ** :—( ಅವಳ ಮೈಮೇಲೆ ಕೈಯಾಡಿಸುತ್ತ) ಚಿನ್ನೂ, ಚಿನ್ನೀ, ಒಂದ ಸ್ವಲ್ಪ ಮಾತಾಡು ನೋಡ್ತೀನಿ.

**ಚಿನ್ನಮ್ಮ** :—( ಉತ್ತರವೇ ಇಲ್ಲ. )

**ಕಲ್ಲ** :— ದೂರ ಸರಿ ಹಾಂಗ ಹುಚ್ಚನ್ಹಾಂಗ ಮಾಡಬ್ಯಾಡ. ನಿನಗೂ ಹುಚ್ಚ ಹಿಡಿತೋ ಏನೋ.

**ಮಲ್ಲೇಶಿ** :—ಹುಚ್ಚ ಹಿಡಿದ್ರ ನೆಟ್ಟಗ ಆಗತದ ಬಿಡು.

( ಹೊರಗೆ ಯಾರೋ " ಮಲ್ಲೇಶಿಯ ಮನಿಯಾವದು " ಎಂದು ಕೇಳುವರು. )

**ಮಲ್ಲೇಶಿ** :—ಕಲ್ಲಾ, ನನ್ನ ಮನೀ ಕೇಳಲಿಲ್ಲ ಯಾರೋ ಹೊರಗ.

**ಕಲ್ಲ** :—ಹೌದು ಕಾಣ್ಸತದೋ.

**ಮಲ್ಲೇಶಿ** :—ಯಾರವರು ನೋಡು ಕಲ್ಲ.

(ಹೊರಗನಿಂದ : – ಇದೇ ಏನ ಮಲ್ಲೇಶಿ ಮನಿ,ಎಂದು ಕೇಳುವರು)

**ಕಲ್ಲ** :—ಯಾರೋ ಬದ್ಹಾಂಗ ಕಾಣ್ಸತದೊ.

**ಮಲ್ಲೇಶಿ** :—ಯಾರು ನೋಡು ಮುಂದಕ್ಕ ಹೋಗಿ.

**ಕಲ್ಲ** :—ಹೋಗತೀನಿಂದ್ರು ; ಚಿನ್ನಮ್ಮನ ವ್ಯಾಲ ಮಲಗ್ನಿ ಹೋಗತೀನಿ.

**ಮಲ್ಲೇಶಿ** :— ಇಲ್ಲೇ ತೆಳಗ ಇರವಳ್ಳ್ಯಾಕ, ವ್ಯಾಲ ಬ್ಯಾಡ ಬಿಡು. ಇಲ್ಲೇ ಗಾಳೀ ಹಾಕೋತಾ ಕೂಡತೀನಿ. ನನ್ನ ಚಿನ್ನಿ ನನ್ನ ಹತ್ತರ ಇರ್ಲಿ.

**ಕಲ್ಲ** :— ಒಂದಿಷ್ಟು ಆಕಿನ್ನ ಬಿಟ್ಟು ದೂರ ಸರಿದು ಕೂಡ್ರು. ಒಂದಿಷ್ಟು ಆಕಿಗೆ ಆರಾಮಾರೇ ಆಗ್ಲಿ.

( ಹೊರಗೆ "ಮಲ್ಲೇಶೀ ಮಲ್ಲೇಶೀ, ಎಂದು ಕೂಗುವರು. 'ಇದ್ದೀಯೇನು ಮನ್ಯಾಗ.' ಎಂದು ಕೇಳುವರು. )

**ಮಲ್ಲೇಶಿ** :— ( ಚಿನ್ನಮ್ಮನನ್ನು ಬಿಟ್ಟು ಮುಂದಕ್ಕ ಬಂದು ) ಯಾರು ?

**ಹೊರಗಿನಿಂದ** :—ಒಂದಿಷ್ಟು ಹೊರಗ ಬಾ.

**ಮಲ್ಲೇಶಿ** :— ಯಾಕಪಾ ಯಾರ ನೀವು ?

**ಹೊರಗಿನಿಂದ** :—ಬರುತೀಯಿಲ್ಲೊ ಹೊರಗ.

**ಕಲ್ಲ** :—ಹಾಂ ಒಳೇ ಜೋರ ಕಾಣ್ಸತದ ಯಾರು ನೀವು.

**ಹೊರಗಿನಿಂದ** :—ಬಾ ಲಗೂನೇ.

**ಕಲ್ಲ** :— ಮಲ್ಲೇಶಿ, ಒಂದಿಷ್ಟು ನೋಡು ಯಾರವರು.

( ಮಲ್ಲೇಶಿ ಮುಂಬಾಗಿಲದ ಹೊರಗೆ ಹೋಗುವನು. )

**ಮಲ್ಲೇಶಿ** :—( ಹೊರಗಿನಿಂದ ) ಕಲ್ಲಾ, ಪೋಲೀಸರು ಹಿಡಿದರು ನನ್ನ.

**ಕಲ್ಲ** :—ಬಂದೆ ನಿಂದ್ರು ಅವರ ಹಲ್ಲು ಮುರೀತೀನಿ.

**ಮಲ್ಲೇಶಿ** :— ಕಲ್ಲಾ ಲಗೂನೇ ಬಾ, ಬಡಗೀ ತಗೊಂಡು. ಬಾ ಲಗೂನೇ. ನನಗೊಂದು ತಗೋ ಬಡಗೀ.

**ಕಲ್ಲ** :—ಬಡಗೀ ತಗೋತೀನಿಂದ್ರು. ಬಂದೆ ಧೈರ್ಯ ತಗೋ.

**ಚಿನ್ನವ್ವ** : –(ತುಸು ಎಚ್ಚತ್ತು) ಮಲ್ಲೇಶೀ, ಮಲ್ಲೇಶೀ (ಎಂದು ಕೂಗುವಳು.)

(ಕಲ್ಲ ಅದನ್ನು ಕಿವಿಯೊಳಗ ಹಾಕಿಕೊಳ್ಳದೆ ಹಾಗೇ ಬಡಗಿಗಳನ್ನು ತೆಗೆದುಕೊಂಡು ಹೊರಗೆ ಜಿಗಿಯುವನು.)

**ಮಲ್ಲೇಶಿ** :—(ಹೊರಗಿನಿಂದ) ಬರಬ್ಯಾಡ ಕಲ್ಲಾ, ಗುಂಡು ಹಾರಿಸಲಿಕ್ಕ ಹತ್ಯಾರ. ಕದಾ ಹಾಕ್ಕೋ, ಕಲ್ಲಾ ಬಿಡಬ್ಯಾಡೋ.

**ಚಿನ್ನವ್ವ** :—ಮಲ್ಲೇಶಿ, ಮ…ಲ್ಲೇ…ಶೀ…ನೀರು…ನೀ…ರು, (ಸಣ್ಣ ದನಿಯಿಂದ) ನೀ…ರು.

(ಹೊರಗೆ ಗುಂಡಿನ ಸಪ್ಪಳವು ಕೇಳಬರುವದು. ಕೂಗಾಟವು ಹೆಚ್ಚುವದು. ಹೊರಗಿನಿಂದ ಒಂದು ಗುಂಡು ಬಂದು ಅಲ್ಲಿಟ್ಟಿರುವ ಒಂದು ಗಡಿಗೆಗೆ ಬಡಿಯುವದು. ಅದು ಚಳ್ಳೆಂದು ಒಡಿಯುವದು. ಮನೆಯಲ್ಲಿ ಮದ್ದಿನ ಹೊಗೆಯು ಮುಸುಕಹತ್ತುವದು.)

**ಚಿನ್ನವ್ವ** : (ನರಳುತ್ತ) ಮಲ್ಲೇಶೀ, ನೀರು. ನೀ...ರು (ಎಂದು ಕೂಗುವಳು.) ಯು…ವ್ವಾ ಹೊ…ಟ್ಟೆ ಉ…ರೀ · ತ…ದ… ಯು…ವ್ವಾ.

**ಮಲ್ಲೇಶಿ** :— (ಹೊರಗಿನಿಂದ) ಯುಪ್ಪಾ ಸತ್ತೆ ಗುಂಡು ಬಡೀತು. (ಎಂದು ಚೀರುವನು.)

**ಚಿನ್ನವ್ವ** :—(ನರಳುತ್ತ) ಮಲ್ಲ ..ಮ…ಲ್ಲೇ…ಶಿ ..ಮ…ಲ್ಲ ನೀ……ರು. ಮಲ್ಲೇಶೀ, ಕರ್‍ರಗಿನ ಮನಶ್ಯಾ ಮನ್ಯಾಗ ಬಂದಾನಲ್ಲ— ಯುವ್ವಾ ಕೈಯಾಗ ಏನೋ ಹಿಡಿದಾನಲ್ಲ—ಬಂದ! ಸಮೀಪಕ್ಕ–ಮಲ್ಲೇಶೀ ಮೈಮ್ಯಾಲೆ ಬರತದ ಅವನ ಕೋಣಾ. ಹೊಡೀ ಅದನ್ನ. ಬಾ ಲಗೂನೆ: ಅದರ ಕೋಡು ಹಿಡಿ. ಇರೀತದ, ಅವಾ ನಗತಾನಲ್ಲ; ಆ ಕರಾಗಿನ ಮನಸ್ಯಾ. ಬಂತ ಯುಪ್ಪಾ ಮೈಮೂಲೆ. (ದನಿಯು ಸಣ್ಣಾಗುವದು.)

( ಮನೆಯಲ್ಲಿ ಗುಂಡುಗಳು ಸುಯ್ಯೆಂದು ಬಂದು ಅಲ್ಲಿರುವ ಗಡಿಗೆ ಮಡಿಕೆಗಳಿಗೆ ಬಡೆಯುವವು. ಮನೆಯಲ್ಲಿ ಹೊಗೆಯು. ಕಲ್ಲನು ಹೆಗಲ ಮೇಲೆ ಮಲ್ಲೇಶಿಯನ್ನು ಹಾಕಿಕೊಂಡು ಬರುವನು. ಕಲ್ಲನ ಉಡಿಗೆ ತೊಡಿಗೆಗಳು ಹರಿದು ಹೋಗಿರುವವು. ಮೈಯಲ್ಲಾ ಮಣ್ಣು ಮುಸುಕಿರುವದು. ಮಲ್ಲೇಶಿಯನ್ನು ಕೆಳಗೆ ಮಲಗಿಸುವನು. ಗಡಿ ಬಿಡಿಯಿಂದ ಹೋಗಿ ಬಾಗಿಲ ಹಾಕುವನು. ಹೊರಗೆ ಕೂಗಾಟವು ಹೆಚ್ಚುವದು. ಕಲ್ಲನು ಮಲ್ಲೇಶಿಯ ಬಳಿಯಲ್ಲಿ ಕುಳಿತು ಅವನ ಮೊಗ ವನ್ನು ನೋಡುತ್ತ ಉಸುರ್ಗರೆಯುವನು. )

**ಮಲ್ಲೇಶಿ** :—( ಸಣ್ಣ ದನಿಯಿಂದ ) ಕಲ್ಲಾ, ನಾ ಬದಕೂದಿಲ್ಲ. ಎದೆಗೆ ಬಡೀತು ಗುಂಡು. ಅಯ್ಯಯ್ಯೋ ನೋವ ( ಎಂದು ಎದೆಯನ್ನು ಹಿಡಿದುಕೊಳ್ಳುವನು. ) ಕಲ್ಲಾ, ನಾ ಅಂತು ಬಡತನದ ಕಷ್ಟದಿಂದ ಪಾರಾಗವೆನು. ಕಲ್ಲಾ ಇದೇ ನಮ್ಮ ಬಡವರ ಬಾಳುವೆ. ( ಕಲ್ಲ ಶೋಕಿಸುವನು.) ಕಲ್ಲ, ಅಳಬೇಡ; ಬಡವರ ರಕ್ತ ಸೂರೆ ಆಗಲಿ. ಬಡವರ ಮನೆಮಾರುಗಳು ಮಣ್ಣು ಪಾಲಾಗಲಿ. ಬಡವರ ಹೆಂಡಂದಿರು ರಂಡಿಯರಾಗಲಿ. ಅವರ ಶೋಕವೇ ಮುಂದಿನ ಬಡವರ ಸುಖದ ತಳ ಹದಿಯು. ನಮ್ಮಂತಹ ಬಡವರ ದೇಹದಿಂದ ನಮ್ಮ ಕಷ್ಟದ ಗುಡಿಕಟ್ಟಿರಿ. ಅದರ ಮೇಲೆ ನಮ್ಮ ರಕ್ತದ ನಿಶಾನೆ ಏರಿಸಿರಿ. ಅದೇ ಭಾವೀ ಸುಖದ ದ್ಯೋತಕವು. ಶ್ರೀಮಂತರು ಬಡವರೆಂಬ ಭೇದವನ್ನು ಮಣ್ಣು ಗೂಡಿ ಸುವದು ನಮ್ಮ ಕಷ್ಟವು. ಕಲ್ಲಾ, ನಾ ಸತ್ತರೂ ನನ್ನ ಪ್ರಾಣವು ಪ್ರತಿ ಯೊಬ್ಬ ಬಡವನ ಜೀವನದಲ್ಲಿ, ಅವನ ವಿಚಾರ ತರಂಗಗಳಲ್ಲಿ ಸುಳಿದು ಅವನ ಜೀವನದ ವೃತ್ತಿಯನ್ನೇ ಬದಲು ಮಾಡುವದು. ನನ್ನಂತಹ ಮಲ್ಲೇ ಶಿಯರು ಸಾವಿರಾರು ಜನರು ಮಣ್ಣುಪಾಲಾಗಬೇಕು. ಇದೇ ಕಲ್ಕಿ ಅವತಾರದ ಪ್ರಾರಂಭ.

ಭೂಮಿಯು ಬಡವರ ಕುಂದಗಳಿಂದ ತುಂಬಬೇಕು. ಬಡವರ ಅಸ್ಥಿ ಪಂಜರಗಳು ಸಿರಿವಂತರ ಮನೆಮಾರಿನಲ್ಲಿ ಅಲೆದಾಡಬೇಕು. ದಂಡಗಳು

ಉರಳಾಡಬೇಕು ; ಕುಂಡಗಳು ಆಕಾಶಕ್ಕೆ ಹಾರಬೇಕು ; ಮಕ್ಕಳು ಪಟಪಟನೆ ಕಾಲನ ದವಡಿಯಲ್ಲಿ ಸಿಲುಕಿ ಮಡಿಯಬೇಕು. ಬಡವರ ಹೆಂಡಂದಿರು ಮುಂಡೆಯರಾಗಿ ಶೋಕಿಸುತ್ತ ಮಣ್ಣುಪಾಲಾಗಬೇಕು. ಬೀದಿ ಬೀದಿಯಲ್ಲಿ ಉರಳಾಡುವ ಹೆಣಗಳನ್ನು ನಾಯಿ–ನರಿಗಳು ಹರಿದು ತಿನ್ನಬೇಕು. ಹದ್ದುಗಳು ನಭೋಮಂಡಲದಲ್ಲಿ ಹಾರುತ್ತ ಏರುತ್ತ ಭೂಮಿಗಳಿದು ಮಣ್ಣುಪಾಲಾದ ಹೆಣಗಳನ್ನು ಕಚ್ಚಿ ಕಚ್ಚಿ ಮಾಂಸದ ತುಣಕನ್ನು ಹಿಡಿದು ಕಲ್ಕಿ ಬಂದನೆಂದು ಬೆದರಿ ಆಕಾಶಕ್ಕೆ ಹಾರುವವು. ನಮ್ಮೆಲ್ಲರ ರುಂಡಗಳನ್ನು ಮಾಲೆಯನ್ನಾಗಿ ಮಾಡಿಕೊಂಡು ತನ್ನ ಕೊರಳಲ್ಲಿ ಧರಿಸಿ, ಆಸೇತುಹಿಮಾಚಲದಿಂದ ಉರಳಾಡುವ ಡೌಗಿಗಳನ್ನು ತನ್ನ ಹರಿವಾಣವನ್ನು ಮಾಡಿಕೊಂಡು, ಕಲ್ಕಿಯು ಬಡವರು ಸಿರಿಮಂತರೆಂಬ ಭೇದವನ್ನು ನಾಶಮಾಡಲು ಅವತಾರ ಮಾಡುವನು. ಅವನೇ ನಮ್ಮ ಗತಿ. ಬಡವರ ಕಷ್ಟವನ್ನು ಬಿಡಿಸಿ ನೆಮ್ಮದಿಯನ್ನುಂಟು ಮಾಡುವವನೇ ಆ ಕಲ್ಕಿಯು. ವೇದಕಾಲದ ಆರ್ಯಾವರ್ತವನ್ನು ಮರಳಿ ಮಾಡುವವನೇ ಆ ಕಲ್ಕಿಯು. ಬರಲಿ ಕಲ್ಕಿ ; ಕಲ್ಲಾ, ನಮ್ಮ ಪ್ರಾಣಹೋದರೂ ಚಿಂತೆಯಿಲ್ಲ.

**ಕಲ್ಲ** :—ಮಲ್ಲೇಶೀ, ಬಹಳ ಮಾತಾಡಬೇಡ. ಏನ ಮಲ್ಲೇಶಿ, ಸಾಯುವ ಕಾಲಕ್ಕ ದೊಡ್ಡ ಶಾಣ್ಯಾ ಆದಂಗ ಕಾಣ್ತದ ಇಷ್ಟು ಮಾತಾಡ್ತಿ ಅಂದ್ಮ್ಯಾಲೆ ?

**ಮಲ್ಲೇಶಿ** :—( ನೆರಳುತ್ತ ) ಏನ ಮಾತಾಡ್ತಿ, ಕಲ್ಲ. ಯವ್ವಾ ಎದಿ ! ನೋವು ! ಒಲ್ಲೆಪ್ಪಾ ಈ ಜನ್ಮ.

**ಚಿನ್ನಮ್ಮ** :— ಮ…ಲ್ಲೇ…ಶೀ…ಬಂ…ತು.

**ಮಲ್ಲೇಶಿ** :—(ನೆರಳುತ್ತ, ಎದೆಯನ್ನು ಸವರುತ್ತ ಅವಳ ಹತ್ತರ ಹೋಗುವನು. ) ಚಿ…ನ್ನೀ ( ಎಂದು ಬಿಕ್ಕುವನು. )

**ಚಿನ್ನಮ್ಮ :—** ( ಚೀರುತ್ತಾ ) ಯ…ವ್ವಾ… ಬಂದ ಕರ್ರನ್ನ ಮನಸ್ಯಾ-( ಸುಂದಳಾಗುವಳು. )

**ಕಲ್ಲ :—** ಮಲ್ಲಾ, ( ಎಂದು ಎಬ್ಬಿಸಲು ಪ್ರಯತ್ನ ಮಾಡುವನು ಉತ್ತರವೇ ಇಲ್ಲ. ಚಿನ್ನಮ್ಮನ ಹತ್ತರ ಹೋಗಿ "ಚಿನ್ನಮ್ಮ ಚಿನ್ನಮ್ಮ, ಎಂದು ಕೆಳಗೆ ಬಗ್ಗಿ ಕೂಗುವನು. ಯಪ್ಪಾ ಏನ ನಮ್ಮ ನಶೀಬಾ ಎಂದು ತಿರುಗುವಷ್ಟರಲ್ಲಿ ತೆಗೆದಿಟ್ಟ ಕಿಡಕಿಯೊಳಗಿಂದ ಸುಯ್ಯೆಂದು ಒಂದು ಗುಂಡು ಬಂದು ಅವನಿಗೆ ಬಡೆಯುವದು.

ಯ….. ವ್ವಾ……ಸ……ತ್ತೆ…

**ಕಲ್ಕಿ…ಯಪ್ಪಾ**

**ಎರಡನೆಯ ಪ್ರವೇಶ ಮುಗಿದುದು.**